ನಾಯಕರಾಗಿ, ಹಾಗೂ ಶ್ರೀ ಎಲ್.ಆರ್. ಶಿವರಾಮೇಗೌಡ ಉಪನಾಯಕರಾಗಿ ಮನ್ನಡೆ ನೀಡುತ್ತೇನೆ.

ಉಪಾಧ್ಯಕ್ಷರು : ಈಗ ಸದನವು ಮುಂದುವರೆದು ಮತ್ತೆ 2-30 ಗಂಟೆಗೆ ಸೇರುತ್ತದೆ.

(ಸಭೆಯು 1-44ಕ್ಕೆ ಮುಕ್ತಾಯಗೊಂಡಿತ್ತು. ಮತ್ತೆ 2-30 ಗಂಟೆಗೆ ಸಭೆಯು ಸಮಾವೇಶಗೊಳ್ಳುವುದು.)

(ಸದನವು ಪುನಃ ಮಧ್ಯಾಹ್ನ 2 ಗಂಟೆ 55 ನಿಮಿಷಕ್ಕೆ ಸಮಾವೇಶಗೊಂಡಿತು.)

(ಅಧ್ಯಕ್ಷರಾದ ಶ್ರೀ ರಮೇಶ್‌ಕುಮಾರ್‌ರವರು, ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ. ವಿಶೇಷವಾಗಿ ಕಾನೂನು ವ್ಯವಸ್ಥೆ ಬಗ್ಗೆಮತ್ತು ಕೋ-ಆಪರೇಟಿವ್ ಇಲಾಖಾ ವತಿಯಿಂದ, ಪೀನಲ್ ಇಂಟರೆಸ್ಟ್ ಮತ್ತು ಬಡ್ಡಿಯನ್ನು ಮಾಫಿ ಮಾಡುವುದರ ಬಗ್ಗೆ, ಕೃಷ್ಣ ಬೇಸಿನ್ ಡೆವಲಪ್‌ಮೆಂಟ್ ಅಥಾರಿಟಿ ಬಗ್ಗೆ ಹಾಗೂ ನಮ್ಮ ಫಾರಿನ್ ಇನ್‌ವೆಸ್ಟ್‌ಮೆಂಟ್, ಏನು ಇಂಡಸ್ಟ್ರೀಗಳಲ್ಲಿ, ಈ ಇಲಾಖೆಗಳಲ್ಲಿ, ಹೊರದೇಶದ ಬಂಡವಾಳವನ್ನು ತಂದು ಹೂಡುತ್ತಿದ್ದಾರೆ. ಇದಕ್ಕೆ ಒಂದು ಸಮಿತಿಯನ್ನು ರಚನೆ....

ಶ್ರೀ ಜಿ.ಎಸ್. ಶಿವನಂಜಪ್ಪ : ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಯಾರೂ ಮಂತ್ರಿಗಳೇ ಇಲ್ಲ, ಮಾನ್ಯ ಖರ್ಗೆಯವರಂಥ ಹಿರಿಯ ಸದಸ್ಯರು ಮಾತನಾಡುವಾಗ, ಮಂತ್ರಿಗಳು ಯಾರೂ ಇಲ್ಲದೆ, ಈ ಸದನವನ್ನು ಇಷ್ಟು ಲಘುವಾಗಿ ತೆಗೆದುಕೊಂಡರೆ, ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು : ಮಾನ್ಯ ಗೃಹಮಂತ್ರಿಗಳಾದ ಸಿಂಧ್ಯರವರು ಇದ್ದಾರೆ. ಹಿರಿಯ ಸದಸ್ಯರಾದ ನೀವು ಇದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಇಲ್ಲದೇ ಇದ್ದರೂ ಕೂಡ, ನಾವು ಏನು ಹೇಳಿ ಹೋಗಬೇಕೋ ಅದನ್ನು ಹೇಳಿ ಹೋಗುತ್ತೇನೆ, ಆ ಮಾತು ಬೇರೆ. ಆದರೆ, ಅಧ್ಯಕ್ಷರೇ, ತಮಗೆ ಗೊತ್ತಿದೆ. ಈ ಸರ್ಕಾರ ಹುಟ್ಟಿ ಇನ್ನೂ 15 ದಿವಸಗಳಾಗಿಲ್ಲ. ಅಷ್ಟರಲ್ಲಿಯೇ ಈ ಪರಿಸ್ಥಿತಿಯಾದರೆ, ಇನ್ನು 5 ವರ್ಷ ಹೀಗೆಯೇ ನಡೆದುಕೊಂಡು ಹೋದರೆ, ಯಾವ ರೀತಿಯಾಗಿ ಆಡಳಿತ ನಡೆಸುತ್ತಾರೆ? ಮಂತ್ರಿಗಳು ಸದನದಲ್ಲಿ ಕುಳಿತುಕೊಳ್ಳಬೇಕು, ನೋಡಬೇಕು, ಕಲಿಯಬೇಕು ಎನ್ನುವ ಅಭಿಪ್ರಾಯ ಇಲ್ಲದೇ ಇದ್ದರೆ ಹೇಗೆ?

ಒಬ್ಬ ಮಾನ್ಯ ಸದಸ್ಯರು : ಮಂತ್ರಿಮಂಡಲದ ವಿಸ್ತರಣೆ ವಿಷಯಕ್ಕೆ ಹೋಗಿರಬಹುದು....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :ವಿಸ್ತರಣೆ, ಕನಿಷ್ಟ ಪಕ್ಷ ಏಪ್ರಿಲ್‌ವರೆಗೆ ಕಡಿವಾಣ ಇದೆ, ಏಪ್ರಿಲ್ ಆದ ಮೇಲೆ ನೋಡೋಣ. ಮಂತ್ರಿಮಂಡಲದ ವಿಸ್ತರಣೆಯನ್ನು ಏಪ್ರಿಲ್ ಮತ್ತು ಮೇನಲ್ಲಿ ಮಾಡುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ, ನಾವು ಧರಣ ಮಾಡುತ್ತೇವೆ, ನೀವು ಬರೀ ಹುಡುಪೇಟೆ ಮಾಡಿಕೊಂಡು ಹೋಗುತ್ತಿದ್ದೀರಿ, ಅದಕ್ಕೆ ಭಯ ಆಗಿದೆ. ಮತ್ತೆ ಬೇರೆ ಏನೂ ಇಲ್ಲ, ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ತಾವು ಮಾಡಿದ್ದೀರಿ.

ನಾನು ಇದರ ಬಗ್ಗೆ ಹೇಳಿದ್ದೇನೆ. ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಹೈಪವರ್ ಕಮಿಟಿ ರಚನೆ ಮಾಡಿದರೆ, ಅದು ಪ್ರಯೋಜನವಾಗುವುದಿಲ್ಲ. ಏಕೆಂದರೆ, ಅವರಿಗೆ

ಸಾಕಷ್ಟು ಸಮಯವನ್ನು ಕೊಡುವುದಕ್ಕಾಗುವುದಿಲ್ಲ. ಅನೇಕ ಕೈಗಾರಿಕೋದ್ಯಮಿಗಳು ಏನು ಬರುತ್ತಾರೆ, ಅವರವರ ಕಂಪನಿಗಳಿಂದ ಪ್ರತಿನಿಧಿಗಳಾಗಿ, ಇವರು ಕನ್‌ನ್ಸೇಷನ್ ಬಗ್ಗೆ ಮಾತನಾಡುವಾಗ ಸಾಕಷ್ಟು ಸಮಯವನ್ನು ಕೊಡಬೇಕಾಗುತ್ತದೆ. ಅದಕ್ಕಾಗಿ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಈ ಕಮಿಟಿಯನ್ನು ಇಟ್ಟರೆ, ಯಾವ ಪ್ರಾಜೆಕ್ಟ್ ಕೂಡ ಕ್ಲಿಯರ್ ಮಾಡುವುದಕ್ಕಾಗುವುದಿಲ್ಲ. ಅಂದರೆ, ಅವರು ಸಮರ್ಥರಲ್ಲ ಎಂದು ನಾನು ಹೇಳುತ್ತಿಲ್ಲ. ಸಮಯದ ಅಭಾವದಿಂದ, ವಿಳಂಬವಾಗುತ್ತದೆ. ಇದನ್ನು ತಿಳಿದುಕೊಂಡೇ ಹಿಂದಿನ ಸರ್ಕಾರ ಸಂಬಂಧಪಟ್ಟ ಕೈಗಾರಿಕಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕಮಿಟಿಯನ್ನು ರಚನೆ ಮಾಡಲಾಗಿತ್ತು. ನೂರು ಕೋಟಿಗಿಂತಲೂ ಹೆಚ್ಚು ಬಂಡವಾಳವನ್ನು ಹೂಡತಕ್ಕ ಕಂಪನಿಗಳೇನಿವೆ, ಇಂತಹ ಪ್ರಾಜೆಕ್ಟ್‌ಗಳಿಗೆ ಮಂತ್ರಿಗಳು ಅಧ್ಯಕ್ಷರು ಮತ್ತು 50 ಕೋಟಿಯೊಳಗೆ ಇರತಕ್ಕ ಪ್ರಾಜೆಕ್ಟ್‌ಗಳಿಗೆ ಮಂತ್ರಿಗಳು ಅಧ್ಯಕ್ಷರು ಮತ್ತು ಸಂಬಂಧಪಟ್ಟ ಸೆಕ್ರೆಟರಿಯವರು ಅಧ್ಯಕ್ಷರು ಮತ್ತು ಸಮಿತಿಯಲ್ಲಿರಿತಕ್ಕಂಥವರು ಲೇಬರ್ ಸೆಕ್ರೆಟರಿ, ಫೈನಾನ್ಸ್ ಸೆಕ್ರೆಟರಿ, ರೆವಿನ್ಯೂ ಸೆಕ್ರೆಟರಿ ಇವರೆಲ್ಲರೂ ಇದ್ದರು. ಇವರೆಲ್ಲರೂ ಇದ್ದು ಕ್ಲಿಯರ್ ಮಾಡುತ್ತಿದ್ದರು. ಕೊನೆಗೆ ಇಷ್ಟು ಅಪ್ರೂವಲ್ ಆದ ಮೇಲೂ ಕೂಡ, ಸಚಿವ ಸಂಪುಟಕ್ಕೆ ಬರುತ್ತದೆ, ಪುನಃ ಸಚಿವ ಸಂಪುಟದ ಅಪ್ರೂವಲ್ ಆಗಬೇಕು. ಏಕೆಂದರೆ, ಟ್ಯಾಕ್ಸೇಷನ್ ಮ್ಯಾಟರ್ ಇದೆ, ವಿದ್ಯುಚ್ಛಕ್ತಿ ವಿಷಯ ಇದೆ, ನೀರಿನ ವಿಷಯ ಇಧೆ, ಜಮೀನಿನ ವಿಷಯ ಇರುತ್ತದೆ ಅಥವಾ ಅನೇಕ ರಿಯಾಯಿತಿ ಕೊಡತಕ್ಕಂಥಾದ್ದು ಇರುತ್ತದೆ. ಹೀಗಾಗಿ ಹಾಲಿ ಇರತಕ್ಕಂಥ ವ್ಯವಸ್ಥೆಯನ್ನು ಡಿಸ್ಟರ್ಬ್ ಮಾಡಿದರೆ, ಖಂಡಿತವಾಗಿಯೂ ಕರ್ನಾಟಕ ರಾಜ್ಯಕ್ಕೆ ಬರತಕ್ಕಂಥ ಅಥವಾ ಯಾರೂ ಬಂಡವಾಳವನ್ನು ಮಾಡಬೇಕೆಂಬ ಇಚ್ಛೆ ಇದೆ, ಅವರು ಬರುವುದಕ್ಕೆ ಸಾಧ್ಯವಿಲ್ಲ. ಹಿಂದೆ, ನಾವು ಇದನ್ನು ಏಕೆ ಸರಳಗೊಳಿಸಿದ್ದೇವೆ, ಮತ್ತು ಏಕೆ ಈ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಎಂದರೆ, ಅನೇಕ ಕಡೆ ಸಿಂಗಲ್ ವಿಂಡೋ ಏಜೆನ್ಸಿ ಎಂದು ಮಾಡಿ, ಇದರ ಕೆಳಗೆ ಎಲ್ಲರೂ ಬಂದು, ಇದನ್ನು ಕ್ಲಿಯರ್ ಮಾಡಬೇಕೆಂದು ಮಾಡಿದ್ದು - ಏಕೆಂದರೆ, ತಕ್ಷಣ ರಿಲೀಫ್ ಸಿಗಬೇಕು. ತಕ್ಷಣ ಕೆಲಸವಾಗಬೇಕು. ಮತ್ತು ಅವರು ಹೇಳಿದ್ದನ್ನು ತಕ್ಷಣ ಅನುಕೂಲ ಮಾಡಿಕೊಟ್ಟರೆ, ಸಾಕಷ್ಟು ಕಾರ್ಖಾನೆಗಳು ಬರುವುದಕ್ಕೆ ಸಾಧ್ಯವಿದೆಯೆಂದು ಮಾಡಲಾಯಿತು. ಇದನ್ನು ಮಾಡಿದ ಮೇಲೆ ಕೆಲವು ಉದ್ಯಮಿಗಳವರು ಬಂದಿದ್ದಾರೆ, ಮತ್ತೆ ಕೆಲವರು ಬರತಕ್ಕಂಥ ಹಂತದಲ್ಲಿದ್ದಾರೆ ಮತ್ತೆ ಕೆಲವು ಒಪ್ಪಿಗೆ ಕೊಟ್ಟಿವೆ. ಮುಂದೆ, ಪ್ರಯತ್ನವನ್ನು ನಡೆಸಿದ್ದಾದರೆ, ಇನ್ನೂ ಹೆಚ್ಚಿನ ರೀತಿಯಲ್ಲಿ ಬರತಕ್ಕಂಥ ವಾತಾವರಣ ಕರ್ನಾಟಕ ರಾಜ್ಯದಲ್ಲಿ ಇದೆ. ಅದಕ್ಕಾಗಿಯೇ ನಾನು ಹಿಂದೆಯೇ ಹೇಳಿದ್ದೇನೆ. ಗುಜರಾತ್ ಮತ್ತು ಮಹಾರಾಷ್ಟ್ರ ಆದಮೇಲೆ, ಹೊರಗಿನ ದೇಶದವರು ತಮ್ಮ ಬಂಡವಾಳವನ್ನು ಹೂಡುವುದಕ್ಕೆ ಇಚ್ಛೆ ಪಡುತ್ತಾರೆಂದರೆ, ಅದು ಕರ್ನಾಟಕ ರಾಜ್ಯದಲ್ಲಿ. ಇದು ಅವಕಾಶ ಸಿಕ್ಕದೇ ಇದ್ದರೆ ಅಥವಾ ಪ್ರೋತ್ಸಾಹ ಸಿಗದೇ ಇದ್ದರೆ, ಕರ್ನಾಟಕದಿಂದ ಬೇರೆ ಕಡೆಗೆ ಹೋಗತಕ್ಕಂಥ ಪ್ರಯತ್ನ ಮಾಡುತ್ತಾರೆ. ಇವತ್ತು ತಾವು ಕಮಿಟಿಯನ್ನು ಹೊಸದಾಗಿ ರಚನೆ ಮಾಡುತ್ತೇವೆಂದು ಹೇಳಿದ್ದೀರಿ. ನನಗೆ, ಇದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಏಕೆಂದರೆ, ಪುನಃ ಸಚಿವರ ಸಂಪುಟಕ್ಕೆ ಬರಬೇಕಾಗಿರುವುದರಿಂದ, ಸಬ್ ಕಮಿಟಿ ಮುಂದೆ ಇಟ್ಟು ಸಾಕಷ್ಟು ವಿಳಂಬವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ. ತಾವು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಮತ್ತು ಇದನ್ನು ಕೈಬಿಡಬೇಕು. ಕೇವಲ ಹಿಂದಿನ ಸರ್ಕಾರ ಮಾಡಿದ್ದು ಎನ್ನುವ ದೃಷ್ಟಿಯಿಂದ, ಹಾಲಿ ಇರುವುದನ್ನು ಹಿಂತೆಗೆದುಕೊಂಡು, ಈ ರೀತಿ ಮಾಡಿದರೆ, ಸರಿಯಾಗುವುದಿಲ್ಲವೆನ್ನುವ ಮಾತನ್ನು ಹೇಳಬಯಸುತ್ತೇನೆ.

30ಪರ್ಸೆಂಟ್ ಮೀಸಲಾತಿಯನ್ನು ನಾವು ಅಸೆಂಬ್ಲಿ ಮತ್ತು ಕೌನ್ಸಿಲನಲ್ಲಿ ಮಹಿಳೆಯರಿಗೆ ಕೊಡುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ. ಇದನ್ನು ನಿಮ್ಮ ಕಡೆ ಕನಸ್ಸಿನ ಗಂಟು ಅಂತಾರೋ ಅಥವಾ ಕನ್ನಡಿಯೊಳಗಿನ ಗಂಟು ಅಂತಾರೋ ಹಾಗೆ

ಇರತಕ್ಕಂಥಾದ್ದು. ಎಲ್ಲಿಯವರೆಗೂ ನಮ್ಮ ಸಂವಿಧಾನದಲ್ಲಿ ತಿದ್ದುಪಡಿಯಾಗುವುದಿಲ್ಲೋ ಎಲ್ಲಿಯವರೆಗೂ ನಮ್ಮ ಪೀಪಲ್ಸ್ ಪ್ರೆಸೆಂಟೇಷನ್ ಆಕ್ಟ್‌ನಲ್ಲಿ ತಿದ್ದುಪಡಿಯಾಗುವುದಿಲ್ಲ ಅಲ್ಲಿಯವರೆಗೆ ಆ ತಿದ್ದುಪಡಿಯಾಗಬೇಕಾದರೂ ಕೂಡ ಅನೇಕ ರಾಜ್ಯಗಳು ಒಪ್ಪಬೇಕು ಇದು ಆದ ನಂತರ ತೆಗೆದುಕೊಳ್ಳತಕ್ಕಂಥ ವಿಷಯ. ಆದರೆ ತರಾತುರಿಯಾಗಿ ನೀವು ಇಂತಹ ಪ್ರಸ್ತಾವನೆಯನ್ನು ಮಾಡಬಹುದು. ಆದರೆ ಕಾರ್ಯಕ್ರಮ ಮಾಡುವುದಕ್ಕೆ ಟೈಮ್ ಬೇಕಾಗುತ್ತದೆ. ಆದರೆ ಇಂತಾದ್ದು ಹೇಳುವುದಕ್ಕೆ ಸಮಯಬೇಕಾಗಿಲ್ಲ ಅಥವಾ ಖರ್ಚು ಇಲ್ಲ ಎಂದು ಹೇಳಿಬಿಡುವುದು, ಯಾವುದು ಪ್ರೋಗ್ರಾಂ ಮಾಡಬೇಕೆಂದು ನಿಮ್ಮ ಮನಸ್ಸಿನಲ್ಲಿದೆ ಅಥವಾ ಯಾವುದು ನಿಮ್ಮ ಮ್ಯಾನುಫ್ಯಾಸ್ಟೋದಲ್ಲಿ ಹೇಳಿಕೊಂಡದ್ದಿರಿ ಅದನ್ನು ನೀವು ಹೇಳುವುದಕ್ಕೆ ನಮಗೆ ಇನ್ನು ಸಾಕಷ್ಟು ಸಮಯ ಬೇಕು. ಫೆಬ್ರವರಿ ಇದೆ ಮಾರ್ಚಿ ಇದೆ ಇನ್ನೊಂದು ನಮಗೆ ಆಗುತ್ತದೆ ಎಂದು ಹೇಳಿದರೆ ಇದರಿಂದ ಏನು ಪ್ರಯೋಜನ ಇದೆ?

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಈಗ ಅವರು ಮಹಿಳೆಯ ಮೀಸಲಾತಿ ಬಗ್ಗೆ ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದಲ್ಲಿ ಅವರದ್ದೇ ಸರ್ಕಾರ ಇದೆ, ನಾವು ಇಲ್ಲಿಂದ ಒತ್ತಡ ತರುತ್ತಿದ್ದೇವೆ ಅದಕ್ಕೆ ನೀವು ನಿಮ್ಮ ಕಡೆಯಿಂದ ಒತ್ತಡ ತನ್ನಿ. ಅದು ಬಿಟ್ಟು ನೀವು ಪ್ರಸ್ತಾಪ ಮಾಡದ್ದೇ ತಪ್ಪು ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ನಾನು ಹೇಳಿದ್ದುದು ಯಾವುದು ನಿಮ್ಮ ಕೈಯಲ್ಲಿ ಆಗುತ್ತದೆ ಅದನ್ನು ಹೇಳಿ. ಅದು ಬಿಟ್ಟು, ಸುಮ್ಮನೆ ಅರ್ಜಿ ಹಾಕುತ್ತೇವೆಂದು ಹೇಳಿದರೆ ಅರ್ಜಿ ಹಾಕಿ ಕುಳಿತುಕೊಳ್ಳಿ. ಇದರಲ್ಲಿ ನಮೂದು ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ, ನಿಮ್ಮ ನೀತಿ ಏನು ನಿಮ್ಮ ಕಾರ್ಯಕ್ರಮ ಏನು ಅದನ್ನು ನಮೂದು ಮಾಡಬೇಕಾಗಿತ್ತು. ಇದರಿಂದ ಏನೂ ಸಾರ್ಥಕವಾಗಲಾರದು. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ತಾವು ಕೊಟ್ಟಿದ್ದೀರಿ ಅಂದಾಗ, ಇದೇ ವರ್ಷ ಮಾಡುತ್ತೇವೆಂದು ಹೇಳಿದಂತೆ ಆಗುತ್ತದೆ. ಇನ್ನೊಂದು ಸಲ ಜಂಟೀ ಅಧಿವೇಶನ ಸೇರಿದಾಗ ಅಥವಾ ರಾಜ್ಯಪಾಲರ ಭಾಷಣದಲ್ಲಿ ಇದು ಇರುವುದಿಲ್ಲ. ಏಕೆಂದರೆ, ರಿಪೀಟ್ ಮಾಡುವುದಕ್ಕೆ ಬರುವುದಿಲ್ಲ. ಅಂದರೆ, ಯಾವ ವರ್ಷ ಏನನ್ನು ನೀವು ನಮೂದು ಮಾಡುತ್ತೀರಿ, ಅದರ ಬಗ್ಗೆ ಹೇಳಿದ್ದರೆ ಸರಿ ಇತ್ತು.

ಮತ್ತು ನಾನು ಈಗಾಗಲೇ ಹೇಳಿದಂತೆ ನೀವು ಏನು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ. ಆಶ್ವಾಸನೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಪಟ್ಟು ಅದರ ಬಗ್ಗೆ ಹೇಳಿದ್ದರೆ ಚೆನ್ನಾಗಿತ್ತೋ ಹೊರತಾಗಿ ಸಂಬಂಧ ಇರಲಾರದೇ ಆಗದೇ ಇರಲಾರದಂತಹ ಮಾತಿಗೆ ಹೆಚ್ಚಿನ ಒತ್ತುಕೊಟ್ಟು ಇದನ್ನು ಮಾಡುತ್ತೇವೆಂದು ಹೆಣ್ಣು ಮಕ್ಕಳನ್ನು ಖುಷಿ ಪಡಿಸುವುದಕ್ಕೋಸ್ಕರ ಇದನ್ನು ಮಾಡಿದ್ದೇವೆಂದರೆ ಅದು ನಿಮ್ಮ ಅನಿಸಿಕೆ. ಇದೇ ಮಾತನ್ನು ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ತಿನಲ್ಲಿ ಮಾಡುತ್ತೇವೆ ಅದು ನಮ್ಮ ಕೈಯಲ್ಲಿ ಇದೆ ಅಂತ ಹೇಳಿದ್ದರೆ ನನಗೆ ಅಭ್ಯಂತರ ಇರಲಿಲ್ಲ. ಆಗದೇ ಇರತಕ್ಕಂಥಾದ್ದನ್ನು ಹೇಳಿಕೊಂಡು ಹೋದರೆ ಯಾರೂ ಕೂಡ ಒಪ್ಪತಕ್ಕಂಥಾದ್ದು ಅಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ಪ್ರೊಪೋಸ್ ಮಾಡಿದಂತಹ ಉದಾಸಿಯವರೇ ಇಲ್ಲ, ಅವರು ನಮಗೆ ಟೀಕೆ ಮಾಡಿದರು ಹೊರಟು ಹೋದರು. ಸೆಕೆಂಡ್ ಮಾಡಿದವರು ಹೊರಟು ಹೋದರು. ಏಕೆಂದರೆ ಅವರು ಹೇಳಿದ ಮೇಲೆ ಕೆಲವು ಮಾತುಗಳನ್ನು ನಾವು ಕೂಡ ಹೇಳಬೇಕಾಗುತ್ತದೆ. ಉತ್ತರ ನೀವೇ ಕೊಡಬಹುದು ನಿಮ್ಮ ಸರ್ಕಾರದ ವತಿಯಿಂದ ಅವರು ಹೇಳಿದ್ದಾರೆ. ಏಕೆಂದರೆ ಅವರಿಗೂ ಕ್ರೆಡಿಟ್ ಕೊಡಿ ನಿಮಗೆ ಬೆಂಬಲ ಕೊಡುವುದಕ್ಕೆ ಅವರು ನಿಂತಿದ್ದಾರೆ. ಉತ್ತರ ಸರ್ಕಾರವೇ ಕೊಡಬೇಕು ನಾವು ನಿಮ್ಮ

ಕಡೆಯಿಂದಲೇ ಅಪೇಕ್ಷೆ ಪಡುತ್ತೇವೆ. ಈ ಲಂಬಾಣಿ ತಾಂಡಗಳ ಬಗ್ಗೆ ನಾವೇ ಮಾಡುತ್ತೇವೆ ಹಿಂದಿನ ಸರ್ಕಾರ ಏನೂ ಮಾಡಿಲ್ಲ ಅಂತ ಹೇಳಿದರು.

ಮಾನ್ಯ ಜಾಲಪ್ಪನವರು ಬೇಕಾದರೆ ಫೈಲ್ ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. ನಾನು ಅನೇಕ ಜಿಲ್ಲೆಗಳಿಂದ ಪ್ರೊಪೋಸಲ್ಸ್‌ನ್ನು ತರಿಸಿ ಎಲ್ಲಿ 400ಕ್ಕಿಂತ ಹೆಚ್ಚಿನ ಜನಸಂಖ್ಯೆ ಇರತಕ್ಕಂಥ ತಾಂಡಗಳು ಇವೆ ಮತ್ತು 3 ಕಿಲೋಮೀಟರ್, 2 ಕಿಲೋಮೀಟರ್ ಅಥವಾ ಅದಕ್ಕೆ ಏನು ನಿಗಧಿಪಡಿಸಿದ್ದಾರೆ, ಆ ನಿಗಧಿಪಡಿಸಿದಂತಹ ದೂರಕ್ಕೆ ಒಳಪಟ್ಟಂತಹ ತಾಂಡಗಳು ಮತ್ತು ಆ ತಾಂಡಗಳಿಗೆ ಇರತಕ್ಕಂಥ ಸರ್ವೆ ನಂಬರ್ಸ್ ಎಷ್ಟು ಇರಬೇಕು ಎನ್ನತಕ್ಕಂಥಾದ್ದು ಇದು ಎಲ್ಲಾ ಕೂಡ ತರಿಸಿಕೊಂಡು ಈಗಾಗಲೇ ಕೆಲವು ಕಡೆ ಪ್ರಿಲಿಮಿನರಿ ನೋಟಿಫಿಕೇಶನ್ ಆಗಿದೆ. ನನಗನಿಸಿದ ಮಟ್ಟಿಗೆ ಫೈನಲ್ ನೋಟಿಫಿಕೇಷನ್‌ಗೆ 200 ಕ್ಕಿಂತ ಮೇಲೆ ಬಂದಿವೆ. ಇದನ್ನು ಮಾಡಬೇಕಾದರೂ ಕೂಡ ನಾನು ಆಸಕ್ತಿ ವಹಿಸಿದ್ದರೂ ಕೂಡ ಸುಮಾರು 200-300 ಮಾಡಬೇಕಾದರೂ ಕೂಡ ಸಾಕಷ್ಟು ಸಮಯ ಹಿಡಿಯಿತು. ಏಕೆಂದರೆ ಅದಕ್ಕೆ ಮ್ಯಾಫ್ ಮಾಡಬೇಕು ಸರ್ವೆ ನಂಬರ್ಸ್‌ನಿಗಧಿ ಮಾಡಬೇಕು ರೆವಿನ್ಯೂ ವಿಲೇಜ್ ಅಂತ ನೀವು ಕರೆಯಬೇಕು ಅಂದಾಗ ಎಷ್ಟು ಸರ್ವೆ ನಂಬರ್ಸ್ ಆ ಹಳ್ಳಿಗೆ ಕೊಡಬೇಕು ಮತ್ತು ಅದರ ಡಿಸ್ಟೆನ್ಸ್ ಎಷ್ಟು ಪಾಪ್ಯುಲೇಷನ್ ಏನು ಇವೆಲ್ಲವನ್ನೂ ತಿಳಿದುಕೊಂಡು ಮಾಡಬೇಕಾದರೆ ಸಾಕಷ್ಟು ಸಮಯ ಹಿಡಿಯುತ್ತದೆ. ಆದರೂ ಕೂಡ ನಾನು ಪ್ರಾಮಾಣಿಕ ಪ್ರಯತ್ನ ಮಾಡಿ ಇವತ್ತು ಕೆಲವು ಹಳ್ಳಿಗಳನ್ನು ತಾಂಡಗಳನ್ನು ಹಳ್ಳಿಗಳೆಂದು ಪರಿವರ್ತನೆ ಮಾಡುವುದಕ್ಕೆ ಈಗಾಗಲೇ ಫೈನಲ್ ನೋಟಿಫಿಕೇಷನ್‌ಗೆ ಬಂದು ಹೋಗಿದೆ.

ಒಬ್ಬ ಮಾನ್ಯ ಸದಸ್ಯರು : ಇದರಲ್ಲಿ ಕೆಲವು ಬಡಾವಣೆಗಳು ಸೇರುತ್ತವೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬಡಾವಣೆಗಳು ಬರುವುದಿಲ್ಲ. ಇದರಲ್ಲಿ ಗೊಲ್ಲರ ಹಟ್ಟಿ, ತಾಂಡ, ವಡ್ಡರ ಹಟ್ಟಿ, ವಾಡಿ ಇವೆಲ್ಲವೂ ಕೂಡ ಬರುತ್ತವೆ. ಕೆಲವು ಕಡೆ ವಡ್ಡರ ಹಟ್ಟಿ ಕೆಲವು ಕಡೆ ಗೊಲ್ಲರ ಹಟ್ಟಿ ಎಂದು ಇರುತ್ತವೆ. ಅದರ ಪಾಪ್ಯುಲೇಷನ್ ಕೂಡ 400-500 ಪಾಪ್ಯುಲೇಷನ್ ಇದ್ದರೆ, ರೆವಿನ್ಯೂ ಪರಿಗಣಿಸಿ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಕಾರ್ಯಕ್ರಮವನ್ನು ಮುಂದುವರಿಸಬೇಕಾಗಿದೆ. ಏಕೆಂದರೆ ಇದು ತಕ್ಷಣ ಒಂದು ದಿವಸದಲ್ಲಿ ಮುಗಿಯತಕ್ಕಂಥಾದ್ದು ಅಲ್ಲ. ಒಂದು ಗೆಜಿಟ್ ನೋಟಿಫಿಕೇಷನ್ ಆಗಬೇಕು ಅದಕ್ಕೆ ಅಬ್ಜೆಷನ್ ಕಾಲ್‌ಫರ್ ಮಾಡಬೇಕು ಅಂದರೆ, ಸುಮಾರು 3 ತಿಂಗಳು 4 ತಿಂಗಳು 2 ತಿಂಗಳು 30 ದಿವಸ ಎಂದು ಒಂದು ಟೈಮ್ ಲಿಮಿಟ್ ಹಾಕಿರುತ್ತಾರೆ. ಇವತ್ತು ಒಂದು ತಾಂಡವನ್ನು ಹಳ್ಳಿ ಎಂದು ಘೋಷಣೆ ಮಾಡುತ್ತೇವೆಂದರೆ ಅದಕ್ಕೆ ಯಾರಾದರೂ ಅಬ್ಜೆಷ್‌ನ್ಸ್ ಇದ್ದರೆ ಅವರೂ ಕೂಡ ಬಂದು ಕೊಡಬಹುದು, ಎಂದು ಅಬ್ಜೆಷ್‌ನ್ಸ್ ಕಾಲ್‌ಫಾರ್ ಮಾಡಬೇಕಾಗುತ್ತದೆ. ಈ ದಿಸೆಯಲ್ಲಿ ಕೆಲವು ಕಾರ್ಯಗಳು ನಡೆದಿದೆ. ಅದನ್ನು ನೀವು ಮುಂದುವರಿಸಬೇಕಾಗಿದೆ. ಆಗ ಮಾತ್ರ ಆ ಜನರಿಗೆ ಸಿಗಬೇಕಾದ ಸೌಲಭ್ಯಗಳು ಸಿಗುತ್ತವೆ. ಏಕೆಂದರೆ ಒಂದು ಸಾರಿ ರೆವಿನ್ಯೂ ವಿಲೇಜ್ ಎಂದು ಕನ್‌ವರ್ಟ್ ಆದ ಮೇಲೆ ನಾವು ಹಳ್ಳಿಗೋಸ್ಕರ ಯಾವುದೇ ಒಂದು ಯೋಜನೆ, ಒಂದು ಸ್ಕೀಮ್ ಅನೌನ್ಸ್ ಮಾಡಿದರೆ ಆ ಹಳ್ಳಿಗಳಿಗೂ ಹೋಗುತ್ತವೆ. ಇಲ್ಲದೇ ಇದ್ದರೆ, ಒಂದು ಹಳ್ಳಿಗೆ ಮೂರು ನಾಲ್ಕು ಹ್ಯಾಮ್ಲೆಟ್ಸ್ ಎಂದು ಇರುತ್ತವೆ.

ಹಳ್ಳಿಗೆ ಎಂದು ಕಾರ್ಯಕ್ರಮ ಹೋದ ಮೇಲೆ ಆ ಹಳ್ಳಿಗೆ ಮಾತ್ರ ಹೋಗುತ್ತವೆ ಮತ್ತು ಪ್ರತ್ಯೇಕವಾಗಿ ಆ ತಾಂಡಗೋಸ್ಕರ, ಗೊಲ್ಲರ ಹಟ್ಟಿಗೋಸ್ಕರ, ವಡ್ಡರ ಹಟ್ಟಿಗೋಸ್ಕರ ನಾವು ಪ್ರಯತ್ನ ಮಾಡಬೇಕಾಗುತ್ತದೆ. ಒಂದು ಸೊಸೈಟಿ ಇರಬಹುದು ಅಥವಾ ಒಂದು ಪಂಚಾಯತಿ ಆಫೀಸ್ ಇರಬಹುದು. ಎಲೆಕ್ಟಿಸಿಟಿ ಇರಬಹುದು

ಅಥವಾ ಕುಡಿಯುವ ನೀರಿನ ವ್ಯವಸ್ಥೆ ಇರಬಹುದು. ಅದಕ್ಕಾಗಿ ಈ ಒಂದು ಸೌಲಭ್ಯಗಳಿಂದ ವಂಚಿತರಾದಂತಹ ಜನ ಏನು ಇದ್ದಾರೆ, ತಾಂಡಗಳು ಏನಿವೆ ಅವರಿಗೋಸ್ಕರ ಲಾಭ ಆಗುತ್ತದೆ. ಆ ಒಂದು ಕಾರ್ಯವನ್ನು ಸ್ವಲ್ಪ ತ್ವರಿತಗತಿಯಿಂದ ಮುಂದುವರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನೊಂದು ಬಹಳ ವಿಶೇಷವಾಗಿ ಹಿಂದೆ ನೀವು ಕೂಡ ಪ್ರಯತ್ನ ಪಟ್ಟಿರಿ. ಹಿಂದೆ ಇದರ ಬಗ್ಗೆ ಸಾಕಷ್ಟು ಚರ್ಚೆ ಆಯಿತು. ಅದರ ಬಗ್ಗೆ ಪರ ಮತ್ತು ವಿರೋಧ ಆಗಿ ಅದು ಅಲ್ಲಿಗೆ ನಿಂತು ಹೋಗಿತ್ತು ಕಾರ್ಯಕ್ರಮ. ಅದೇನೆಂದರೆ ರೆಗ್ಯುಲರೈಸೇಷನ್ ಆಫ್ ಲ್ಯಾಂಡ್ ಎಲ್ಲೆಲ್ಲಿ ಅಕ್ರಮವಾಗಿ ಭೂಮಿಯನ್ನು ಸಾಗುವಳಿ ಮಾಡಿದ್ದರು ಅದನ್ನು ಸಕ್ರಮಗೊಳಿಸಬೇಕು ಎನ್ನುವ ಕಾರ್ಯಕ್ರಮಕ್ಕೆ ಸಾಕಷ್ಟು ಬೇಡಿಕೆ ಬಡವರಿಂದ ಇತ್ತು.

ಸುಮಾರು 7 ಲಕ್ಷ ಅರ್ಜಿಗಳು ಇವತ್ತಿನ ದಿವಸ ಬಂದಿದೆ. ಅಂಥ ಭೂಮಿಗಳನ್ನು ಸಕ್ರಮಗೊಳಿಸುವುದಕ್ಕೆ ನಾವು ತಿದ್ದುಪಡಿ ತಂದು ಅರ್ಜಿಗಳನ್ನು ಕಾಲ್ಛರ್ ಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಿ, ಅನೇಕ ಕಡೆ ಸಕ್ರಮಗೊಳಿಸತಕ್ಕ ಕೆಲಸ ಮಾಡಿದ್ದೇವೆ. ನನ್ನ ಒಂದು ಅನಿಸಿಕೆ ಪ್ರಕಾರ ನನ್ನಲ್ಲಿರತಕ್ಕ ಮಾಹಿತಿಯ ಪ್ರಕಾರ ಸುಮಾರು 4-5 ಲಕ್ಷ ಅರ್ಜಿಗಳು ತೀರ್ಮಾನ ಆಗಿವೆ. ಇನ್ನು ಸುಮಾರು 3-4 ಲಕ್ಷ ಅರ್ಜಿಗಳು ಇವೆ, ಅವುಗಳನ್ನು ಕೂಡ ಮಾಡಬೇಕಾಗಿದೆ ಎನ್ನುವಂಥ ಪ್ರಶ್ನೆ ತಮ್ಮ ಮುಂದೆ ಇದೆ. ಅದರಲ್ಲಿ ಕೆಲಸ ಕಡೆ ದೂರುಗಳು ಕೂಡ ಬರುತ್ತವೆ, ಏಕೆಂದರೆ ಒಂದೇ ಜಮೀನಿನಲ್ಲಿ 3-4 ಜನ ಅರ್ಜಿಗಳು ಹಾಕಿದಂತಹವರು ಇದ್ದಾರೆ. ಆಗ ನಾವು ನಿಜವಾದಂತಹವರು ಯಾರು ಎನ್ನುವುದನ್ನು ಕಂಡು ಹಿಡಿದು ಅವರನ್ನೇ ರೆಗ್ಯುಲರೈಸ್ ಮಾಡತಕ್ಕಂಥಾದ್ದು, ಒಂದು ವೇಳೆ ತಪ್ಪಾಗಿ ಯಾರಿಗಾದರೂ ರೆಗ್ಯುಲರೈಸ್ ಆದರೂ ಕೂಡ ಅದಕ್ಕೆ ಡೆಪ್ಯುಟಿ ಕಮೀಷನರ್ ಹತ್ತಿರ ಅಪೀಲ್ ಪ್ರಾವಿಷನ್ ಇಟ್ಟಿದ್ದೇವೆ. ಅದಕ್ಕೆ ಬೇಕಾದರೆ ನೀವು ಕಾಲ್‌ಫಾರ್ ಮಾಡಿ ಅಂತಹ ಕೇಸಸ್‌ನ್ನು ನೀವು ನೇರವಾಗಿ ರೆಫರ್ ಮಾಡಿ ಅಂತಹ ಕೇಸಸ್ ಅನ್ನು 30 ದಿವಸದಲ್ಲಿ ತೀರ್ಮಾನ ಮಾಡಬೇಕೆಂದು ಹೇಳಬೇಕು. ಇಲ್ಲದಿದ್ದರೆ, ಅನೇಕ ಜನ ಪ್ರಭಾವದಿಂದ, ಒತ್ತಡದಿಂದ ಹಣ ಕೊಟ್ಟು ಮಾಡಿಸಿಕೊಳ್ಳುತ್ತಾರೆ ಎಂದು ತಿಳಿದುಕೊಳ್ಳಿ ಅಂತಹವರು ಏನು ಮಾಡುತ್ತಾರೆ ಅಂದರೆ ಆ ಕೇಸ್ ಫೇವರಬಲ್ ಡೆಪ್ಯುಟಿ ಕಮೀಷನರ್ ಬರುವವರೆಗೂ ಪೆಂಡಿಂಗ್ ಇಡಿಸುತ್ತಾರೆ. ಅಥವಾ ತಮಗೆ ಅನುಕೂಲವಾಗುವಂತಹ ವಾತಾವರಣ ಬರುವವರೆಗೂ ಅದನ್ನು ಪೆಂಡಿಂಗ್ ಇಡಿಸುತ್ತಾರೆ.

ಈ ರೀತಿ ಹೇಳಿ ಅಪೀಲ್ ಇಡತಕ್ಕಂಥವರು ಇದ್ದಾರೆ. ಅಂಥಹ ಕಡೆಗಳಲ್ಲಿ ನೀವು ಸಮಯ ನಿಗದಿ ಮಾಡಿ. ಅದನ್ನು ಟೈಮ್‌ಬೌಂಡ್ ಕಾರ್ಯಕ್ರಮವಾಗಿ ಮಾಡಿಕೊಳ್ಳಿ. ಇಷ್ಟು ದಿವಸಗಳೊಳಗೆ ಇಂತಿಷ್ಟು ಅಪೀಲ್‌ಗಳು ಡಿಸ್ಪೋಸ್ ಆಗಲೇ ಬೇಕೆಂದು ಮಾಡಿ. ಪ್ರತೀ ತಿಂಗಳು 100-200-300 ಕೇಸ್‌ಗಳು ಇತ್ಯರ್ಥವಾಗುವ ಹಾಗೆ ನೋಡಿಕೊಳ್ಳಿ. ಹೀಗೆ ಅಲ್ಲಿರತಕ್ಕಂಥ ಕೇಸ್‌ಗಳ ಮೇಲೆ ನೀವು ಟಾರ್ಗೆಟ್ ಫಿಕ್ಸ್ ಮಾಡಿದರೆ ನೀವು ಖಂಡಿತವಾಗಿ ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಬಹುದು. ಹಾಗೆಯೇ ಇಂಥ ಕಾರ್ಯಕ್ರಮಗಳನ್ನು ಬಡವರಿಗೆ ಕೊಡಬೇಕೆಂಬ ಉದ್ದೇಶವು ನಮಗೂ ಮತ್ತು ನಿಮಗೂ ಕೂಡ ಇತ್ತು, ಅದನ್ನು ಪೂರ್ತಿಯಾಗಿ ಮಾಡಬೇಕು. ಅದಕ್ಕಾಗಿ ದಯಮಾಡಿ ಈ ಕೆಲಸ ಮುಂದುವರಿಯುವಂತೆ ತಾವು ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತೀರಿ ಎನ್ನತಕ್ಕಂಥ ಭರವಸೆಯನ್ನು ವ್ಯಕ್ತಪಡಿಸುತ್ತೇನೆ. ಇನ್ನೂ ಉಳಿದಂಥ ಅನೇಕ ಪ್ರಗತಿಪರವಾದಂಥ ಕಾರ್ಯಕ್ರಮಗಳು ಇವೆ. ಯಾವುದೋ ಒಂದೆರಡು ಕಾರ್ಯಕ್ರಮಗಳಲ್ಲಿ ದೋಷವಿದೆಯೆಂದು ಹೇಳಿ ಎಲ್ಲವನ್ನು ದೂಷಿಸುವುದಲ್ಲ. ತಲೆ ನೋವು ಇದೆಯೆಂದು ಹೇಳಿ ತಲೆ ಕಡಿದುಕೊಳ್ಳುವುದಕ್ಕೆ ಆಗುವುದಿಲ್ಲ. ತಲೆ

ನೋವಿಗೆ ಔಷಧಿಯನ್ನು ಕಂಡುಹಿಡಿಯಬೇಕು. ಅದನ್ನು ಬಿಟ್ಟು ಎಲ್ಲವೂ ಸರಿಯಲ್ಲ ಎಂದು ಹೇಳುವುದೂ ಕೂಡ ಸರಿಯಲ್ಲ. ಈಗ ಆಶ್ರಯ ಯೋಜನೆ ಮಾಡಿದ್ದು ಸರಿಯಲ್ಲವೆ? ಅದರ ಮೂಲಕ ಲಕ್ಷಾಂತರ ಜನರಿಗೆ ಸೈಟ್‌ಗಳನ್ನು ಕೊಡತಕ್ಕಂಥ ವ್ಯವಸ್ಥೆಯಾಗಿತ್ತು. ಎಲ್ಲೋ ಒಂದೆರಡು ಕಡೆಗಳಲ್ಲಿ ಆಗಿಲ್ಲವೆಂದರೆ ಅದೇ ವಿಚಾರವನ್ನು ಬೊಟ್ಟು ಮಾಡಿ ತೋರಿಸುವುದು ಮಾಡುತ್ತಾರೆಯೇ ವಿನಹ 100ಕ್ಕೆ 90ರಷ್ಟು ಜನರಿಗೆ ಲಾಭವಾಗಿರುವುದನ್ನು ಯಾರೂ ಹೇಳುವುದಿಲ್ಲ. ನಾವು ಆಶ್ರಯ ಮನೆಗಳನ್ನು ಮಾಡುವ ಕೆಲಸವನ್ನು ಹೌಸಿಂಗ್ ಬೋರ್ಡ್‌ಗೆ ಕೊಟ್ಟಾದ ಮೇಲೆ ಅದು ಸರಿಯಾಗಿಲ್ಲವೆಂದು ಗೊತ್ತಾದ ಮೇಲೆ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್ಸ್ ಜಿಲ್ಲಾಪರಿಷತ್ ಮೂಲಕ ಕಟ್ಟಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಯಾವುದು ಸರಿಯಾಗಿದೆ ಅದನ್ನು ಹೇಳುವುದಕ್ಕೆ ಯಾರೂ ತಯಾರಾಗಿಲ್ಲ. ಅನೇಕ ಶಾಸಕರು ಕೂಡ ತಮ್ಮ ಕ್ಷೇತ್ರಗಳಲ್ಲಿ ಇದರ ಲಾಭವನ್ನು ಪಡೆದುಕೊಂಡಿದ್ದಾರೆ, ಅವರೂ ಕೂಡ ಟೀಕೆ ಮಾಡುತ್ತಾರೆ. ಟೀಕೆಗೋಸ್ಕರ ಟೀಕೆ ಮಾಡುತ್ತೇವೆ ಎಂದು ಹೇಳಿದರೆ ಅದಕ್ಕೆ ನನ್ನ ವಾದ ಇಲ್ಲ. ಆದರೆ ಒಳ್ಳೆಯ ಕಾರ್ಯವನ್ನು ಒಳ್ಳೆಯದು ಎಂದು ಹೇಳತಕ್ಕಂಥಾದ್ದನ್ನು ಕೂಡ ಕಲಿಯಬೇಕು.

+ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಖರ್ಗೆಯವರು ಕಂದಾಯ ಸಚಿವರಾಗಿ ಕೆಲಸ ಮಾಡಿರತಕ್ಕಂಥವರು ಆ ಸಂದರ್ಭದಲ್ಲಿ ತಾವುಗಳು ಆಶ್ವಾಸನೆ ಕೊಟ್ಟ ಎಲ್ಲಾ ಕಾರ್ಯಕ್ರಮಗಳು ಆಗಿಲ್ಲವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ನಾವು ಮಾಡಿದ ಕಾರ್ಯಕ್ರಮಗಳು ಯಾವ್ಯಾವು ಎಷ್ಟೆಷ್ಟು ಜಾರಿಯಾಗಿವೆ ಎಂಬ ಬಗ್ಗೆ ಫೈಲ್‌ಗಳನ್ನು ತರಿಸಿಕೊಂಡು ನೋಡಿ. ನಾವು ಏನೇನು ಮಾಡಿದ್ದೇವೆ ಎಂಬುದನ್ನು ನೋಡಿ. ಸುಮ್ಮನೆ ಬೇರೆಯವರ ಮುಂದೆ ಹೇಳಿದ ಹಾಗೆ ನನ್ನ ಮುಂದೆ ಹೇಳಬೇಡಿ. ನಿಮ್ಮ ಸಚಿವರು ಕೂಡ ಇಲ್ಲಿದ್ದಾರೆ, ಅವರು ನೋಡಿ ಹೇಳಲಿ. ಹಾಗೆ ಒಂದೂ ಆಗಲಿಲ್ಲ ಅಂದರೆ ನಾನು ರಾಜಿನಾಮೆ ಕೊಡುತ್ತೇನೆ. ಸುಮ್ಮನೆ ನೀವು ಎಲ್ಲರಿಗೂ ಹೆದರಿಸಿದ ಹಾಗೆ ನನಗೂ ಹೆದರಿಸಲಿಕ್ಕೆ ಹೋಗಬೇಡಿರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ನಮ್ಮ ಶಾಸನಸಭೆಗೆ ಒಂದು ಆಸ್ತಿ ಇದ್ದ ಹಾಗೆ. ಆದ್ದರಿಂದ ತಾವುಗಳು ರಾಜಿನಾಮೆ ಕೊಡತಕ್ಕಂಥಾದ್ದು ಒಳ್ಳೆಯದಲ್ಲ.

ಅಧ್ಯಕ್ಷರು : ನಾವು ಕೂಡ ವಾಟಾಳ್ ನಾಗರಾಜ್‌ರವರ ಸಲಹೆಯನ್ನು ಒಪ್ಪುತ್ತೇವೆ. ನೀವು ಲಕ್ಷ್ಮಯ್ಯನವರ ಮೇಲೆ ಸಿಟ್ಟಾಗಿ ರಾಜೀನಾಮೆ ಕೊಡುತ್ತೇವೆ ಅಂದರೆ ನಮಗೆ ಎಷ್ಟು ನಷ್ಟವಾಗುತ್ತದೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಆಸಕ್ತಿ ವಹಿಸಿ ಕೆಲಸವನ್ನು ಮಾಡಿದ್ದೇವೆ ಎಂಬುದು ಕೆಲವರಿಗೆ ಗೊತ್ತಿದೆ. ಗೊತ್ತಿದ್ದೂ ಹೀಗೆ ಮಾತನಾಡಿದರೆ ಸ್ವಲ್ಪ ನೋವು ಉಂಟಾಗುತ್ತದೆ. ಈಗ ರೆಗ್ಯುಲರೈಸೇಷನ್ ಬಗ್ಗೆಯಾಗಲೀ, ತಾಂಡಾಗಳ ಬಗ್ಗೆಯಾಗಲೀ, ಪಾಸ್‌ಬುಕ್‌ಗಳ ಕುರಿತಾಗಲೀ, ಎಸ್‌ಸಿ ಎಸ್‌ಟಿಯವರ ಬಗ್ಗೆ ಸರಕಾರದವರೇ ಸ್ವತಃ ಹಣ ಕೊಟ್ಟು ಸದಸ್ಯರನ್ನಾಗಿ ಮಾಡತಕ್ಕಂಥಾದ್ದು ಮುಂತಾಗಿ ಹೀಗೆ ಮಾಡಿದ್ದನ್ನು ಮಾಡಿದ್ದೇವೆ ಎಂದು ಹೇಳಿದರೂ ಕೂಡ ನೀವು ಅದನ್ನು ಸಹಿಸಿಕೊಳ್ಳುವುದಿಲ್ಲವೆಂದರೆ ನಿಮ್ಮ ಮೆಂಟಾಲಿಟಿ ಹೇಗಿದೆ ನೋಡಿ? ಇದಕ್ಕೆ ನಾವೇನು ಹೇಳಬೇಕು? ಅದೇ ರೀತಿಯಲ್ಲಿ ಆರಾಧನ ಸ್ಕೀಮ್ ಇದೆ. ಇದರ ಬಗ್ಗೆ ನಾನು ವೈಯಕ್ತಿಕವಾಗಿ ಹೇಳುವುದಾದರೆ ಆ ಕುರಿತು ನನ್ನ ವಿಚಾರ ಬೇರೆ ಇದೆ. ನಾನದರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಏಕೆಂದರೆ ನಾನು ನಾಮಿನೇಷನ್ ಫೈಲ್

ಮಾಡುವಾಗಲೂ ಕೂಡ ಯಾವುದೇ ನಂಬಿಕೆಗೆ ಒಳಗಾಗಿಲ್ಲ. ಇಲ್ಲಿಯವರೆಗೆ ನಾನು ಐದು ಸಲ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ, ಆರನೆಯ ಸಲ ಶಾಸಕನಾಗಿದ್ದೇನೆ, ಅಥವಾ ಯಾವುದೇ ನಾಮಿನೇಷನ್ ಫೈಲ್ ಮಾಡುವಾಗಲೂ ಕೂಡ ನಾನು ಎಂದೂ ಮಹೂರ್ತ ಇತ್ಯಾದಿಗಳನ್ನು ನೋಡಿದ್ದುದು ಇಲ್ಲ, ನಮ್ಮ ಎಲ್ಲಾ ಮುಖಂಡರುಗಳು ಸಾರ್ವಜನಿಕರು ಹೇಳಿದಾಗ ಆ ಕೆಲಸವನ್ನು ಮಾಡುತ್ತಿದ್ದನು. ಅವರು ಇವೊತ್ತು ಬೇಡ ಅಂದರೆ ಬೇಡ. ಹಾಗೆ ನಾನು ನನಗೆ ತಿಳಿದುಕೊಂಡು ಬಂದಿರತಕ್ಕಂಥ ಒಂದು ವಿಚಾರವನ್ನು ಇಟ್ಟುಕೊಂಡು ಬಂದಿದ್ದೇನೆ. ನಾನೇನು ದೊಡ್ಡ ವಿಚಾರವಂತ ವ್ಯಕ್ತಿ ಎಂದು ಹೇಳುತ್ತಿಲ್ಲ, ಒಟ್ಟಾರೆ ನನಗೆ ತಿಳಿದಿರತಕ್ಕಂಥ ಒಂದು ರೀತಿನೀತಿಯಲ್ಲಿ ನಡೆದುಕೊಂಡು ಬಂದಿದ್ದೇವೆ. ಆದರೆ ಈ ಒಂದು ಸ್ಕೀಮ್ ಮಾಡಿದ ಉದ್ದೇಶ ಏನೆಂದರೆ, ಆ ಗುಡಿ-ಗುಂಡಾರಗಳಿಗೆ ಒಂದು ಶೋಭೆ ತರಬೇಕು ; ಅಥವಾ ಅಲ್ಲಿರತಕ್ಕಂಥ ಮರಗಮ್ಮ ದುರ್ಗಮ್ಮ ಕಾಳಮ್ಮ ಶಿವ-ಪಾರ್ವತಿ, ಹನುಮಾನ್, ಹೀಗೆ ಅಲ್ಲಿರತಕ್ಕಂಥ ದೇವರಿಗೆ ಶುದ್ಧ ಮಾಡಬೇಕು ಅಥವಾ ಅಲ್ಲಿ ಸರಿಯಾಗಿ ನೋಡಿಕೊಂಡು ಇರಬೇಕೆಂಬ ಒಂದೇ ಭಾವನೆ ಅಲ್ಲ.

ನಾವು ಮಾಡಿದ ಉದ್ದೇಶವೆಂದರೆ ಹಳ್ಳಿಗಳಲ್ಲಿ ಅನೇಕ ಕೇರಿಗಳಲ್ಲಿ ಕೂಡುವುದಕ್ಕೂ ಕೂಡ ಒಂದು ಸ್ಥಾನ ಇಲ್ಲ, ಯಾವ ಜನ ಒಂದು ಜೋಪಡಿಯಲ್ಲಿ ಗುಡಿಸಲಿಲ್ಲ ಇರುತ್ತಾರೋ ಸರ್ವೇಸಾಮಾನ್ಯವಾಗಿ ಒಂದು ಕಡೆ ಸೇರಬೇಕೆಂದರೂ ಸಹಿತ ಅವರಿಗೆ ಸ್ಥಾನ ಇಲ್ಲ, ಆದರೆ ಅವರಿಗೆ ಆ ದೇವರ ಮೇಲೇ ಭಕ್ತಿ ಶ್ರದ್ಧೆ ಇನ್ನೂ ಇದೆ. ನಾವು ಎಷ್ಟೊಂದು ಹೇಳುತ್ತೇವೆ, ಒಂದು ಊರಿಗೆ ಶಾಲೆ ತೆಗೆದುಕೊಳ್ಳಿರರಪ್ಪ ಏನಾದರೂ ಮಾಡಿ ಕೊಡಿಸಿಕೊಡುತ್ತೇವೆ ಎಂದರೆ ಇಲ್ಲ ನಮಗೆ ಗುಡಿ ದುರಸ್ತಿ ಮಾಡಿಸಿಕೊಡಿ ಎಂದು ಹೇಳುತ್ತಾರೆ. ನಿಮಗೂ ಕೂಡ ಅದರ ಅನುಭವ ಇದೆ, ಚುನಾವಣೆ ಸಮಯದಲ್ಲಿ, ನೀವು ಹೋಗುವ ಎಲ್ಲಾ ಶಾಸಕರಿಗೂ ಅದರ ಅನುಭವ ಇದೆ, ನಮಗೇನೂ ಬೇಡಿರಿ ನಮ್ಮೂರಿಗೊಂದು ದೇವಸ್ಥಾನ ಕಟ್ಟಿಸಿಕೊಡಿ, ನಾವು ಮತ ಕೊಡುತ್ತೇವೆ ಅಂತಾರೆ. ನಾವು ವೋಟ್‌ಗೋಸ್ಕರ ಮಾಡಲಿಲ್ಲ, ಇದು ನಾನು ಇದ್ದಾಗಲೇ ಪ್ರಾರಂಭವಾದದ್ದು. ಒಂದು ಕಮ್ಯುನಿಟಿ ಹಾಲ್ ಟೈಪ್‌ನ ಅಥವಾ ಒಂದು ಪ್ರಾರ್ಥನ ಮಂದಿರ ಇರಬೇಕು. ದೇವಸ್ಥಾನಕ್ಕೆ ಎಷ್ಟರಮಟ್ಟಿಗೆ ಬೆಲೆ ಕೊಡಬೇಕೋ ಸಹಾಯ ಮಾಡಬೇಕೋ ಅಷ್ಟು ಮಾಡಿ ಉಳಿದದ್ದನ್ನು, ಸಾಮಾನ್ಯ ಜನ ಒಂದು ಕಡೆ ಸೇರುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ದೃಷ್ಟಿಯಿಟ್ಟುಕೊಂಡು ಆ ಯೋಜನೆ ತಂದದ್ದು. ಆ ಯೋಜನೆ ಲಾಭ ಸಾಕಷ್ಟು ಜನ ತೆಗೆದುಕೊಂಡಿದ್ದಾರೆ.

ರಿಪೇರಿ ಮಾಡುವುದಾಗಲಿ ಹೊಸ ಕಟ್ಟಡ ಕಟ್ಟಿಸುವುದಾಗಲೀ, ಮಾಡುವುದಾಗಲೀ, ಇವೆಲ್ಲವನ್ನೂ ಮಾಡಿದ್ದೇವೆ. ಕಮ್ಯುನಿಟಿ ಹಾಲ್ ಅದರಲ್ಲಿ ಎಲ್ಲಿ ತಪ್ಪಾಗಿದೆಯೋ ಅದನ್ನು ಒಪ್ಪಿಕೊಳ್ಳೋಣ. ನೂರು ಮಾಡಿದ್ದರಲ್ಲಿ ಎರಡು ಬಿದ್ದಿರಬಹುದು, ಎರಡು ಮಿಸ್ಯೂಜ್ ಆಗಿರಬಹುದು ಆದರೆ ನೂರಕ್ಕೆ 90 ಪರ್ಸೆಂಟ್ ಯಶಸ್ವಿಯಾಗಿ ನಡೆದ ಈ ಕಾರ್ಯಕ್ರಮಗಳನ್ನೂ ಬಿಟ್ಟು ಮಾಡತಕ್ಕ ಪ್ರಯತ್ನ ತಾವು ಮಾಡಬಾರದು. ಸ್ವಾಮಿ, ಇದರಲ್ಲಿ ಹೆಸರು ಬದಲಾವಣೆ ಮಾಡಿದರೆ ಏನಿಲ್ಲ. ಇದು ಇವತ್ತೇ ಅಲ್ಲ, ಅಧ್ಯಕ್ಷರೇ ತಮಗೆ ಗೊತ್ತಿದೆ, ದೇವರಾಜ ಅರಸರ ಕಾಲದಲ್ಲಿ ಕೂಡ ಆಶ್ರಯ ಸ್ಕೀಮಿಗೆ ಪೀಪಲ್ಸ್ ಹೌಸಿಂಗ್ ಸ್ಕೀಂ ಎನ್ನುತ್ತಿದ್ದರು. ಶ್ರೀ ಬಸವಲಿಂಗಪ್ಪನವರು ನಗರಾಭಿವೃದ್ಧಿ ಸಚಿವರಾಗಿದ್ದಾಗ ಈ ಯೋಜನೆ ಮಾಡಿದರು. ಅದು ಇಂಗ್ಲೀಷ್‌ನಲ್ಲಿದೆ ಎಂದು ಜನತಾ ಸರ್ಕಾರ ಬಂದಮೇಲೆ ಜನತಾಮನೆ ಎಂದು ಮಾಡಿದಿರಿ, ಮುಂದೆ ಅದು ಆಶ್ರಯ ಎಂದಾಯಿತು, ಇನ್ನೊಬ್ಬರು ಬಂದು ಇನ್ನೊಂದು ಕೊಡಬಹುದು, ಮತ್ತೆ ನೀವೇನು ಮಾಡುತ್ತೀರೋ ಗೊತ್ತಿಲ್ಲ. ಅದರ ಉದ್ದೇಶ ಏನಿದೆ ಚೆನ್ನಾಗಿದೆ. ಅಂತಹ ಕಾರ್ಯಕ್ರಮಗಳಿಗೆ ನೀವು ಹೆಚ್ಚಿನ ಬೆಂಬಲ ಸಹಾಯ ಸಹಕಾರ ಕೊಡಿ.

ಚುನಾವಣೆಗೆ ಬಂದಾಗ ಜನ ಯಾರಿಗೆ ವೋಟ್ ಕೊಡುತ್ತಾರೋ ನೋಡೋಣ. ಈ 5 ವರ್ಷ ನಿಮಗೆ ಕಳಿಸಿದ್ದು ಕೆಲಸ ಮಾಡುವುದಕ್ಕೆ, ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದಕ್ಕೆ ಕಳಿಸಿದ್ದಾರೆಯೇ ಹೊರತು ನೀವೇನು ಮಾಡಿದಿರಿ ನಾವೇನು ಮಾಡಿದಿರಿ ಎಂದು ಕೇಳುವುದಕ್ಕಲ್ಲ.

ಶ್ರೀ ಎನ್.ಎಂ. ನಬಿ (ಸಣ್ಣ ಕೈಗಾರಿಕೆಗಳ ಸಚಿವರು) : ಅಧ್ಯಕ್ಷರೇ, ಅವರ ಆಶ್ರಯ ಸ್ಕೀಂ ಬಹಳ ಒಳ್ಳೆಯದೆಂದೇ ಅದನ್ನು ನಾವೂ ಮುಂದುವರೆಸಬೇಕೆಂದಿದ್ದೇವೆ. ಹಿಂದೆ ಇವರು ವಿತರಣೆ ಮಾಡಿರುವ ಪದ್ಧತಿ ಸರಿಯಾಗಿಲ್ಲ ಎಂಬುದಕ್ಕೆ ವಿರೋಧ ಇತ್ತು ಅಷ್ಟೇ. ಏಕೆಂದರೆ ಎಲ್ಲಾ ಬರೀ ಶ್ರೀಮಂತರಿಗೇ ಕೊಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋಡೋಣ ನೀವು ಯಾರ್‍ಯಾರಿಗೆ ಕೊಡುತ್ತೀರಿ ಎಂಬುದನ್ನು ಅಧ್ಯಕ್ಷರೇ, ಇವತ್ತು ಅಸ್ತಿತ್ವದಲ್ಲಿರುವ ಕೆಲವು ಕಾರ್ಯಕ್ರಮಗಳನ್ನು ಜನಹಿತ ದೃಷ್ಟಿಯಿಂದ ಯಾವುದು ಒಳ್ಳೆಯದಿದೆ ಅವನ್ನು ಮುಂದುವರೆಸಿಕೊಂಡು ಹೋಗುವ ಅವಶ್ಯಕತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳಿ, ಇನ್ನೊಂದು, ನೀವು ಇವತ್ತು ಅನೇಕ ವೇಗ್ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿದ್ದೀರಿ. ನಾವು 30 ಪರ್ಸೆಂಟ್ ರಿಸರ್ವೇಷನ್ ಮಾಡುತ್ತೇವೆ, ಪವರ್ ಬಗ್ಗೆ ಕಾಸ್ಟ್‌ಬೇಸ್ಡ್ ಸ್ಲಬ್ಬರೇಟ್ ಹಾಕಿ ಬಂಪ್‌ಸೆಟ್ ಮೇಲೆ ವಸೂಲು ಮಾಡುತ್ತೇವೆಂದು ಹೇಳಿದ್ದೀರಿ, ಆದರೆ ನಿರ್ದಿಷ್ಟವಾಗಿ ಹೀಗೇ ಮಾಡುತ್ತೇವೆ, ಇಷ್ಟೇ ಮಾಡುತ್ತೇವೆ ಎಂದು ಹೇಳಿಲ್ಲ. ನಾನು ಕೇಳುತ್ತೇನೆ, ವೀಕರ್ ಸೆಕ್ಷನ್ಸ್ ಬಗ್ಗೆ ಶೆಡ್ಯೂಲ್ಡ್‌ಕ್ಯಾಸ್ಟ್ ಟ್ರೈಬ್ಸ್ ಬಗ್ಗೆ, ಬ್ಯಾಕ್‌ವರ್ಡ್ ಕ್ಯಾಸ್ಟ್ ಬಗ್ಗೆ ನಿಮ್ಮ ಹೊಸ ಕಾರ್ಯಕ್ರಮಗಳೇನು ಎಂದು ಇದರಲ್ಲಿ ಹೇಳಿಲ್ಲ. ಎಲ್ಲೋ ಒಂದು ಸರ್‌ಚಿನ್ಸ್ ಇದೆ. ಎಸ್‌ಸಿ ಎಸ್‌ಟಿ ಮತ್ತು ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಏನು ನಮೂದು ಮಾಡಿದ್ದೀರಿ ಎಂದರೆ......

My Government will strive zealously to safeguard and further improve the social and economic lives of the deprived and backward sections of the people of Karnataka.

3.25 ಪಿ.ಎಂ

ಇದು ಅವರ ಹೇಳಿಕೆ. ಅವರಿಗೆ ಹೊಸ ಕಾರ್ಯಕ್ರಮ ಬೇಕಲ್ಲಾ. ಹೆಣ್ಣುಮಕ್ಕಳ ಮೀಸಲಾತಿ ಬಗ್ಗೆ ಮಾತನಾಡಿದ್ದಾರೆ ಸಂತೋಷ. ಈ ಕೋಟ್ಯಾಂತರ ಜನ ಬಡವರೇನಿದ್ದಾರೆ, ಬಡತನ ರೇಖೆಯ ಕೆಳಗೆ ಇರತಕ್ಕಂತಹವರು ಅವರ ಬಗ್ಗೆ ನಿಮ್ಮ ಕಾರ್ಯಕ್ರಮವೇನು? ಇದರಲ್ಲಿ ಒಂದು ಮಾತೂ ಹೇಳಲಿಲ್ಲ. ನಾವು ಇಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ ಇಷ್ಟು ಮನೆಗಳನ್ನು ಮಾಡುತ್ತೇವೆ ಪಾವರ್ಟಿ ಲೈನ್ ಕೆಳಗಿರತಕ್ಕಂತಹವರಿಗೆ ಇಂತಹ ಸ್ಕೀಮ್ ತೆಗೆದುಕೊಳ್ಳುತ್ತೇವೆಂದು ಹೇಳಲಿಲ್ಲ. ಮೂನ್ಸ ಕಾಲಪ್ಪನವರು ಮಾತನಾಡುತ್ತಾ ಇದೊಂದೇ ಅಲ್ಲ ಇನ್ನು ಮುಂದೆ ಫೆಬ್ರವರಿ, ಮಾರ್ಚ್‌ನಲ್ಲಿ ಜಂಟಿ ಅಧಿವೇಶನ ಕರೆಯುತ್ತೇವೆ ಆ ಭಾಷಣದಲ್ಲಿ ಹೇಳುತ್ತೇವೆಂದು ಹೇಳಿದರು. ಈಗ ಇರತಕ್ಕಂತಹ ಕಾರ್ಯಕ್ರಮದಲ್ಲಿ ನಂಬಿಕೆ ಇಲ್ಲ ಅಂದರೆ 4 ತಿಂಗಳಲ್ಲಿ ಅಂದರೆ ಡಿಸೆಂಬರಿನಿಂದ ಮಾರ್ಚ್‌ವರೆಗೆ ಬಡವರಿಗಾಗಿ ಹಿಂದುಳಿದವರಿಗಾಗಿ ಹರಿಜನ ಗಿರಿಜನರಿಗಾಗಿ ನಿಮ್ಮ ಕಾರ್ಯಕ್ರಮಗಳೇನು ಇದೆ ಅದರ ಬಗ್ಗೆ ಏನು ಹೇಳುತ್ತೀರಿ? ಅದರ ಬಗ್ಗೆ ಇಲ್ಲಿ ಸ್ಪಷ್ಟವಾಗಿ ಇಲ್ಲ. ಇಂತಹ ಒಂದು ವೇಗ್ ಆದ ಹೇಳಿಕೆಯನ್ನು ಶಕ್ತಿ ಹೀನ, ರುಚಿಯಿರಲಾರದ, ಪ್ರೋತ್ಸಾಹವಿರಲಾರದ, ಜನರಿಗೆ ಪ್ರಯೋಜನವಿರಲಾರದಂತಹ ಭಾಷಣವನ್ನು ರಾಜ್ಯಪಾಲರ ಮುಖಾಂತರ, ಅವರ ಬಾಯಿಯಿಂದ ಹೇಳಿಸಿ ಈ ಜನರ ಕಲ್ಯಾಣ ಮಾಡುತ್ತೇವೆಂದು ಹೇಳುವುದು ಖಂಡಿತ ಸರಿಯಲ್ಲ. ತಮಗೆ ಆ ಜನರ ಬಗ್ಗೆ ಆಸಕ್ತಿ ಬಂದಿಲ್ಲವೆಂದು ತೋರಿಸುತ್ತದೆ. ಈ

ಜನರ ಬಗ್ಗೆ ವಿಚಾರ ಮಾಡುವುದಕ್ಕೆ ಸಮಯ ಸಿಗಲಿಲ್ಲ ಎಂದು ಹೇಳಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ದೀರ್ಘವಾದ ಉತ್ತರ ಕೊಡುತ್ತೇವೆಂದು ಹೇಳಿದ್ದಾರೆ. ಈ ಸದನದ ಗಮನಕ್ಕೆ ಕೆಲವು ವಿಚಾರಗಳನ್ನು ತಿಳಿಸಬೇಕೆಂದಿದ್ದೇನೆ. 1988-89 ಮತ್ತು 1993 ರಿಂದ 95 ರವರೆಗೆ ಎಷ್ಟು ನಾವು ಪ್ಲಾನ್ ಎಕ್ಸ್‌ಪೆಂಡಿಚರ್ ಮಾಡಿದ್ದೇವೆನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. 1988-89ರಲ್ಲಿ 883 ಕೋಟಿ 1989-90ರಲ್ಲಿ 1029 ಕೋಟಿ, 1990-91ರಲ್ಲಿ 1301 ಕೋಟಿ, 1992-93ರಲ್ಲಿ 2032 ಕೋಟಿ, 1993-94ರಲ್ಲಿ 3025 ಕೋಟಿ, ಇಲ್ಲಿಯವರೆಗೆ 3382 ಕೋಟಿ ಈ ರೀತಿಯಾಗಿ ಒಟ್ಟು ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು ಗೊತ್ತು ಮಾಡಿಕೊಂಡು ಬಂದಿದ್ದೇವೆ.

ಕರ್ನಾಟಕದ ಸಮಗ್ರವಾದ ಅಭಿವೃದ್ಧಿಯಾಗಿದೆಯೋ ಇಲ್ಲವೋ ಎನ್ನುವುದಕ್ಕೆ ಇದರ ಚಿತ್ರ ನಿಮಗೆ ಸಾಕಾಗುತ್ತದೆ. ಈಗ ಪವರ್ ಸೆಕ್ಟಾರ್‌ನಲ್ಲಾಗಲೀ ಇರಿಗೇಷನ್ ಸೆಕ್ಟಾರ್‌ನಲ್ಲಾಗಲೀ, ರೂರಲ್ ಡೆವಲಪ್‌ಮೆಂಟ್‌ನಲ್ಲಾಗಲೀ ಬೇರೆ ಕೃಷಿ ಸೆಕ್ಟಾರ್‌ನಲ್ಲಾಗಲೀ ಸಮಾಜಕಲ್ಯಾಣ ಸೆಕ್ಟಾರ್‌ನಲ್ಲಾಗಲೀ, ಈ ಎಲ್ಲಾ ಸೆಕ್ಟಾರ್‌ನಲ್ಲಿ ಯಾವ ರೀತಿಯಾದ ಪ್ಲಾನ್ ಎಕ್ಸ್‌ಪೆಂಡೀಚರ್ ಮಾಡಿದ್ದಾರೆನ್ನುವುದು ಇದರಲ್ಲಿ ಸಿಗುತ್ತದೆ. ಅದರ ಮೇಲೆ ಟೀಕೆ ಟಿಪ್ಪಣಿ ಮಾಡಬಹುದು. ಹಿಂದೆ ಸರಕಾರ ಕೆಲಸ ಮಾಡಲಿಲ್ಲ, ಬರೀ ದುಡ್ಡು ಲೂಟಿ ಹೊಡೆದರು ಎಂದು ಹೇಳುವಂಥ ಈ ಪ್ರಚಾರ ಏನು ಇದೆ ಇದನ್ನು ಬಿಡಿ. ತಾವು ಅಧಿಕಾರಕ್ಕೆ ಬಂದಿದ್ದೀರಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಗಿಲ್ಟಿ ಕಾನ್‌ಷಿಯಸ್ ಎಂದು ನಾನು ಹೇಳಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಗಿಲ್ಟಿ ಕಾನ್‌ಷಿಯಸ್ ಇಲ್ಲ. ನೀವೇನು ಅಪಪ್ರಚಾರ ಮಾಡಿ ಅಧಿಕಾರಕ್ಕೆ ಬಂದಿದ್ದೀರಿ. 4ರಿಂದ 40ಕ್ಕೆ ಬಂದಿದ್ದೀರಿ ಆ ಸೊನ್ನೆ ತೆಗೆದರೆ ಅದು ಅಲ್ಲಿಗೇ ಮತ್ತೆ ಬರುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಆ ರೀತಿ ಏಕೆ ಹೇಳುತ್ತೀರಿ ಅದಕ್ಕೆ 1 ಸೇರಿಸಿದರೆ 140 ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕಾಗಿ 83ರಲ್ಲಿ ಹೀಗೆ ಮಾಡಿದಿರಿ. ನಮಗೆ 18 ಬಂದಿದೆ ಎಂದು ಹೇಳಿ ಕುಣಿದು ಕುಣಿದು ಸಾಕಾಯಿತು. ಆಗ 4ಕ್ಕೆ ಬಂದಿರಿ ಪುನಃ 4ಕ್ಕೆ ಬಂದಿರಿ. ಈಗ ಏನೋ 40ಕ್ಕೆ ಬಂದಿದ್ದೀರಿ. ಸ್ವಲ್ಪ ಸಮಾಧಾನವಾಗಿರಿ. ಮುಂದೆ ನೋಡೋಣ. ಏನಾಗುತ್ತದೆ. ಈ ದೇಶದ ಜನರು ತೀರ್ಮಾನ ಮಾಡುತ್ತಾರೆ. ಆದರೆ ಅಪಪ್ರಚಾರ ಮಾಡುವುದು ಬೇಡ. ಸತ್ಯಾಂಶವನ್ನು ಹೇಳಿ. ಅದಕ್ಕಾಗಿ ಈ ಸತ್ಯಾಂಶವನ್ನು ತೆಗೆದುಕೊಂಡು ನಾವು ಆ ಹಾದಿಮೇಲೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್ : ಯಡಿಯೂರಪ್ಪನವರು ಸುಮ್ಮನೆ ಇದ್ದಾರೆ, ಅವರನ್ನು ರೇಗಿಸುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದಕ್ಕಾಗಿ ನಾನು ಇವತ್ತು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ಅವರು ತುಂಬಾ ನೊಂದು ಬೆಂದು ಸೊರಗಿ ಈ ಸ್ಥಿತಿಯಲ್ಲಿದ್ದಾರೆ. ನಾನು ಹೆಚ್ಚು ಅವರನ್ನು ಕೆಣಕುವುದಕ್ಕೆ ಇಷ್ಟಪಡುವುದಿಲ್ಲ.

ಅಧ್ಯಕ್ಷರು : ನೋವಿನಲ್ಲಿರುವವರಿಗೆ ನೋಯಿಸುವುದಿಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ಅವರು ಈ ಸ್ಥಿತಿಗೆ ಬಂದಿರುವುದಕ್ಕೆ ಕಾರಣ ಏನು ಎನ್ನುವುದನ್ನು ಅವರು ಹೇಳುತ್ತಿದ್ದಾರೆ. ನಾವು ಅಪಪ್ರಚಾರ ಮಾಡಿದೆವು ಎಂದು. ಕಳೆದ ಐದು ವರ್ಷದಲ್ಲಿ ಏನೇನು ಮಾಡಿದರು, ಅದನ್ನು ಮಾತ್ರ ಈ ರಾಜ್ಯದ ಮುಂದೆ ನಾವು ಇಟ್ಟಿದ್ದೇವೆ. ಅವರು ಭ್ರಷ್ಟಾಚಾರಗಳನ್ನು ಮಾಡಿಯೇ ಇಲ್ಲ, ಎನ್ನುವಂಥ ಮಾತುಗಳನ್ನು ಅವರು ಹೇಳಿದ್ದಾರೆ. ಸ್ವತಃ ವೀರಪ್ಪ ಮೊಯಿಲಿಯವರು ಮುಖ್ಯಮಂತ್ರಿಗಳಾಗಿದ್ದಾಗ ಭ್ರಷ್ಟಾಚಾರದ ಮೇಜರ್ ಆಪರೇಷನ್ ನಾನು ಮಾಡುತ್ತೇನೆಂದು ಹೇಳಿದ್ದುದು ಅವರು ಸುಳ್ಳು ಎಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಅಥವಾ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಭಾಷಣ. ನಿಮಗೆ ಅವಕಾಶ ಬಂದಾಗ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಎರಡನೆಯದು ಅದೇ ಕಾಂಗ್ರೆಸ್ಸಿನ ಮುಖ್ಯ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಭ್ರಷ್ಟಾಚಾರವಾಗಿದೆ ಎಂದುಕೊಂಡು ಸಿಬಿಐ ತನಿಖೆ ಮುಖಾಂತರರ ಕ್ಲಾಸಿಕ್ ಕಂಪ್ಯೂಟರ್ ಹಗರಣ ತನಿಖೆಗೆ ಇಟ್ಟಿರುವುದು ಇದೇ ಸರ್ಕಾರ ಹೌದೋ ಅಲ್ಲವೋ ತಿಳಿಸಲಿ. ಈ ರೀತಿ ಸಮಯ ಕೊಟ್ಟರೆ ಪಟ್ಟಿ ಮಾಡಿ ಹೇಳುತ್ತೇನೆ. 40ರಲ್ಲಿ ಸೊನ್ನೆ ತೆಗೆದರೆ 4ಕ್ಕೆ ಬರುತ್ತೇವೆ ಎಂದು ಹೇಳುತ್ತಾರೆ.

ಅಧ್ಯಕ್ಷರು : ನಿಮ್ಮ ಹೆಸರನ್ನು ಕರೆದಾಗ ಪಟ್ಟಿಯಲ್ಲಾ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಅದಕ್ಕೋಸ್ಕರ ನಾನು ಹೇಳುತ್ತೇನೆ. ಇನ್ನು ಹೋರಾಟ ಮಾಡುತ್ತೇವೆ 40 ಜನ ಕೊಟ್ಟಿರುವುದನ್ನು ಸೊನ್ನೆ ತೆಗೆಯುವುದಿಲ್ಲ. 40ಕ್ಕೆ ಈ ಕಡೆ ಪಕ್ಷಕ್ಕೆ 1 ಸೇರಿಸಿ 141 ಆಗುವವರೆಗೆ ಬಿಜೆಪಿ ಬಿಡುವುದಿಲ್ಲ. ಹೋರಾಟ ಮಾಡುತ್ತೇವೆ ಎನ್ನುವ ಅಂಶವನ್ನು ಮಾನ್ಯ ಖರ್ಗೆಯವರ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : 40ರ ಪಕ್ಕಕ್ಕೆ ಮತ್ತೊಂದು ಸೊನ್ನೆಯನ್ನು ಸೇರಿಸಿಕೊಂಡು ಬನ್ನಿ.

ಶ್ರೀ ಕೆ.ಎಸ್. ಈಶ್ವರಪ್ಪ : ನೋಡೋಣ. ಸಂವಿಧಾನದ ತಿದ್ದುಪಡಿ ಮಾಡಿ ಆ ಸಂಖ್ಯೆ ಬರಲಿ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, 40 ಮತ್ತು 4 ಎರಡು ಇದ್ದೇ ಇದೆ. 178ರಿಂದ 35ಕ್ಕಂತೂ ಬರುವುದಿಲ್ಲ, ಅದು ಮಾತ್ರ ಖಂಡಿತ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 18ರಿಂದ 4ಕ್ಕೆ ಬಂದಂಥ ಉದಾಹರಣೆ ಇದೆ. 3ಕ್ಕೆ ಬಂದಂಥ ಉದಾಹರಣೆ ಇದೆ. ನಮಗೆ ಹೇಳುತ್ತಾರೆ. 18ರಿಂದ 3ಕ್ಕೆ ಬಂದಿರುವ ಉದಾಹರಣೆ ಇದೆ. 4 ಕ್ಕೆ ಬಂದಿರುವ ಉದಾಹರಣೆ ಇದೆ. ನಿಮ್ಮದ್ದೇ ಅನುಭವ ಇದೆ. ನಮಗೇನು ಹೇಳುತ್ತೀರಿ? ಅದು ಹೋಗಲಿ ಬಿಡಿ. ನಾನು ಹೇಳುವುದಿಲ್ಲ. ಅದಕ್ಕಾಗಿ ಸಂತೋಷವೇನೆಂದರೆ ಕೊನೆಯ ಪಕ್ಷ ಈಶ್ವರಪ್ಪನವರನ್ನು ಕಟ್ಟಿಕೊಂಡು ಹೋಗಿದ್ದಕ್ಕೆ ಇಷ್ಟಾದರೂ ಬಂದಿರಿ, ಆಮೇಲೆ ನೋಡೋಣ.

ಶ್ರೀ ಕೆ.ಎಸ್. ಈಶ್ವರಪ್ಪ : ಸಮಾಜವನ್ನು ಒಡೆದು ಆಳುವ ನೀತಿ ಎಂದು ಹೇಳುತ್ತಾರೆ. ಒಡೆದು ಆಳುವ ನೀತಿ ರಾಜ್ಯದಲ್ಲಿ ಅನೇಕ ವರ್ಷಗಳಿಂದ ನಡೆದಿದೆ. ಅದನ್ನು ನನ್ನ ಹೆಸರಿನ ಮುಖಾಂತರ ಬಳಸುವಂಥ ಪ್ರಯತ್ನ ಮಾಡುತ್ತಿದ್ದಾರೆ.

ಅಧ್ಯಕ್ಷರು : ಅಂದರೆ, ನಿಮ್ಮ ಅಭಿಪ್ರಾಯ ಯಡಿಯೂರಪ್ಪನವರು ಇದ್ದಾಗ ಆಗಲಿಲ್ಲ ಎಂದರೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಪ್ರಯತ್ನಪಟ್ಟರು. ಪ್ರಯತ್ನ ಪಟ್ಟರು, ಅವರ ಪ್ರಯತ್ನದ ಬಗ್ಗೆ ನಾನು ಹೇಳುವುದಿಲ್ಲ. ಆದರೆ ಅವರ ಅಧ್ಯಕ್ಷತೆಯಲ್ಲಿ ಇದು ಬಂದಮೇಲೆ ಅವರಿಗೆ ಕ್ರೆಡಿಟ್.

ಅಧ್ಯಕ್ಷರು : ನೀವು ಅವರನ್ನು ಅಭಿನಂದಿಸುತ್ತಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಕ್ರೆಡಿಟ್ ಅವರಿಗೆ ಹೋಗಬೇಕು. ಅದಕ್ಕಾಗಿ ಇವತ್ತಿನ ದಿವಸ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂಥದ್ದು ಯಾವುದೂ ಕೂಡ ಸ್ಪಷ್ಟವಾಗಿಲ್ಲ ಮತ್ತು ನಿರ್ದಿಷ್ಟವಾದ ಕಾರ್ಯಕ್ರಮಗಳು ಕೂಡ ಇಲ್ಲ. ಅದಕ್ಕಾಗಿ ಈ ಒಂದು ಕಾನೂನು ವ್ಯವಸ್ಥೆಯ ಬಗ್ಗೆಯೂ ಕೂಡ ಸ್ಪಷ್ಟವಾಗಿ ಹೇಳಿದ್ದೇನೆ. ಈ ಎಲ್ಲಾ ದೃಷ್ಟಿಯಿಂದ ನೋಡಿದರೂ ಕೂಡ ಅಷ್ಟು ಯಶಸ್ವಿಯಾಗಿ ಇವರು ಸರ್ಕಾರ ನಡೆಸುತ್ತಾರೋ ಇಲ್ಲವೋ ಎನ್ನುವ ಒಂದು ಸಂಶಯ ಕರ್ನಾಟಕ ಜನತೆಗೆ ಮೂಡಿದೆ. ಅದನ್ನು ನಿವಾರಣೆ ಮಾಡಬೇಕಾದರೆ ಅದು ಯಾವ ರೀತಿ ಉತ್ತರ ಕೊಟ್ಟು ಹೇಳುತ್ತಾರೋ ನೋಡೋಣ. ಅದಕ್ಕಾಗಿ ಇಷ್ಟು ಹೇಳಿ ತಾವು ನನಗೆ ಸಮಯ ಕೊಟ್ಟಿದ್ದಕ್ಕಾಗಿ ತಮಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಅಧ್ಯಕ್ಷರೆ, ಇದೀಗ 10ನೇ ವಿಧಾನ ಸಭೆಯಲ್ಲಿ ನಮ್ಮಂತಹ ಹೊಸದಾಗಿ ಆಯ್ಕೆಯಾದಂತಹ ಸದಸ್ಯರುಗಳು ಸುಮಾರು 122 ಜನ ಇದ್ದರೂ ಕೂಡ ನಾವು ಈ ಶಾಸನಸಭೆಗೆ ಬರುವಾಗ ಚುನಾವಣೆಯಲ್ಲಿ ಸ್ಪರ್ಧಿಸುವಾಗ ಬಹಳಷ್ಟು ಆಸೆ ಇಟ್ಟುಕೊಂಡು, ಮತದಾರರಲ್ಲಿ ಭರವಸೆಗಳನ್ನು ಇಟ್ಟುಕೊಂಡು ಆಯ್ಕೆಯಾಗಿ ನಾವಿಲ್ಲಿ ಬಂದಿದ್ದೇವೆ. ಅನೇಕ ದಿನಗಳಿಂದ ಹಿಂದಿನ ಸರ್ಕಾರದ ಭ್ರಷ್ಟಾಚಾರಗಳು, ಹಿಂದಿನ ಸರ್ಕಾರದ ಅವ್ಯವಹಾರದ ಬಗ್ಗೆ ಬೇಸತ್ತು ಜನ ಒಂದು ಸಲ ಅಧಿಕಾರವನ್ನು ಬದಲಾವಣೆ ಮಾಡಲಿ ಎಂದು ಹೇಳುವ ದೃಷ್ಟಿಯಿಂದ ಹೊಸ ಸರ್ಕಾರವನ್ನು ದೂಷಿಸುವ ಹಾಗೆ ಮಾಡಿದ್ದಾರೆ. ನಾವಂತೂ ಚುನಾವಣೆಗೆ ಮುನ್ನ ಸದನದ ಹೊರಗೆ ಇರುವಾಗ, ಈ ಸದನದ ಬಗ್ಗೆ ಅಪೂರ್ವವಾದ ಗೌರವ, ಅಭಿಮಾನದಿಂದ ಇದ್ದೆವು. ಈ ಸದನದ ಸದಸ್ಯರಾದ ಮೇಲೆ ನಾವು ಈ ಸದನದ ಘನತೆ ಗೌರವ ಏನು ಎನ್ನುವುದರ ಬಗ್ಗೆ ಬಹಳಷ್ಟು ಅಧ್ಯಯನ ಮಾಡಬೇಕಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣ ಏನು ಇದೆ, ಇದರ ಬಗ್ಗೆ ಸಹ ನಮಗೆ ಸಾಕಷ್ಟು ಮಾಹಿತಿ ಇತ್ತು. ರಾಜ್ಯಪಾಲರು ಸರ್ಕಾರದ ನೀತಿ ನಿರೂಪಣೆ ಮಾಡುತ್ತಾರೆ ಎನ್ನುವಂತಹ ಒಂದು ವಿಚಾರ ನಮ್ಮಲ್ಲಿತ್ತು. ಹೊಸ ಸರ್ಕಾರದ ಇವತ್ತು ಏನು ಅಧಿಕಾರಕ್ಕೆ ಬಂದಿದೆ, ಜನತೆಗೆ ಆಶ್ವಾಸನೆಗಳನ್ನು ಕೊಟ್ಟು ಅಧಿಕಾರ ಸೂತ್ರವನ್ನು ವಹಿಸಿಕೊಂಡಿದ್ದಾರೆ.

ಇವತ್ತು ಜನತೆಗೆ ತಾವೇನು ಮಾಡಬೇಕಾಗಿದೆ ಮಾಡುತ್ತೇವೆ ಎನ್ನುವುದರ ಸಂಪೂರ್ಣವಾದ ಚಿತ್ರಣವನ್ನು ರಾಜ್ಯಪಾಲರ ಭಾಷಣದ ಮುಖೇನ ಸದನಕ್ಕೆ ಈ ರಾಜ್ಯದ ಜನರಿಗೆ ನೀಡಬೇಕಾಗಿತ್ತು. ಈಗ ರಾಜ್ಯಪಾಲರ ಭಾಷಣವನ್ನು ಕೇಳಿದ ಮೇಲೆ, ಈ ಪುಸ್ತಕವನ್ನು ಓದಿದ ಮೇಲೆ ರಾಜ್ಯಪಾಲರು ಏನು ಭಾಷಣ ಮಾಡಿದ್ದಾರೆ, ಇದನ್ನು ನೋಡಿದ ಮೇಲೆ, ನೋಡುವಾಗ ಇದು ಕೇವಲ ಸಾಂಪ್ರದಾಯಕವಾದಂತಹ ಭಾಷಣ. ಇದೊಂದು ಕೇವಲ ರಾಜ್ಯಪಾಲರ ಭಾಷಣಕ್ಕೆ ಒಂದು ಭಾಷಣದ ರೀತಿಯಲ್ಲಿ ಇದೆ. ಯಾವುದೇ ನಿರ್ದಿಷ್ಟವಾದ ಧೋರಣೆ, ಯಾವುದೇ ರೀತಿಯ ಒಂದು ವಿಡಂಬನೆ ಇಲ್ಲದೇ, ಯಾವುದೇ ರೀತಿಯ ಒಂದು ಕೂಲಂಕಷವಾಗಿದ್ದ ಸಮಸ್ಯೆಗಳ ಪರಿಹಾರಕ್ಕೆ ಬೇಕಾಗುವಂತಹ ಯೋಗ್ಯವಾದಂತಹ,

ಯಾವುದೇ ವಿಚಾರ ಇಲ್ಲದೆ ಇರುವಂತಹ ಈ ಭಾಷಣವನ್ನು ಓದಿದಾಗ ನಮಗಂತೂ ಅನಿಸುತ್ತದೆ, ರಾಜ್ಯಪಾಲರ ಭಾಷಣದ ಬಗ್ಗೆ ಸಂಪೂರ್ಣವಾಗಿ ನಮ್ಮ ಪಕ್ಷ ಕರ್ನಾಟಕ ಕಾಂಗ್ರೆಸ್ ಪಕ್ಷ ಇದನ್ನು ವಿರೋಧಿಸುತ್ತದೆ ಎನ್ನುವುದನ್ನು ಹೇಳಬೇಕಾದಂತಹ ವಿಶಾದನೀಯ ವಿಚಾರವನ್ನು ತಮ್ಮ ಮುಂದೆ ಇಡಬಯಸುತ್ತಿದ್ದೇನೆ. ಇವತ್ತು ಮತದಾರರಲ್ಲಿ ನಾವು ಯಾವ ರೀತಿ-ಭರವಸೆಗಳನ್ನು ಇತ್ತಿದ್ದೇವೋ ಅದಕ್ಕೇ ನಾವು ಅಂಟಿಕೊಳ್ಳಬೇಕಾಗಿದೆ. ಹೊಸ ಸರ್ಕಾರ ಜನತಾ ದಳದ ಪಕ್ಷ ಅಧಿಕಾರಕ್ಕೆ ಬರುವಾಗ ಸಾಕಷ್ಟು ಭರವಸೆಗಳನ್ನು ನೀಡಿದ್ದಾರೆ. ಈ ಭರವಸೆಗಳನ್ನು ನೀಡುವಾಗ ಇನ್ನೇನು ಸದನ, ಹೊಸ ಸಭೆ, ಹತ್ತನೇ ವಿಧಾನಸಭೆ ಪ್ರಾರಂಭ ಆಗುತ್ತದೆ ಎನ್ನುವಾಗ ಕರ್ನಾಟಕದ ಜನತೆ ಹೊಸ ಸರ್ಕಾರದ ನೀತಿ ನಿಯಮಗಳ ಬಗ್ಗೆ ಬಹಳಷ್ಟು ಆಶಾದಾಯಕವಾಗಿ ಇದ್ದರು. ನಾವು ಕೂಡ ಇದ್ದೆವು.

ಈ ಸದನದಲ್ಲಿ ಸದಸ್ಯರು ಒಳಗಡೆ ಬರುವಾಗ ನಾವೇನು 108 ಜನ ವಿರೋಧಿ ಸದಸ್ಯರು ಇದ್ದೇವೆ, 114 ಜನ ಆಡಳಿತ ಪಕ್ಷದಲ್ಲಿ ಇರುವಾಗ ಅತ್ಯಂತ ಬಹಳಷ್ಟು ಮೇಧಾವಿಗಳು ಇವತ್ತು ವಿರೋಧ ಪಕ್ಷದಲ್ಲಿರುವಾಗ ಅದಕ್ಕೆ ರಾಜ್ಯಪಾಲರ ಭಾಷಣದ ನಿರೂಪಣೆ ಏನು ಇದೆ, ಇದನ್ನು ನಮ್ಮಲ್ಲಿ ನೋಡುವಾಗ ಬಹಳಷ್ಟು ಸೋಜಿಗ ಎನಿಸುತ್ತದೆ. ಏಕೆ ಹೀಗಾಯಿತು ಎನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕಾಗಿದೆ. ಇದರಲ್ಲಿ ನಿರೂಪಣೆ ಮಾಡುವಾಗ ಕೇವಲ ಭರವಸೆ ರೂಪದಲ್ಲಿ ಕೊಡುವಾಗ ಹತ್ತ ರೊಟ್ಟಿಗೆ ಹನ್ನೊಂದು ಹೇಳಿದ ಹಾಗೆ ವಿದ್ಯುತ್, ನೀರಾವರಿ, ಕೃಷಿ, ಮಹಿಳಾ ಕಲ್ಯಾಣ, ಗ್ರಾಮೀಣಾಭಿವೃದ್ಧಿ, ಆರೋಗ್ಯ ವಿದ್ಯೆ ಎಲ್ಲದರ ಬಗ್ಗೆ ಕಾಳಜಿ ವಹಿಸುತ್ತೇವೆ ಎನ್ನುವಂತಹ ಮಾತನ್ನು ಮಾತ್ರ ಆಡಿದ್ದಾರೆಯೇ ವಿನಹ ಯಾವ ರೀತಿಯಲ್ಲಿ ಸಮಸ್ಯೆಗೆ ಪರಿಹಾರ ಮಾಡುತ್ತೀರಿ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ನೀತಿ ನಿರೂಪಣೆ ಇಲ್ಲ, ಮತ್ತೆ ಇನ್ನು ಕೃಷಿ ರಂಗದ ರಿಚಾರ. ಹೊಸ ಸರ್ಕಾರ ಬರುವ ಸಮಯದಲ್ಲಿಯೇ ನಮಗೆಲ್ಲಾ ಅಘಾತಕರವಾದಂತಹ ಸುದ್ದಿ, ಅದೇನೆಂದರೆ ರೈತರಿಗೆ ಕೊಟ್ಟಂತಹ ಪಂಪುಸೆಟ್ಟು ಏನು ವಿತರಣೆ ಮಾಡಿದ್ದಾರೆ, ಅದಕ್ಕೆ ಕೊಟ್ಟಂತಹ ವಿದ್ಯುಚ್ಛಕ್ತಿ ದರದ ರಿಯಾಯಾತಿಯನ್ನು ಹಿಂತೆಗೆದುಕೊಳ್ಳುತ್ತೇವೆ ಎನ್ನುವಂತಹ ಸುದ್ದಿಯನ್ನು ಕೇಳಿದಾಗ ಇವರು ರೈತರ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದಾರೆ ಎಂದು ಗೊತ್ತಾಗುತ್ತದೆ.

ಜನತಾ ದಳದ ಸರ್ಕಾರ ಮಾನ್ಯ ದೇವೇಗೌಡರು ಸಭಾ ನಾಯಕರಾದಾಗ ರೈತರು ಎಷ್ಟು ಅಭಿಮಾನಪೂರ್ವಕವಾಗಿ ತಿಳಿದುಕೊಂಡಿದ್ದಾರೆ ಎನ್ನುವುದನ್ನು ನೋಡಿದಾಗ ಇವತ್ತು ಅಷ್ಟೇ ಸ್ಪಷ್ಟವಾಗಿ ರೈತರಿಗೆ ಕೊಟ್ಟಂತಹ ಸವಲತ್ತನ್ನು ಹಿಂದಕ್ಕೆ ತೆಗೆದುಕೊಳ್ಳುವಂತಹ ಒಂದು ನಿರ್ಧಾರ ಮಾಡುತ್ತಾರೆ ಎನ್ನುವಂತಹ ಪರಿಸ್ಥಿತಿ ಉದ್ಭವ ಆಗುವುದಾದರೆ ಇದಕ್ಕೆ ನಾವು ಸಂಪೂರ್ಣ ವಿರೋಧವನ್ನು ಮಾಡಲೇಬೇಕಾಗುತ್ತದೆ. ಜನತೆಯ ಆಸೆ ಆಕಾಂಕ್ಷೆಗಳನ್ನು ಪೂರೈಸುವಲ್ಲಿ ನಾವು ಗ್ರಾಮೀಣ ಮಟ್ಟದ ಬಡ ಜನರನ್ನು, ಬಡ ರೈತರನ್ನು ಉದ್ದೇಶಿಸಿ ಗಂಟೆಗಟ್ಟಲೆ ಭಾಷಣ ಮಾಡುವಾಗ ಗ್ರಾಮೀಣ ಜನರ ಅಭ್ಯುದಯದ ಬಗ್ಗೆ ಮಾತನಾಡುವಾಗ ಸಾಕಷ್ಟು ರೀತಿಯ ಬಣ್ಣ ಬಣ್ಣದ, ವರ್ಣರಂಜಿತ, ಭಾವೋದ್ವೇಗದಿಂದ ಭಾಷಣಗಳನ್ನು ಬಿಗಿದು, ಭರವಸೆಗಳನ್ನು ಕೊಟ್ಟು ಇಲ್ಲಿಗೆ ಬಂದು, ಅಧಿಕಾರ ಸೂತ್ರವನ್ನು ವಹಿಸಿಕೊಂಡ ಕೂಡಲೇ ನಾವು ಅದರ ವಿರುದ್ಧವಾಗಿ ಕೆಲಸ ಮಾಡುತ್ತಾ ಹೋದರೆ ಹಿಂದಿನ ಸರ್ಕಾರಕ್ಕೂ ಈಗಿನ ಸರ್ಕಾರಕ್ಕೂ ಇರುವಂತಹ ವ್ಯತ್ಯಾಸ ಏನು ಎನ್ನುವುದನ್ನು ಆಲೋಚನೆ ಮಾಡಬೇಕಾದಂತಹ ಪರಿಸ್ಥಿತಿ ನಮಗೆ ಬಂದೊಡಗಿದೆ.

ರೈತರ ಬಗ್ಗೆ ಪ್ರಾಯಶಃ ನಿನ್ನೆ ರೈತ ಸಂಘದ ಗೌರವಾನ್ವಿತ ಸದಸ್ಯರು ಬಹಳ ಅದ್ಭುತವಾದ ರೀತಿಯಲ್ಲಿ ಮಾತನಾಡಿದ್ದಾರೆ. ಸಾಮಾನ್ಯ ರೈತನಿಗೆ ಸಿಗತಕ್ಕಂಥ ಸೌಲಭ್ಯಗಳೇನಿವೆ, ಅವನು ಯಾವ ರೀತಿ ಬದುಕಿನಲ್ಲಿ ಹೋರಾಟ ಮಾಡುತ್ತಿದ್ದಾನೆ

ಎನ್ನುವುದರ ಬಗ್ಗೆ ಬಹಳ ಚೆನ್ನಾಗಿ ಸದನದಲ್ಲಿ ಹೇಳಿದ್ದಾರೆ. ಇದನ್ನು ಮತ್ತೆ ಮತ್ತೆ ನಾನು ಒತ್ತಿ ಹೇಳಬೇಕಾಗಿಲ್ಲ. ಸಮಾಜದಲ್ಲಿರುವ ಪ್ರತಿಯೊಂದು ವರ್ಗವೇನಿದೆ, ಅವರು ಪಡುವ, ಅನುಭವಿಸುವ ಕಷ್ಟವನ್ನು ನಾವು ನೋಡಿಕೊಂಡು ಅವರ ಜೊತೆ ನಾವೂ ಕೂಡ ಹೋರಾಟ ಮಾಡಬೇಕೆನ್ನುವ ಛಲದಿಂದ ನಾವು ಈ ಶಾಸನಸಭೆಯೊಳಗೆ ಬಂದಿರುವಾಗ ಇವೊತ್ತು ಅವರ ಬಗ್ಗೆ ಸ್ಪಷ್ಟವಾದಂಥ ಯಾವುದೇ ನಿರ್ಧಾರವನ್ನು ನಾವು ತಳೆಯುವುದಿಲ್ಲವೆಂದರೆ ನಾವು ಅಧಿಕಾರ ಸೂತ್ರ ವಹಿಸಿಕೊಂಡಿದ್ದು ಅಥವಾ ಅಧಿಕಾರ ಬದಲಾವಣೆಯಾಗುವಂಥ ವಿಚಾರವೇನಿದೆ, ಅದು ಯಾವ ಕಾರಣಕ್ಕೋಸ್ಕರ ಎನ್ನುವುದರ ಬಗ್ಗೆ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾದಂಥ ಪರಿಸ್ಥಿತಿ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಒದಗಿದರೆ, ಇನ್ನೈದು ವರ್ಷಗಳಲ್ಲಿ ಯಾವ ರೀತಿ ಹೋಗಬಹುದು ಎನ್ನುವ ಬಗ್ಗೆ ಗಂಭೀರವಾಗಿ ನಾವು ಅಲೋಚಿಸಬೇಕಾಗಿದೆ. ಇವೊತ್ತು ರೈತರ ಬಗ್ಗೆ ಸಾಕಷ್ಟು ಮಾತನಾಡುವಾಗ ಅವರೊಟ್ಟಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸಹ ಸಾಕಷ್ಟು ಸಂಖ್ಯೆಯಲ್ಲಿ ಮೀನುಗಾರರಿದ್ದಾರೆ. ಇವರ ಬಗ್ಗೆಯೂ ಕೂಡ ಯಾವುದೇ ಸರ್ಕಾರವು ಅನುಕೂಲಕರವಾದ ವಾತಾರರಣವನ್ನು ನಿರ್ಮಾಣ ಮಾಡಲಿಲ್ಲರೆಂದರೆ ತಪ್ಪಾಗಲಿಕ್ಕಿಲ್ಲ.

ಒಬ್ಬ ರೈತ ಭೂಮಿಯಿಂದ ಯಾವ ರೀತಿ ಬೆಳೆ ಬೆಳೆಯುತ್ತಾನೆ, ಯಾವ ರೀತಿ ಬೇಸಾಯ ಮಾಡುತ್ತಾನೆಯೋ ಅದೇ ರೀತಿ ಒಬ್ಬ ಮೀನುಗಾರ ತನ್ನ ಪ್ರಾಣರನ್ನೇ ಮುಡುಪಾಗಿಟ್ಟು ಸಮುದ್ರಕ್ಕೆ ಹೋಗಿ, ಪ್ರಾಣಾಪಾಯ ಲೆಕ್ಕಿಸದೆ, ಅಬ್ಬರದ ಅಲೆಗಳ ನಡುವೆ ಹೋಗಿ ಮೀನುಗಾರಿಕೆ ಮಾಡಿ, ಮೀನುಗಳನ್ನು ಸಂಪಾದನೆ ಮಾಡಿಕೊಂಡು ಬಂದರೆ ಅದನ್ನು ಕೆಡದಂತೆ ಇಟ್ಟುಕೊಳ್ಳಲು ಶೀತಲೀಕರಣದ ವ್ಯವಸ್ಥೆ ಇಲ್ಲದೆ ಆ ಬಡಪಾಯಿ ಬೇಕಾದ ರೀತಿಯಲ್ಲಿ ಯಾರು ಎಷ್ಟು ದರಕ್ಕೆ ಕೇಳುತ್ತಾರೋ ಅಷ್ಟು ದರಕ್ಕೆ ಕೊಟ್ಟು ಜೀವನ ಮಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇವೊತ್ತು ರೈತನಿಗೆ ಯಾವ ಸೌಲಭ್ಯ ಸಿಗುತ್ತಿದೆಯೋ, ಅವರ ಸಾಲ ಮನ್ನಾಕ್ಕಾಗಿ ಯಾವ ರೀತಿ ಹೋರಾಟ ನಡೆಯುತ್ತಿದೆಯೋ ಅದೇ ರೀತಿಯಲ್ಲಿ ಮೀನುಗಾರರ ಬಗ್ಗೆಯೂ ಹೋರಾಟ ಆಗಬೇಕಾಗಿದೆ. ಆದರೆ, ಏನು ಮಾಡೋಣ? ಕರಾವಳಿಯಲ್ಲಿರುವ ಎರಡು ಜಿಲ್ಲೆಗಳನ್ನು ನಮ್ಮ ಮೀನುಗಾರರು ಹೊಂದಿದ್ದು, ಒಳನಾಡಿನಲ್ಲಿರತಕ್ಕ ಮೀನುಗಾರರು ಕೂಡ ಬಹುತೇಕ ಇದೇ ಸಂಧಿಗ್ಧ ಪರಿಸ್ಥಿತಿಯಲ್ಲಿದ್ದಾರೆ. ಅವರ ಬಗ್ಗೆಯೂ ಹೋರಾಟ ಮಾಡುವುದರ ಕುರಿತು ಇದುವರೆಗಿನ ಯಾವುದೇ ಸರ್ಕಾರ ಯಾವುದೇ ರೀತಿಯಲ್ಲಿ ಅವರಿಗೆ ಸೌಲಭ್ಯ ಒದಗಿಸಿಕೊಡಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇನ್ನು ಸಂದರ್ಭೋಚಿತವಾಗಿ ಹೇಳಬೇಕೆಂದರೆ, ಸರ್ಕಾರ ಒಬ್ಬ ಮಂತ್ರಿಯನ್ನು ರಾಜ್ಯ ಮೀನಗಾರಿಕಾ ಸಚಿವರೆಂದು ನೇಮಕ ಮಾಡಿದೆ. ನಾನು ಕಳೆದ ಹಲವಾರು ವರ್ಷಗಳಿಂದ ನೋಡುತ್ತಾ ಬಂದಿರುವಂತೆ ಮೀನುಗಾರಿಕಾ ಇಲಾಖೆಗೆ ಕೊಡತಕ್ಕಂಥ ಹಣವೇನಿದೆ, ಬಹಳಷ್ಟು ಹಣವನ್ನು ವಿನಿಯೋಗಿಸಲಾಗಿದೆ. ಮೀನುಗಾರರಿಗೆ ಯಾವ ರೀತಿಯ ಸೌಲಭ್ಯವನ್ನು ಸರ್ಕಾರ ಒದಗಿಸಿಕೊಟ್ಟಿದೆ ಎಂಬ ಬಗ್ಗೆ ಇವೊತ್ತು ನೀವು ಚಿಂತನೆ ಮಾಡಲೇಬೇಕಾಗಿದೆ.

ಏಕೆಂದರೆ, ಒಬ್ಬ ಮೀನುಗಾರ ತನ್ನ ಬಡ ಸಂಪಾದನೆಯಲ್ಲಿ ಮಾರಿದಂಥ ಮೀನುಗಳನ್ನು ಇವೊತ್ತು ಬೆಂಗಳೂರಿಗೆ ತಂದು ಮಾರಾಟ ಮಾಡುವ ವ್ಯಕ್ತಿಗಳು ಯಾರಿದ್ದಾರೆ, ಅವರು ಕೆ.ಜಿ.ಯೊಂದಕ್ಕೆ 50-70 ರೂಪಾಯಿಗಳಂತೆ ಮಾರಾಟ ಮಾಡಿದರೆ ಅಷ್ಟು ಹಣ ತೆತ್ತು ತಿನ್ನುವ ವ್ಯವಸ್ಥೆಯೂ ಇದೆ. ಆದರೆ, ಮೀನು ಮಾರಾಟ ಮಾಡುವ ಬಡ ಮೀನುಗಾರ ಮುಂಜಾನೆ 3-4 ಗಂಟೆಗೆ ಎದ್ದು ಸಮುದ್ರದ ಅಬ್ಬರದ ಅಲೆಗಳ ಮಧ್ಯೆ ಹೋಗಿ ಪ್ರಾಣಪಾಯ ಲೆಕ್ಕಿಸದೆ ಕಷ್ಟಪಟ್ಟು ಸಂಪಾದನೆ ಮಾಡಿಕೊಂಡು ಬಂದರೆ ಇವರ ಬಗ್ಗೆ ಯಾರೂ ಚಿಂತನೆ ಮಾಡುವವರಿಲ್ಲ. ಅವರಿಗೆ ಉಳಿದುಕೊಳ್ಳುವಂಥ

ವ್ಯವಸ್ಥೆ ಇವೊತ್ತಿನವರೆವಿಗೂ ಆಗಿಲ್ಲ. ಅವರಿಗೆ ಬೇಕಾದಂಥ ಸಾಲ-ಸೌಲಭ್ಯವೇನಿದೆ, ಮತ್ತು ಅದರ ಮರುಪಾವತಿ ಬಗ್ಗೆ ಇನ್ನೂ ಚಿಂತನೆ ನಡೆದಿಲ್ಲ. ನಿನ್ನೆ ರೈತ ಸಂಘದ ಸದಸ್ಯರಾದ ಶ್ರೀ ಪುಟ್ಟಣ್ಣಯ್ಯನವರು ಮಾತನಾಡುತ್ತಾ, 'ಟೊಮೊಟೋ ಮಾರಾಟ ಮಾಡುವಂಥ ಎರಡು ರೂಪಾಯಿಗಳಂತೆ ಕಿಲೋಗೆ ಮಾರುತ್ತಾನೆ. ಆದರೆ ಅದನ್ನು ಕೊಂಡವನು ಸಲಾಡ್ ಮಾಡುವಂಥ ಒಬ್ಬ ನಗರದ ವ್ಯಕ್ತಿ ಮುನ್ನೂರು ರೂಪಾಯಿಗಳಿಗೂ ಹೆಚ್ಚು ಸಂಪಾದನೆ ಮಾಡುತ್ತಾನೆ ಎಂದರು. ಆದರೆ, ನಗರದ ವ್ಯಕ್ತಿ ಮುನ್ನೂರು ರೂಪಾಯಿಗಳಿಗೂ ಹೆಚ್ಚು ಸಂಪಾದನೆ ಮಾಡುತ್ತಾನೆ. ಎಂದರು. ಆದರೆ ಇವೊತ್ತು ನಮ್ಮ ಬಡ ಮೀನುಗಾರ ಕರಾವಳಿಯಲ್ಲಿ ಹಿಡಿದ ಮೀನುಗಳನ್ನು ಬೆಂಗಳೂರಿಗೆ ತಂದು, ಅಲ್ಲಿ ಒಂದು ರೂಪಾಯಿಗೆ ಮಾರುತ್ತಿದ್ದ ಮೀನನ್ನು ಇಲ್ಲಿ 25-50-300 ರೂಪಾಯಿಗಳವರೆವಿಗೂ ಬೆಲೆ ಕೊಟ್ಟು ತಿನ್ನುವವರೂ ಇದ್ದಾರೆ. ಇದರ ಜೊತೆಗೆ ಶೀತಲೀಕರಣ ವ್ಯವಸ್ಥೆಯಿಟ್ಟುಕೊಂಡು ಮೀನುಗಳನ್ನು ಪರದೇಶಗಳಿಗೆ ರಫ್ತು ಮಾಡುವ ಜನ ಯಾರಿದ್ದಾರೆ, ಅವರಿಗೆ ಸರ್ಕಾರ ಬೇಕಾದಷ್ಟು ಸಹಾಯಧನ ಕೊಟ್ಟು ಇದರಿಂದ ವಿದೇಶಿ ವಿನಿಮಯ ಬರುತ್ತದೆಂಬ ದೃಷ್ಟಿಯಿಂದ ಅದಕ್ಕೆ ಪ್ರಚೋದನೆ ಕೊಡುತ್ತಿದೆ.

ಅಧ್ಯಕ್ಷರು : ಮಾನ್ಯ ಗೃಹ ಸಚಿವರೆ, ಮೀನುಗಾರಿಕೆ ಇಲಾಖೆಯ ಮಂತ್ರಿಗಳು ಅವರ ಕ್ಷೇತ್ರದಲ್ಲಿ ಏನೋ ಕಾರ್ಯಕ್ರಮವಿತ್ತೆಂದು ನನ್ನ ಅನುಮತಿಯನ್ನು ಪಡೆದುಕೊಂಡು ಹೋಗಿದ್ದಾರೆ. ಅವರು ಗೈರುಹಾಜರಾಗಿರುತ್ತಾರೆ. ಮಾನ್ಯ ಸದಸ್ಯರು ಬಹಳ ಗಂಭೀರವಾದ ಸಲಹೆಗಳನ್ನು ಮೀನುಗಾರಿಕೆಗೆ ಸಂಬಂಧಪಟ್ಟಂತೆ ಕೊಡತಕ್ಕಂಥ ಸಮಯದಲ್ಲಿ ಇಲ್ಲಿ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳಾರು ಬಂದಂತೆ ಕಾಣುತ್ತಿಲ್ಲ. ತಮ್ಮ ಕಡೆಯಿಂದ ಅದರ ಬಗ್ಗೆ ನೋಟನ್ನು ಯಾರಾದರೂ ಮಾಡಿಕೊಳ್ಳುತ್ತಿದ್ದಾರೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೇ, ಎರಡೂ ಕಡೆಯ ಸದಸ್ಯರುಗಳು ಹೇಳತಕ್ಕದನ್ನೆಲ್ಲಾ ವಿಚಾರಗಳನ್ನು ನಾವು ಕೇಳುತ್ತಿದ್ದೇವೆ. ಬರೆದುಕೊಳ್ಳುತ್ತಿದ್ದೇವೆ. ಉತ್ತರವನ್ನು ಕೊಡತಕ್ಕ ಸಂದರ್ಭದಲ್ಲಿ ಅದಕ್ಕೆಲ್ಲಾ ಸ್ಪಂಧಿಸುತ್ತೇವೆ.

ಶ್ರೀ ಯು.ಆರ್. ಸಭಾಪತಿ : ಇವತ್ತು ಒಬ್ಬ ಬಡ ಮೀನುಗಾರ ಕಷ್ಟಪಟ್ಟು ಶ್ರಮವಹಿಸಿ ಅವನು ಏನು ಸಂಪಾದನೆ ಮಾಡುತ್ತಿದ್ದಾನೆ. ಅವನಿಗೇನು ದೋಣಿ ಸಾಲವನ್ನು ಕೊಟ್ಟಿದ್ದೇವೆ ಅದರ ಮರುಪಾವತಿ ಮಾಡಲಾರದೆ. ಇವತ್ತು ಬ್ಯಾಂಕಿನವರು ಆ ದೋಣಿಯನ್ನು ಎಳೆದುಕೊಂಡು ಹೋಗಿ ಅದನ್ನು ಅಟ್ಯಾಚ್ ಮಾಡಿ ಒಳಗೆ ಇರತಕ್ಕ ಪರಿಸ್ಥಿತಿಯಾಗಿದೆ. ಅವರಿಗೆ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡುತ್ತೇವೆಂದು ಚುನಾವಣೆಗೂ ಮೊದಲು ವಚನ ಏನು ಕೊಟ್ಟಿದ್ದರೊ ಅದನ್ನು ಮಾಡಲಿಲ್ಲ. ಇವತ್ತು ಮೀನುಗಾರರಿಗೆ ಸಾಲವೇನಾದರೂ ಬೇಕಾಗಿದ್ದರೆ ಬ್ಯಾಂಕುಗಳಲ್ಲಿ ಅಥವಾ ಸಹಕಾರ ಸಂಘಗಳಲ್ಲಿ ಸಾಲವನ್ನು ಅವರಿಗೆ ವಿತರಣೆ ಮಾಡುತ್ತಿಲ್ಲ. ಸುಮಾರು ನಾಲ್ಕುನೂರರಿಂದ ಐದುನೂರು ಮೀನೂಗಾರರ ದೋಣಿಗಳನ್ನು ಅಟ್ಯಾಚ್‌ಮೆಂಟ್ ಮಾಡಿ ಸಮುದ್ರದ ಕಿನಾರಿಯಿಂದ ಮೇಲೆ ತಂದಿಟ್ಟಿದ್ದಾರೆ. ಹೀಗಾದರೆ ಆ ಬಡ ಮೀನುಗಾರ ಎಲ್ಲಿಗೆ ಹೋಗಬೇಕು? ಅವರಿಗೆ ಸೂಕ್ತವಾದ ಒಂದು ಮನೆಯನ್ನು ಕಟ್ಟಿಕೊಡತಕ್ಕ ವ್ಯವಸ್ಥೆ ಇದುವರೆಗೆ ಇದ್ದಂಥ ಯಾವ ಸರ್ಕಾರವೂ ಮಾಡಲಿಲ್ಲ. ಮಾಡಿದ್ದರೂ ಸಹ ಅಲ್ಲೊಂದು ಇಲ್ಲೊಂದು ಹೇಳಿಕೆಗಳು ಅಷ್ಟೆ. ಬಹಳ ನಿಗದಿತ ಪ್ರಮಾಣದಲ್ಲಿ ಇದಕ್ಕೆ ಹಣವನ್ನು ಮಂಜೂರಾತಿ ಮಾಡಬೇಕಾಗಿದೆ. ಆದುದರಿಂದ ನಾನು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುವುದೇನೆಂದರೆ ಇವತ್ತು ರೈತರಿಗೆ ಏನು ಕಷ್ಟಕಾರ್ಪಣ್ಯವಿದೆ, ರೈತರ ಕಷ್ಟಕಾರ್ಪಣ್ಯದ ರೀತಿಯಲ್ಲಿಯೇ ಮೀನುಗಾರರದ್ದೂ ಇದೆ. ಇವತ್ತು ಯಾವ ರೀತಿಯಲ್ಲಿ ರೈತರು ಕಷ್ಟಪಟ್ಟು ಸಂಪಾದನೆ ಮಾಡುತ್ತಾರೋ ರೈತರ ಸಾಲ ಸೌಲಭ್ಯವೇನು ಇದೆ,

ರೈತರಿಗೆ ಯಾವ ರೀತಿಯಲ್ಲಿ ಗೊಬ್ಬರಕ್ಕೆ ಸಾಕಷ್ಟು ಸಬ್ಸಿಡಿಯನ್ನು ಕೊಡುತ್ತಿದ್ದಾರೋ, ಪಂಪುಸೆಟ್ಟುಗಳಿಗೆ ಬೇಕಾದಷ್ಟು

ವಿದ್ಯುತ್ತು ಕೊಡುತ್ತಾರೊ, ಬೇರೆ ಬೇರೆ ರೀತಿಯ ಕಾರ್ಯಕ್ರಮಗಳನ್ನು ಯಾವ ರೀತಿಯಲ್ಲಿ ರೈತರಿಗೆ ಹಾಕಿಕೊಂಡಿದ್ದಾರೋ ಅದೇ ರೀತಿಯಲ್ಲಿ ಸೌಕರ್ಯವನ್ನು, ಸೌಲಭ್ಯಗಳನ್ನು ಮೀನುಗಾರರಿಗೂ ಸಹ ಕೊಡಬೇಕೆಂದು ಮನವಿಯನ್ನು ಸರ್ಕಾರದ ಮುಂದಿಡಬಯಸುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರು ಮೀನುಗಾರರ ಬಗ್ಗೆ ಸ್ವತಃ ಅನುಭವದಿಂದ ಹೇಳುತ್ತಿದ್ದಾರೆ. ಅವರು ಇದೇ ವಿಷಯದಲ್ಲಿ ಲಿಬರಲೈಜೇಷನ್ನ ಹೆಸರಿನಲ್ಲಿ, ನಮ್ಮಲ್ಲಿ ಕೇವಲ ನೂರು ಹೆಚ್ಚಿಯ ಬೋಟ್ಗಳು ಇದ್ದರೆ, ವಿದೇಶಿಯವರ ಅತ್ಯಂತ ಶಕ್ತಿಯುತವಾದ ಸಾವಿರ, ಸಾವಿರದ ಐದುನೂ ಹೆಚ್ಚಿ ಸಾಮರ್ಥ್ಯದ ದೋಣಿಗಳು ದೀಪ್ ಸೀ ಫಿಶಿಂಗ್ನಲ್ಲಿ ನಮ್ಮ ಟೆರಿಟರಿ ಒಳಗೆ ಬರುತ್ತಿದ್ದಾರಲ್ಲಾ ಅದರ ಬಗ್ಗೆ ಕೇಂದ್ರ ಸರ್ಕಾರದ ಗಮನವನ್ನು ಸೆಳೆದ್ದೀರಾ?

ಶ್ರೀ ಯು.ಆರ್. ಸಭಾಪತಿ : ಬಹಳ ಸಮಯೋಚಿತವಾದ ಪ್ರಶ್ನೆಯನ್ನು ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದೇ ಪ್ರಶ್ನೆಗೆ ನಾನು ಬರುತ್ತಿದ್ದೆ. ಇವತ್ತು ಬಹಳ ಕಷ್ಟಪಟ್ಟು ನಾಡದೋಣಿಯವರು, ಪರ್ಸೀನ್ ದೋಣಿಯವರು ಮೀನುಗಾರಿಕೆ ಮಾಡುತ್ತಿರತಕ್ಕ ಸಂದರ್ಭದಲ್ಲಿ, ಕೇಂದ್ರದ ಒಂದು ಹೊಸದಾದ ನೀತಿಯೇನಿದೆ ಅದರಿಂದ ಅಳ ಸಮುದ್ರದಲ್ಲಿ ವಿದೇಶಿ ದೋಣಿಯನ್ನು ಯಾರು ನಿರ್ಮಾಣ ಮಾಡಿಕೊಂಡು ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಸಂಪಾದಿಸುತ್ತಿದ್ದಾರೆ. ಅವರಿಗೆ ಕೊಡಬೇಕಾದಂಥ ವಿದೇಶೀ ಸೌಲಭ್ಯಗಳು ಸಿಗುತ್ತವೆ. ಅವರಿಗೆ ನಮ್ಮ ಕರಾವಳಿಯಲ್ಲಿ ಮೀನುಗಾರಿಕೆಯನ್ನು ಮಾಡಲು ಕೇಂದ್ರ ಸರ್ಕಾರ ಅನುಮತಿಯನ್ನು, ಆದೇಶವನ್ನು ಕೊಟ್ಟಿದೆ. ಅದನ್ನು ವಿರೋಧಿಸಿ ನಾವು ಚುನಾವಣೆಗೂ ಮೊದಲು ಹಲವಾರು ಪತ್ರಿಕಾ ಹೇಳಿಕೆಗಳನ್ನು ಕೊಟ್ಟಿದ್ದೇವೆ. ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯ ಮೀನುಗಾರರ ಮುಖಂಡರೆಲ್ಲರೂ ಒಟ್ಟು ಗೂಡಿ ಸ್ವಲ್ಪ ಸಮಯ ಮೀನುಗಾರಿಕೆಯನ್ನು ನಿಲ್ಲಿಸಿದರೂ ಪರವಾಗಿಲ್ಲ ಈ ನೀತಿಯನ್ನು ವಿರೋಧಿಸಬೇಕು ಎನ್ನತಕ್ಕ ಮಾತನ್ನು ಹೇಳಿದ್ದೇವೆ. ಇದರ ಬಗ್ಗೆ ಸಾಕಷ್ಟು ರೀತಿಯಲ್ಲಿ ಚರ್ಚೆ ಮಾಡಿದ್ದೇವೆ. ಕೇಂದ್ರ ಸರ್ಕಾರದ ನೀತಿಯಿಂದ ನಮ್ಮ ಬಡ ಮೀನುಗಾರರು ಉಪವಾಸ ಬೀಳತಕ್ಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ವತ್ತು ಸಮುದ್ರದಲ್ಲಿ ಅವರು ಏನು ಮೀನನ್ನು ಸಂಪಾದನೆ ಮಾಡುತ್ತಿದ್ದಾರೆ ಅದು ಸಂಪೂರ್ಣವಾಗಿ ಹಗಲು ದರೋಡೆ ಮಾಡುವಂಥ ವಿದೇಶಿಯರಿಗೆ ಕೇಂದ್ರ ಸರ್ಕಾರದವರೇನಾದರೂ ಅನುಮತಿಯನ್ನು ಕೊಡುವುದಾಗಿದ್ದರೆ ಕರಾವಳಿಯಾದ್ಯಂತ ಇರತಕ್ಕ ಬಡ ಮೀನುಗಾರರು ಎಲ್ಲಿಗೆ ಹೋಗಬೇಕು ಎನ್ನುವ ಬಗ್ಗೆ ನಾವು ಹೋರಾಟ ಮಾಡುತ್ತೇವೆ ಎನ್ನುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆಯ ಮಾತನ್ನು ನೀಡಿದ್ದೇವೆ. ಅಷ್ಟೇ ಅಲ್ಲದೆ ರಾಷ್ಟ್ರದಾದ್ಯಂತ ಮೀನುಗಾರರು ಇದರ ಬಗ್ಗೆ ಹೋರಾಟದ ಅಲೆಯನ್ನು ಎಬ್ಬಿಸಿದ್ದಾರೆ. ಇದರ ಬಗ್ಗೆ ನಾವು ಕೇಂದ್ರ ಸರ್ಕಾರದ ಗಮನವನ್ನು ಸೆಳೆದಿದ್ದೇವೆ. ತಾವು ಕೂಡ ತಮ್ಮ ಸರ್ಕಾರ ನಮ್ಮ ಮೀನುಗಾರರಿಗೆ ಆಗತಕ್ಕ ಯಾವ ಅನ್ಯಾಯ ಇದೆ, ಅದನ್ನು ಪ್ರತಿಭಟಿಸಿ ನಾವು ಏನು ಹೋರಾಟ ಮಾಡುತ್ತಿದ್ದೇವೆ ಅದಕ್ಕೆ ಬೆಂಬಲವಾಗಿ ತಮ್ಮ ಸರ್ಕಾರ ನಿಲ್ಲಬೇಕು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ತಮ್ಮ ಸರ್ಕಾರ ಇದರ ಮಾಹಿತಿಯನ್ನು ಸರಿಯಾಗಿ ಕೊಟ್ಟು ಏನೊಂದು ಇದರಿಂದ ನಮ್ಮ ಮೀನುಗಾರರಿಗೆ ಅನ್ಯಾಯವಾಗುತ್ತದೆ, ಅದನ್ನು ತಪ್ಪಿಸಲು ಕ್ರಮಕೈಗೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಅದೇ ರೀತಿ ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ವರ್ಷಗಳಿಂದ ಕೆಲಸ ಮಾಡಿಕೊಂಡು ಬರತಕ್ಕಂತಹ ಮೂರ್ತೆದಾರರ ವಿಷಯ ತಮಗೆಲ್ಲರಿಗೂ ಮಾಡಿ

ಶೇಂದಿ ನಿಷೇಧ ಮಾಡುವ ಸಂದರ್ಭದಲ್ಲಿ ನಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಹೋರಾಟ ಮಾಡಿದ್ದೆವು ಎನ್ನುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಇವತ್ತು ಸೇಂದಿಯನ್ನು ಅಬಕಾರಿ ವ್ಯವಸ್ಥೆಯಿಂದ ಸಂಪೂರ್ಣವಾಗಿ ಬೇರ್ಪಡಿಸಬೇಕು. ಇವತ್ತು ಮೂರ್ತೆದಾರರಿಗೆ ಅದನ್ನು ಮಾಡುವಂತಹ ಹಕ್ಕನ್ನು ಕೊಡಬೇಕೆಂದು ಏನು ಹೋರಾಟ ಮಾಡಿದ್ದೇವೋ ಆ ಹೋರಾಟದಲ್ಲಿ ಮಾನ್ಯ ನಮ್ಮ ನಾಯಕರಾದ ಎಸ್. ಬಂಗಾರಪ್ಪನವರು ಅಧಿಕಾರಕ್ಕೆ ಬಂದಾಗ ನಾವು ಇದರ ಬಗ್ಗೆ ಬಹಳಷ್ಟು ಯಶಸ್ಸನ್ನು ಕಂಡೆವು. ಆದರೆ ಮತ್ತೆ ಪುನಃ ಇವತ್ತು ಮೂರ್ತೆದಾರರ ಮೇಲೆ ಲೀಟರ್ ಫೀ ಹಾಕುತ್ತಿದ್ದಾರೆ. ಇವತ್ತು ಒಂದು ಲೀಟರ್ ಶೇಂದಿಗೆ ಒಂದು ರೂಪಾಯಿ ಫೀ ಕೊಡಬೇಕೆಂದು ಸರ್ಕಾರದ ಧೋರಣೆ ಏನಿದೆ, ಅದರ ಬಗ್ಗೆ ಕೂಡ ನಾವು ಹೋರಾಟ ಮಾಡುವಾಗ ಕಳೆದ ಕೆಲವಾರು ತಿಂಗಳಿಂದ ಮೂರ್ತೆದಾರರ ಏನು ಸಹಕಾರ ಸಂಘಗಳಿಗೆ ಈ ಸಹಕಾರ ಸಂಘಗಳಿಗೆ ಸೇಂದಿ ಮಾರಾಟದ ಬಗ್ಗೆ ಲೈಸನ್ಸ್ ನವೀಕರಣ ಮಾಡಬೇಕೆಂಬ ವಿಚಾರವನ್ನು ಮುಂದಿಡುತ್ತಿದ್ದಾರೆ. ಈ ನವೀಕರಣ ಮಾಡುವಾಗ.......

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಇಲ್ಲಿ ಯಾರೂ ಮಂತ್ರಿಗಳು ಇಲ್ಲ ಎಂದು ಹೇಳಿದರು, ಆದರೆ ಅವರು ಭಾಷಣ ಮಾಡುವಾಗ ಅವರು ನಿದ್ದೆ ಮಾಡುತ್ತಿದ್ದಾರೆ.

ಅಧ್ಯಕ್ಷರು : ಸಭಾಪತಿಯವರು ಮಾತನಾಡುತ್ತಿದ್ದಾರೆ, ರಮಾನಾಥ ರೈರವರು ಕೇಳುತ್ತಿದ್ದಾರೆ. ಅವರು ನಿದ್ದೆ ಮಾಡುತ್ತಿಲ್ಲ, ಅವರು ಒಂದೇ ಜಿಲ್ಲೆಯವರು.

ಶ್ರೀ ಯು.ಆರ್. ಸಭಾಪತಿ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಆ ಬಡ ಮೂರ್ತೆದಾರರಿಗೆ ನಮ್ಮ ಅಬಕಾರಿ ಇಲಾಖೆಯವರು ಕಿರುಕುಳ ಕೊಡುತ್ತಿದ್ದಾರೆ. ಅಬಕಾರಿ ಗುತ್ತಿಗೆದಾರರು ಕೋಟ್ಯಾಂತರ ರೂಪಾಯಿಗಳನ್ನು ಲೂಟಿ ಮಾಡುವಾಗ ಈ ಬಗ್ಗೆ ಅಧಿಕಾರಿಗಳು ಏಕೆ ಕ್ರಮ ಕೈಗೊಳ್ಳುವುದಿಲ್ಲ ಎಂದು ನನಗೆ ಅರ್ಥವಾಗುವುದಿಲ್ಲ. ಒಂದು ಬಡ ಮೂರ್ತೆದಾರ ಅವನು ತಂಗಿನ ಮರಕ್ಕೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ ಮೂರು ಮೂರು ಸಲ ಹತ್ತಿ ಒಂದು ವೇಳೆ ಕಾಲು ಜಾರಿ ಅವನು ಬಿದ್ದು ಬಿಟ್ಟರೆ ಅವನಿಗೆ ಗತಿ ಇಲ್ಲ, ಅಂತಹ ಒಬ್ಬ ಮೂರ್ತೆದಾರ ಏನು ಶೇಂದಿಯನ್ನು ಇಳಿಸಿ ಆ ಶೇಂದಿಯನ್ನು ಮಾರಾಟ ಮಾಡತಕ್ಕಂಥ ಮೂರ್ತೆದಾರರದೇ ಆದ ಸಹಕಾರ ಸಂಘದ ಬಗ್ಗೆ ಇವತ್ತು ಅಬಕಾರಿ ಅಧಿಕಾರಿಗಳು ಇಷ್ಟೊಂದು ರೀತಿಯ ಒಂದು ದೌರ್ಜನ್ಯವನ್ನು ತೋರಿಸುತ್ತಾರೆಂದು ಆದರೆ, ಅವರಿಗೆ ರಕ್ಷಣೆ ಕೊಡುವಂತಹ ಜವಾಬ್ದಾರಿ ಹೊಸ ಸರ್ಕಾರಕ್ಕೆ ಇದೆ. ಮೂರ್ತೆದಾರರಿಗೂ ಕೂಡ ರೈತರಿಗೆ ಸಿಗುವಂತಹ ಸೌಲಭ್ಯಗಳು ಸಿಗಬೇಕು. ನಾನು ಏನು ಮೀನುಗಾರಿಕೆ ಬಗ್ಗೆ ಹೇಳಿದ್ದೇನೋ ಅದೇ ರೀತಿ ಮೂರ್ತೆದಾರರಿಗೂ ಕೂಡ ರಕ್ಷಣೆ ಒದಗಿಸಬೇಕೆಂದು ನಾನು ಈ ಸದನದ ನಾಯಕರಲ್ಲಿ ಬೇಡಿಕೊಳ್ಳುತ್ತೇನೆ. ಇವತ್ತು ಆ ಮೂರ್ತೆದಾರರನ್ನು ಸಂಪೂರ್ಣವಾಗಿ ಅಬಕಾರಿ ಇಲಾಖೆಯಿಂದ ಪ್ರತ್ಯೇಕಿಸಿ, ಅವರಿಗೆ ಅಬಕಾರಿ ನೀತಿ ನಿಯಮಗಳು ಅನ್ವಯವಾಗುವುದಿಲ್ಲ ಎನ್ನುವಂತಹ ಧೋರಣೆಯನ್ನು ಸರ್ಕಾರ ರೂಪಿಸಬೇಕು ಎನ್ನತಕ್ಕಂತಹ ಬೇಡಿ ಇಡುತ್ತಿದ್ದೇನೆ. ಇನ್ನು ನಾವು ಸಾಕಷ್ಟು ಸಂಖ್ಯೆಯಲ್ಲಿ ಭಾಷಣಗಳನ್ನು ಮಾಡುತ್ತಾ ಹೋಗುತ್ತೇವೆ. ಗ್ರಾಮ ಮಟ್ಟದಲ್ಲಿ ನಾವು ಚುನಾವಣೆಗೆ ಹೋಗುತ್ತಿರುವಾಗ ನಮ್ಮ ಸದಸ್ಯರೂ ಕೂಡ ಇಲ್ಲಿ ನಡೆದಿರತಕ್ಕ ಅನೇಕ ಮಂದಿ ನಾವು ಗ್ರಾಮ ಮಟ್ಟದಲ್ಲಿ ಹೋಗುವಾಗ ಬೇಕಾದಷ್ಟು ಆರೋಗ್ಯ ಕೇಂದ್ರಗಳನ್ನೂ ನಾವು ನೋಡುತ್ತಿದ್ದೇವೆ. ನಮ್ಮ ಶಾಸಕರ ಆರೋಗ್ಯ ಕೆಟ್ಟು ಹೋದರೆ ನಮಗೆ ಬೇಕಾದಂತಹ ಸೌಲಭ್ಯ ನಮ್ಮ ಶಾಸಕರ ಭವನದ ಕೆಳಗೆ ನೀವು ವ್ಯವಸ್ಥೆ ಮಾಡಿದ್ದೀರಿ, ಆದರೆ ಇವತ್ತು ಒಬ್ಬ ಬಡವ ಅವನಿಗೆ ಒಂದು ಮದ್ದುಬೇಕು, ಅವನಿಗೆ ಹುಷಾರು ಇಲ್ಲದೆ ಬಿದ್ದಾಗ ಅವರು ಏನಾದರೂ ಸಹಾಯ ಬೇಕೆಂದು ಆಸ್ಪತ್ರೆ ಹೋಗಬೇಕಾದರೆ, ನಮ್ಮ ಗ್ರಾಮೀಣ

ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಸರಿಯಾದ ವೈದ್ಯರಿಲ್ಲ, ಸರಿಯಾದ ಸಿಬ್ಬಂದಿ ಇಲ್ಲ ಮತ್ತು ಸರಿಯಾದ ಮದ್ದುಗಳು ಇಲ್ಲ. ಆರೋಗ್ಯ ಮತ್ತು ವಿದ್ಯೆಯನ್ನು ನಮ್ಮ ಜೀವನದಲ್ಲಿ ನಮ್ಮ ಎರಡು ಕಣ್ಣುಗಳನ್ನು ನಾವು ಯಾವ ರೀತಿ ನೋಡುತ್ತಿದ್ದೇವೋ ಆ ದೃಷ್ಟಿಯಲ್ಲಿ ನಾವು ನೋಡಬೇಕಾಗಿದೆ.

ಇವತ್ತು ಸರ್ಕಾರೀ ಆಸ್ಪತ್ರೆ ಬಗ್ಗೆ ನಾನು ನಮ್ಮ ಆರೋಗ್ಯ ಸಚಿವರ ಹತ್ತಿರ ಬೇಡಿಕೊಂಡಾಗ ಎರಡು ಲಕ್ಷ ರೂಪಾಯಿಗಳನ್ನು ಮಂಜೂರಾತಿ ಮಾಡಿದೆ ಎಂದು ಈ ಸದನದಲ್ಲಿ ಹೇಳಿದರು. ಉಡುಪಿ ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಪತ್ಯಾಹಾರ ನೀಡುವಂತಹ ಹಣ ಐದು ಲಕ್ಷ ರೂಪಾಯಿ ಏನಿದೆ ಅದನ್ನು ಸರ್ಕಾರ ಇವತ್ತು ಬಾಕಿ ಇಟ್ಟಿದೆ. ಆದರೆ, ನಾವು ಮಂತ್ರಿಗಳು ಹಾಗೂ ಶಾಸಕರು ಸಮಯಕ್ಕೆ ಸರಿಯಾಗಿ ನಮ್ಮ ಟಿ.ಎ.ಡಿ.ಎ ಡ್ರಾ ಮಾಡಿ ಹೋಗುತ್ತೇವೆ. ಒಬ್ಬ ಮಂತ್ರಿಗಳು ಉಡುಪಿಗೆ ಹೋಗಿ ಬಂದರೆ 400 ಕಿ.ಮೀ. ಹೋಗಿ ಬಂದರೆ, ಇವತ್ತು ಮೂರು ಸಾವಿರದಿಂದ ನಾಲ್ಕು ಸಾವಿರ ತೆಗೆದುಕೊಳ್ಳುವುದಕ್ಕೆ ಹಣ ಇದೆ. ಆದರೆ ಒಬ್ಬ ಬಡವ ಒಂದು ಆರೋಗ್ಯ ಕೇಂದ್ರಕ್ಕೆ ಅಥವಾ ಸರ್ಕಾರೀ ಆಸ್ಪತ್ರೆಗೆ ಒಳ ರೋಗಿಯಾಗಿ ಹೋದರೆ ಅವನಿಗೆ ಕೊಡತಕ್ಕಂತಹ ಪತ್ಯಾಹಾರ ಏನಿದೆ ಅದನ್ನು ಕೊಡತಕ್ಕಂತಹ ಹಣವೂ ನಮ್ಮಲ್ಲಿ ಇಲ್ಲವೇ? ಹಾಗಾದರೆ, ಈ ಸರ್ಕಾರ ನಮಗೆ ಬೇಕೆ?

3.55 ಪಿ.ಎಂ.

ಏಕೆ ಈ ಶಾಸನಸಭೆಯೊಳಗೆ ಬರಬೇಕು? ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, 5 ಲಕ್ಷ 75 ಸಾವಿರ ರೂಪಾಯಿ ಬಾಕಿಯಲ್ಲಿ 2 ಲಕ್ಷ ರೂಪಾಯಿ ಕೊಡುತ್ತೇವೆ ಎಂದು ಹೇಳಿದರು. ಇವತ್ತಿನ ದಿವಸ ಆ ಸರ್ಕಾರಿ ಆಸ್ಪತ್ರೆಯಲ್ಲಿ ಎಕ್ಸ್‌ರೇ ಇಲ್ಲ, ಮದ್ದುಗಳು ಇಲ್ಲ, ಅಲ್ಲಿ ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಲ್ಲಿಯ ಕಟ್ಟಡಗಳು ದುರಸ್ತಿಯಾಗಿಲ್ಲ. ಅದರ ರಿಪೇರಿಗೆ ಹಣ ಕೊಡುತ್ತ ಇಲ್ಲ. ನಮ್ಮ ಉಡುಪಿ ಸರ್ಕಾರಿ ಆಸ್ಪತ್ರೆಗೆ 25 ಲಕ್ಷ ರೂಪಾಯಿ ಕೊಡಿ ಎಂದು ಕೇಳಿದರೆ, ಅದಕ್ಕೆ ಸರ್ಕಾರಿ ಹಣ ಎಲ್ಲಿಂದ ತರುವುದು ಎಂದರೆ ಹೇಗೆ? ವಿಶ್ವ ಬ್ಯಾಂಕಿನಲ್ಲಿ ಏನಾದರೂ ಸ್ಕೀಂ ಇದೆಯಾ? ಅದರ ಜೊತೆಗೆ ನಾವೇನಾದರೂ ಪ್ರಯತ್ನ ಮಾಡುವುದಕ್ಕೆ ಆಗುತ್ತದೆಯೇ? ಇವತ್ತು ಶಾಸಕರಾದ ನಮಗೆ ನಮ್ಮ ಭತ್ಯೆ ಏರಿಸಲಿಕ್ಕೆ, ನಮಗೆ ಬೇಕಾದ ಹಣ ಸೌಲಭ್ಯ ಇದೆ. ನಮಗೆ ಕಾಂಟೆಸ್ಸಾ ಕಾರು ತರುವುದಕ್ಕೆ ಬೇಕಾದ ಹಣ ಇದೆ. ನಮ್ಮ ಮಂತ್ರಿಗಳ ಮನೆಯನ್ನು ಶೃಂಗಾರ ಮಾಡುವುದಕ್ಕೆ ನಮಗೆ ಬೇಕಾದಷ್ಟು ಹಣ ಇದೆ. ಆದರೆ ಇವತ್ತು ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ದುರಸ್ತಿ ಮಾಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ. ಹಾಗಾದರೆ ಬದಲಾದ ಪರಿಸ್ಥಿತಿಯಲ್ಲಿ ಇವತ್ತು ಜನತಾ ದಳ ಏನು ಅಧಿಕಾರಕ್ಕೆ ಬಂದಿದೆ. ಈ ಸರ್ಕಾರ ಅಧಿಕಾರ ಸೂತ್ರ ವಹಿಸಿಕೊಂಡ ಮೇಲೆ ಸರ್ಕಾರಕ್ಕೆ ನಿಜವಾದ ಕಳಕಳಿ ಇದೆ ಎನ್ನುವುದಾದರೆ ಗ್ರಾಮೀಣ ಪ್ರದೇಶಮಟ್ಟದ ಸರ್ಕಾರಿ ಆಸ್ಪತ್ರೆಗಳು ಏನಿವೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಏನಿವೆ ಅವುಗಳ ಉದ್ಧಾರವನ್ನು ಸಂಪೂರ್ಣವಾಗಿ ಮಾಡತಕ್ಕಂಥ ಪಣವನ್ನು ಇವತ್ತಿನ ದಿವಸ ಈ ಸರ್ಕಾರ ಮಾಡಬೇಕು ಎಂದು ನಾನು ಹೇಳಬಯಸುತ್ತೇನೆ.

ಈ ವಿಚಾರದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ನೀತಿ ನಿಯಮಗಳು ಇಲ್ಲ. ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಈ ವಿಷಯದಲ್ಲಿ ನಾವು ಸಾಕಷ್ಟು ಅಕ್ಷರ ಕ್ರಾಂತಿ ಮಾಡಬೇಕು, ಸಾಕ್ಷರತಾ ಆಂದೋಲನ ಮಾಡಬೇಕು ಎಂದು ಹೇಳುತ್ತಿದ್ದೇವೆ. ಬಹಳಷ್ಟು ಯೋಜನೆಗಳನ್ನು ನಾವು ರೂಪಿಸಿಕೊಂಡಿದ್ದೇವೆ. ಆದರೆ ಮಾನ್ಯ ಅಧ್ಯಕ್ಷರೆ, ಬಹಳ ಶೋಚನೀಯವಾದಂತಹ ಸಮಸ್ಯೆಗಳು ಗ್ರಾಮೀಣ ಮಟ್ಟದ

ವಿದ್ಯಾ ಕೇಂದ್ರಗಳಲ್ಲಿ ನಡೆಯುತ್ತಿವೆ. ಇವತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗಲಿ, ಬೇರೆ ಇನ್ನಿತರ ಜಿಲ್ಲೆಗಳಲ್ಲಾಗಲಿ ಗ್ರಾಮೀಣ ಪ್ರದೇಶದ ಒಬ್ಬ ಬಡವ ಅವನ ಮಗನನ್ನು ಶಾಲೆಗೆ ವಿದ್ಯಾಭ್ಯಾಸ ಕಲಿಸುವುದಕ್ಕೆ ಕಳುಹಿಸಿದರೆ ಅಲ್ಲಿ ಉಪಾಧ್ಯಾಯರು ಇಲ್ಲ. ಇದ್ದರೂ ಕೂಡ ಇನ್ನೂರು, ಮುನ್ನೂರು, ನಾಲ್ಕುನೂರು ಜನರಿಗೆ ಒಬ್ಬನಿರುವ ಏಕೋಪಾಧ್ಯಾಯ ಶಾಲೆಗಳು. ಆ ಶಾಲೆಗಳಲ್ಲಿ ಕುಳಿತುಕೊಳ್ಳುವುದಕ್ಕೆ ಒಂದು ಕುರ್ಚಿಯ ವ್ಯವಸ್ಥೆ ಸರಿಯಾಗಿಲ್ಲ. ಅಲ್ಲಿ ಇರುವ ನೂರು ಅಥವಾ ಇನ್ನೂರು ಜನ ಮಕ್ಕಳಿಗೆ ಅದರಲ್ಲೂ ಒಂದು ಮತ್ತು 2ನೇ ತರಗತಿಗಳಲ್ಲಿ ನಾವು ಹೆಚ್ಚಿನ ಆದ್ಯತೆ ಕೊಡಬೇಕು. ಒಂದು ಮಗು ಬೆಳವಣಿಗೆಯಲ್ಲಿ ಬರುವಾಗ ಅದಕ್ಕೆ ಅವನಿಗೆ ನಾವು ಸಾಕಷ್ಟು ವಿದ್ಯಾಭ್ಯಾಸ ಕೊಡಬೇಕು ಎನ್ನುವಂತಹ ಒಂದು ಪರಿಸ್ಥಿತಿಯನ್ನು ನಿರ್ಮಾಣ ಮಾಡಬೇಕಾದರೆ ನಾವು ನಮ್ಮ ಪದ್ಧತಿಯನ್ನು ಬದಲಾವಣೆ ಮಾಡಬೇಕು. ಈಗ ನಾವು ಏನು ಶಾಸಕರು ಮತ್ತು ಮಂತ್ರಿಗಳಿದ್ದೇವೆ, ನಾವು ನಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗೆ ಕಳುಹಿಸುತ್ತೇವೆ. ನಮಗೆ ಅನುಕೂಲ ಪರಿಸ್ಥಿತಿ ಇದೆ ಅದಕ್ಕೆ ನಾವು ಕಳುಹಿಸುತ್ತಿದ್ದೇವೆ. ಅವರಿಗೆ ಬೇಕಾದ ಅಮೇರಿಕನ್ ಕಿಟ್ಸ್ ಮುಂತಾದ ಬೇರೆ ಬೇರೆ ರೀತಿಯ ವ್ಯವಸ್ಥೆಗಳು ಶಾಲೆಗಳಲ್ಲಿ ಇವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಸರ್ಕಾರಿ ವಿದ್ಯಾ ಕೇಂದ್ರಗಳಾದ ಪ್ರಾಥಮಿಕ ಶಾಲೆಗಳನ್ನು ನಂಬಿಕೊಂಡಿರತಕ್ಕಂಥ ಒಬ್ಬ ಬಡವ ಆತನ ಮಗನಿಗೆ ಒಳ್ಳೆಯದಾಗಬೇಕು ಎಂದು ಶಾಲೆಗೆ ಕಳುಹಿಸಿದರೆ ಆ ಶಾಲೆಯಲ್ಲಿ ಇನ್ನೂರು, ಮುನ್ನೂರು ಜನ ಮಕ್ಕಳು,

ಅದರಲ್ಲೂ ಒಂದರಿಂದ ಐದನೇ ತರಗತಿಯವರೆಗೂ ಒಬ್ಬನೇ ಉಪಾಧ್ಯಾಯ ಕಲಿಸಿಕೊಂಡು ಬರಬೇಕಾದರೆ ಆ ಮಕ್ಕಳ ಬೆಳವಣಿಗೆ ಹೇಗೆ ತಾನೇ ಆಗಬೇಕು. ಆ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಎಲ್ಲಿ ಬರಬೇಕು? ಇವತ್ತು ವಿದ್ಯಾಭ್ಯಾಸ ಕೇಂದ್ರಗಳ ಬಗ್ಗೆ ನಮ್ಮ ಸರ್ಕಾರ ಯಾವ ಧೋರಣೆಯನ್ನು ತಳೆದಿದೆ. ನಾವು ಭಾಷಣದಲ್ಲಿ ಆ ಸರ್ಕಾರ ಮಾಡಿದ್ದು, ಈ ಸರ್ಕಾರ ಮಾಡಿದ್ದು ಎಂದು ಹೇಳುತ್ತೇವೆ. ನಾವು ಇಲ್ಲಿ ಹೊಸದಾಗಿ ಶಾಸನ ಸಭೆಗೆ ಬಂದು ಇವತ್ತು ನೋಡಿದ್ದು ಏನು? ಒಬ್ಬರ ಮೇಲೆ ಒಬ್ಬರ ಆರೋಪ. ಹಿರಿಯ ಸದಸ್ಯರು ಇದ್ದಾರೆ. ನಾವೆಲ್ಲಾ ಬಾಯಿಮುಚ್ಚಿಕೊಂಡು ಕುಳಿತಿದ್ದೇವೆ. ಒಬ್ಬರೂ ತಾಳ್ಮೆ ಇಲ್ಲದ ರೀತಿಯಲ್ಲಿ ಮಾತನಾಡಿದರೆ ಹೇಗೆ? ಹೊರಗಡೆ ನಮ್ಮನ್ನು ಆರಿಸಿ ಕಳುಹಿಸಿರತಕ್ಕಂತ ಜನ ಏನಿದ್ದಾರೆ ಅವರೆಲ್ಲಾ ನಮ್ಮನ್ನು 'ಎದುರು ನೋಡುತ್ತಿದ್ದಾರೆ', ಸೋಮವಾರದಿಂದ ಒಂದು ವಾರದ ತನಕ ನಮ್ಮ ಶಾಸಕರು ಎಲ್ಲಾ ಬೆಂಗಳೂರಿಗೆ ಹೋಗಿದ್ದಾರೆ, ವಿಧಾನಸಭೆ ನಡೆಯುತ್ತಿದೆ, ನಾವು ಮತ್ತೆ ಆದಿತ್ಯವಾದ ಊರಿಗೆ ಹೋದಾಗ, ಅವರೆಲ್ಲಾ ನಾವು ಏನೋ ಗಂಟು ತೆಗೆದುಕೊಂಡು ಬರುತ್ತೇವೆ ಎಂದು ಆಲೋಚನೆ ಮಾಡಿರಬಹುದು. ಅದಕ್ಕೋಸ್ಕರ ನಾವು ಊರಿಗೆ ಹೋದಾಗ ಅವರು ಏನಾದರೂ ಕೇಳಿದರೆ ಏನು ಹೇಳಬೇಕು. ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರು ಇವತ್ತು ಮಾತನಾಡಿದರು. ಉಪಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಮಾತನಾಡಿದರು ಎಂದು ಹೇಳಬೇಕು? ಅಥವಾ ನೀವೆಲ್ಲಾ ಒಟ್ಟು 120 ಮಂದಿ ಬಂದಿದ್ದೀರಿ, ನಾವು 40 ಮಂದಿ ಬಂದಿದ್ದೆವು ಎಂಬುದನ್ನು ಜನ ಕೇಳಬಯಸುವುದಿಲ್ಲ. ಅದಕ್ಕೆ ಜನ ಉತ್ತರ ಕೊಟ್ಟಾಗಿದೆ. ಇವತ್ತು 40 ಜನ ಬಂದವರು ನಾಳೆ ನಾಲ್ಕಕ್ಕೆ ಹೋಗಬಹುದು. 120 ಜನ ಬಂದವರು 12ಕ್ಕೆ ಬರಬಹುದು. 10 ಬಂದವರು 112ಕ್ಕೆ ಹೋಗಬಹುದು. ಅದನ್ನು ಜನ ತೀರ್ಮಾನ ಮಾಡುತ್ತಾರೆ. ಆದರೆ ಇವತ್ತು ನಾವು ಉತ್ತರ ಕೊಡಬೇಕಾದ ವಿಚಾರ-ಧಾರೆಗಳು ಏನು ಇವೆ, ಮೂಲಭೂತವಾಗಿ ಇರತಕ್ಕ ಸಮಸ್ಯೆಗಳ ಪರಿಹಾರವನ್ನು ಮಾಡುವುದಕ್ಕೆ ನಾವು ರಚನಾತ್ಮಕವಾದ ಕಾರ್ಯಕ್ರಮವನ್ನು ಈ ಸದನದಲ್ಲಿ ಹಾಕಿದ್ದೇವೆಯೇ ಎನ್ನುವಂತಹ ಆತ್ಮ ವಿಮರ್ಶೆಯನ್ನು ಮಾಡಬೇಕಾಗಿದೆ. ಇವತ್ತು ವಿದ್ಯಾ ಕೇಂದ್ರಗಳು ಸಾಕಷ್ಟು ಬದಲಿವೆ. ಸಾಕಷ್ಟು ಸಂಖ್ಯೆಯಲ್ಲಿ ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ.

ಅವರಿಗೆ ಉದ್ಯೋಗ ಕೊಡುವುದಿದ್ದರೆ, ನಮ್ಮ ಸರ್ಕಾರ ಎಷ್ಟು ಬೇಕಾದರೆ ಉದ್ಯೋಗ ಭರವಸೆಯನ್ನು ಕೊಡಬಹುದು. ಇವತ್ತು ಶಾಲೆಗಳಲ್ಲಿ ಅಧ್ಯಾಪಕರು ಇಲ್ಲಿ, ಎಲ್ಲಿ ಶಿಕ್ಷಕರು ಇಲ್ಲ ಆ ಶಿಕ್ಷಕರ ನೇಮಕಾತಿಗಾಗಿ ನಮ್ಮ ಸರ್ಕಾರ ಯಾವ ಧೋರಣೆ ತಾಳಿದೆ? ಇವತ್ತು ಶಾಲಾ ಕಟ್ಟಡ ದುರಸ್ತಿಗಾಗಿ ಎಷ್ಟು ಹಣ ವಿಂಗಡಣೆ ಮಾಡಿದ್ದೇವೆ. ಇದರ ಬಗ್ಗೆ ನಮ್ಮ ತೀರ್ಮಾನ ಇಲ್ಲ, ಕೇಳಿದರೆ ಮಾಡೋಣ, ಆದರೆ ಹಣ ಇಲ್ಲ ಏನು ಮಾಡೋದು, ಮೊಯಿಲಿಯವರು ಎಲ್ಲಾ ಹಣ ಖಾಲಿ ಮಾಡಿಕೊಂಡು ಹೋಗಿದ್ದಾರೆ ಎಂದು ನೀವು ಹೇಳುವುದಾದರೆ ಮೊಯಿಲಿಯವರು ಅಧಿಕಾರಕ್ಕೆ ಬಂದಾಗ ಬಂಗಾರಪ್ಪನವರು ಎಲ್ಲಾ ಖಾಲಿ ಮಾಡಿಕೊಂಡು ಹೋದರು ಎಂದು ಹೇಳಿದರು. ಹೀಗೆ ಒಬ್ಬೊಬ್ಬರು ಅಧಿಕಾರಕ್ಕೆ ಬಂದು ಒಬ್ಬೊಬ್ಬರು ಖಾಲಿ ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಿಕೊಳ್ಳುವುದಿದ್ದರೆ ನಾವು ಬದಲಾವಣೆಯನ್ನು ಏಕೆ ಮಾಡಬೇಕು?

ದಯವಿಟ್ಟು ಗ್ರಾಮೀಣ ಮಟ್ಟದ ಮತದಾರರು ಯಾರಿದ್ದಾರೆ, ಅವರಿಗೆ ರಕ್ಷಣೆ ಕೊಡಬೇಕಾಗಿದೆ. ಈ ಬಡವರ ಬಗ್ಗೆ ಕಾಳಜಿ ವಹಿಸಬೇಕು. ಅವರಿಗೆ ವಿದ್ಯೆ, ಆರೋಗ್ಯ ಕೊಡಬೇಕು. ಒಂದು ವೇಳೆ ವಿದ್ಯೆ ಇಲ್ಲದಿದ್ದರೆ ಅವರ ಮಗ ಕಳ್ಳನಾಗಬಹುದು ಕಠೋರನಾಗಬಹುದು, ಸಮಾಜಘಾತುಕ ಶಕ್ತಿಯಾಗಬಹುದು. ಅವರು ಸಮಾಜಘಾತುಕ ಶಕ್ತಿಗಳಾಗಿ ಆಗುವುದಕ್ಕೆ ಕಾರಣ ಯಾರು? ನಮ್ಮ ಶಾಸಕಾಂಗ ಆಗಬಹುದೇನೋ ಎಂದು ಆಪಾದನೆಯನ್ನು ನಾವು ಮಾಡಬೇಕಾದಂತಹ ಪರಿಸ್ಥಿತಿ ನಮ್ಮ ಮೇಲೆ ಬೀಳಬಹುದು. ಆದುದರಿಂದ ಘನ ಗಂಭೀರವಾದ ಒಂದು ನಿರ್ದಿಷ್ಟವಾದ ಕ್ರಮ, ಒಂದು ನಿರ್ದಿಷ್ಟವಾದ ಧೋರಣೆಯನ್ನು ನಮ್ಮ ಸರ್ಕಾರ ದಯಮಾಡಿ ಈ ವಿದ್ಯಾ ಇಲಾಖೆಗೆ, ಕೊಡಬೇಕೆಂಬ ವಿಚಾರವನ್ನು ನಾನು ತಮ್ಮ ಮುಂದಿಡಬಯಸುತ್ತೇನೆ. ಇನ್ನು ಶಿಕ್ಷಕರ ನೇಮಕಾತಿಯ ಬಗ್ಗೆ ಯಾವುದೇ ರೀತಿಯ ಪ್ರಸ್ತಾವನೆ ಇಲ್ಲ, ಶಿಕ್ಷಕರ ನೇಮಕಾತಿಯ ವ್ಯವಸ್ಥೆ ಏನಿದೆ, ಅದರ ಬಗ್ಗೆ ಹೋರಾಟ ಮಾಡಿದ್ದೇವೆ. ಯಾರೂ ಮಾತನಾಡುವವರೇ ಇಲ್ಲ, ಪ್ರಕೃತಿಯಲ್ಲಿ ನಾವು ಆಕಸ್ಮಿಕವಾಗಿ ಮನುಷ್ಯರಾಗಿ ಹುಟ್ಟಿದ್ದೇವೆ. ನಾವು ಜೀವಜಂತುಗಳಾಗಿ, ನರಿ ನಾಯಿಗಳಾಗಿ, ಪಕ್ಷಿಗಳಾಗಿ ಹುಟ್ಟಬಹುದಾಗಿತ್ತು. ಆದರೆ ಪ್ರಕೃತಿಯಲ್ಲಿ ನಾವು ಮಾನವರಾಗಿ ಹುಟ್ಟಿದ್ದೇವೆ. ಮಾನವರಾಗಿ ಹುಟ್ಟಿದಮೇಲೆ ಮಾನವನನ್ನು ಸಮಾನವಾಗಿ ನೋಡಿಕೊಳ್ಳಬೇಕಾದಂತದ್ದು ನಮ್ಮ ಧರ್ಮ. ದ್ವೇಷ, ಅಸೂಯೆ,

ಇವುಗಳಿಂದ ನಾವು ಅವರನ್ನು ಕೆಳಮಟ್ಟದಲ್ಲಿಡಬೇಕೆನ್ನುವುದರ ಬಗ್ಗೆ ನಾವು ಹೋರಾಟ ಮಾಡುವುದಿದ್ದರೆ ಪ್ರಕೃತಿ ನಮಗೆ ಮಾನವರಾಗಿ ಹುಟ್ಟಿರುವುದಕ್ಕೆ ಕೊಟ್ಟಿರುವಂತಹ ಅನುಕಂಪ ಏನಿದೆಯೋ, ಅದಕ್ಕೆ ದ್ರೋಹ ಮಾಡಿದಂತಾಗುತ್ತದೆ. ಇವತ್ತು ನಾವು ಅಕಸ್ಮಾತ್ತಾಗಿ ಹುಟ್ಟಿದ ಮೇಲೆ ನಮ್ಮಿಂದ ಆದ ಕೆಲಸವನ್ನು ಮಾಡಬೇಕಾಗುತ್ತದೆ. ಅದನ್ನು ನಾವು ಈಗ ಮಾಡುತ್ತಿಲ್ಲ, ಆದುದರಿಂದ ನಾನು ಹೇಳುವುದೇನೆಂದರೆ ಇವತ್ತು ಶಿಕ್ಷಕರು ಹೋರಾಟ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಅಂತಹ ಶಿಕ್ಷಕರಿಗೆ ರಕ್ಷಣೆ ಕೊಡುವಂತಹ ಕಾರ್ಯಕ್ರಮವನ್ನು ನಾವು ಮಾಡಬೇಕಾಗುತ್ತದೆ. ಇತ್ತೀಚಿಗೆ ಕಳೆದ ವರ್ಷದಲ್ಲಿ ಬಹಳಷ್ಟು ಪ್ರಕೃತಿಯ ವಿಕೋಪದಿಂದಾಗಿ ನಮ್ಮ ರಾಜ್ಯದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಜನರು ಸತ್ತಿದ್ದಾರೆ. ಸಾಕಷ್ಟು ಮನೆಗಳು ನಿರ್ನಾಮವಾಗಿದೆ. ಅಂಥ ಸ್ಥಳಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಮಂತ್ರಿಗಳು, ಅಧಿಕಾರಿಗಳು, ಎಲ್ಲಾ ಸುತ್ತಾಡಿ ಹೋದರು. ಕರ್ನಾಟಕ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದಾಗಿ ಸುಮಾರು 1 ಸಾವಿರ ಕೋಟಿ ರೂ.ಗಳ ಆಸ್ತಿ ನಾಶವಾಗಿದೆ. ಇವತ್ತು ಪ್ರಕೃತಿ ವಿಕೋಪದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದೇ ಒಂದು ವಿಚಾರವೂ ಇಲ್ಲ, ಇಂದಿನ ಸರ್ಕಾರ ಪ್ರಕೃತಿ ವಿಕೋಪದ ಬಗ್ಗೆ ಏನೂ ಮಾಡಲಿಲ್ಲ, ಎನ್ನುವಂತಹ

ಆರೋಪ ಮಾಡಬಹುದು. ಆದರೆ ಅದರ ಬಗ್ಗೆ ಹೊಸ ಸರ್ಕಾರ ಏನು ಮಾಡಿದೆ ಎನ್ನುವುದರ ಬಗ್ಗೆ ಒಂದು ನಿರೂಪಣೆ ಬೇಕಾಗಿತ್ತು. ಅದು ಇವತ್ತು ಬರಲಿಲ್ಲ ಇದು ಬಹಳ ವಿಷಾದನೀಯ. ಕೇಂದ್ರದಿಂದ ಮಂತ್ರಿಗಳು ಬಂದರು. ವಿಮಾನದಲ್ಲಿ ಸುತ್ತಾಡಿದರು.

ಪಾಪ, ನೆರೆಪೀಡಿತ ಪ್ರದೇಶಗಳಲ್ಲಿ ಜನರು ಮನೆಯ ಮಾಡಿನ ಮೇಲೆ ಕುಳಿತುಕೊಂಡು ಗಡ ಗಡ ನಡುಗುತ್ತಾ ಚಳಿಯಲ್ಲಿ ಏನು ಸಿಕ್ಕುತ್ತದೋ ಎಂದು ಮೇಲೆ ವಿಮಾನ ಸುತ್ತುವುದನ್ನು ನೋಡುತ್ತಿದ್ದರು. ಮಾನ್ಯ ಮುಖ್ಯಮಂತ್ರಿಯವರು, ಕೇಂದ್ರ ಮಂತ್ರಿಗಳು, ಎಲ್ಲರನ್ನು ಕಟ್ಟಿಕೊಂಡು ಇವರ ಒಂದು ಮೇಳ ಹೋಯಿತು. ಸಾಕಷ್ಟು ಸಲ ನಾವು ಬೊಬ್ಬೆ ಇಟ್ಟಾಯಿತು. ಕೇಂದ್ರದಿಂದ ಒಂದು ಚಿಕ್ಕಾಸೂ ಹಣ ನಮ್ಮ ರಾಜ್ಯಕ್ಕೆ ಇವತ್ತು ಪ್ರಕೃತಿ ವಿಕೋಪಕ್ಕಾಗಿ ಬಂದಿಲ್ಲ. ಇವತ್ತು ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೊಸದಾಗಿ ಪ್ರಸ್ತಾವನೆ ಮಾಡಬೇಕಾಗಿತ್ತು.ಪ್ರಕೃತಿ ವಿಕೋಪದಿಂದಾಗಿ ಈ ರಾಜ್ಯದ ಜನತೆ ಏನು ಆಸ್ತಿಪಾಸ್ತಿಗಳನ್ನು ಕಳೆದುಕೊಂಡಿದ್ದಾರೋ? ಅವರಿಗೆ ಸೂಕ್ತವಾದಂತಹ ಪರಿಹಾರವನ್ನು ಕೊಡುವುದಕ್ಕೆ ಇವತ್ತಿನವರೆಗೂ ಆಗಲಿಲ್ಲ. ಇದ್ದ ಬದ್ದ ವ್ಯವಸ್ಥೆಯಲ್ಲಿ ಸಾವಿರಾರು ಕೋಟಿ ರೂಪಾಯಿಗಳು ನಿರ್ನಾಮವಾದರೆ ಒಂದೋ ಎರಡೋ ಕೋಟಿ ರೂ.ಗಳನ್ನು ಬಟವಾಡೆಯಾಗಿ ಕೊಡುವಾಗ ಅವುಗಳ ಬಹಳಷ್ಟು ಫೋಟೋಗಳನ್ನು ತೆಗೆಸಿಕೊಂಡು, ಪರಿಹಾರ ಕೊಟ್ಟರು. ಸಾವಿರಾರು ಜನ ಬಡರೈತರು ಭತ್ತದ ಉತ್ಪಾದನೆ ಮೇಲೆ ಹಾಕಿರುವಂತಹ ಬಂಡವಾಳ ಎಲ್ಲವನ್ನು ನೆರೆ ಬಂದು ಕಳೆದುಕೊಂಡಿದ್ದಾರೆ. ಅವರಿಗೆ ಇವತ್ತಿನವರೆಗೆ ಸೂಕ್ತವಾದ ಪರಿಹಾರವನ್ನು ಕೊಡುವುದಕ್ಕೆ ಆಗಲಿಲ್ಲ, ಆದುದರಿಂದ ಹೊಸ ಸರ್ಕಾರ ಈ ಪ್ರಕೃತಿ ವಿಕೋಪದಿಂದ ನೊಂದವರಿಗೆ ಯೋಗ್ಯ ರೀತಿಯಲ್ಲಿ ಏನು ಪರಿಹಾರ ಕೊಡಬೇಕೋ ಮತ್ತು ಹಿಂದಿನ ಸರ್ಕಾರ ಕೇಂದ್ರ ಸರ್ಕಾರಕ್ಕೆ ಏನು ಮನವಿಯನ್ನು ಮಾಡಿತ್ತೋ, ಅದನ್ನು ಅಲ್ಲೇ ಮುಚ್ಚಿ ಹಾಕುವುದಲ್ಲ, ನಮ್ಮ ಸರ್ಕಾರ ಕೇಂದ್ರವನ್ನು 500 ಕೋಟಿ ರೂ.ಗಳು ಬೇಕೆಂದು ಮನವಿ ಮಾಡಿಕೊಂಡಿದ್ದರು. ಆದರೆ ಕನಿಷ್ಟ 50 ಕೋಟಿ ರೂ.ಗಳನ್ನಾದರೂ ಬಿಡುಗಡೆ ಮಾಡಿ ಎಂದು ಹೇಳಿದರೂ ಕೂಡ 5 ಕೋಟಿ ರೂ.ಗಳು ಕೂಡ ಬಂದಿರುವುದಿಲ್ಲ. ಆದರೆ ಇವತ್ತು ಎಲ್ಲೋ ಅಸ್ಸಾಂ ಅಥವಾ ಮಹಾರಾಷ್ಟ್ರಗಳಲ್ಲಿ ಭೂಕಂಪ, ಪ್ರಕೃತಿ ವಿಕೋಪವಾದಾಗ ಸಾರ್ವಜನಿಕರ ಎದುರು ಪಾದಯಾತ್ರೆ ಮಾಡಿಕೊಂಡು ಹೋಗುತ್ತಿದ್ದೇವೆ.

ಆದರೆ, ನಮ್ಮಿಂದ ಆಯ್ಕೆಯಾದಂಥ ಸರ್ಕಾರ, ನಮ್ಮಿಂದ ತೆರಿಗೆಯನ್ನು ಪಡೆಯತಕ್ಕಂಥ ಸರ್ಕಾರ ಇವತ್ತು ನಮ್ಮ ಕಷ್ಟಕಾಲಕ್ಕೆ ಬೇಕಾದಂಥ ಸವಲತ್ತುಗಳನ್ನು ಕೊಡದೆ ಇದ್ದರೆ ನಾವು ಸಂಕಷ್ಟದಲ್ಲಿರುವ ಆ ಗ್ರಾಮೀಣ ಮಟ್ಟದ ಜನಗಳ ಹತ್ತಿರ ಹೋಗುವುದಕ್ಕೆ ಸಾಧ್ಯ ಇದೆಯೋ? ಇದರಲ್ಲಿ ಬಿಜೆಪಿ ಪ್ರಶ್ನೆ ಆಗಲೀ, ಕಾಂಗ್ರೆಸ್ ಪ್ರಶ್ನೆಯಾಗಲೀ, ಕರ್ನಾಟಕ ಕಾಂಗ್ರೆಸ್ ಮತ್ತು ಜನತಾದಳದ ಪ್ರಶ್ನೆಗಳು ಬರುವುದಿಲ್ಲ. ಚುನಾಯಿತ ಪ್ರತಿನಿಧಿಗಳು ಮತ್ತೊಮ್ಮೆ ಹೋಗಬೇಕಾದರೆ, ನಾವು ಪರಿಹಾರದ ಬಗ್ಗೆ ಏನಾದರೂ ಉತ್ತರ ಹೇಳಬೇಕಾದಂಥ ಪರಿಸ್ಥಿತಿ ನಮ್ಮ ಎದುರಿನಲ್ಲಿ ಇದೆ. ಇದರ ಬಗ್ಗೆಯೂ ಸರ್ಕಾರ ಗಮನಕೊಡಬೇಕಾಗಿದೆ. ಇನ್ನು ರಾಜ್ಯಪಾಲರ ಭಾಷಣ ಏನು ಇದೆ ಈ ಪ್ರಸ್ತಾವನೆಯಲ್ಲಿ ಯಾವುದೇ ರೀತಿಯ ಬಡವರ ಕಲ್ಯಾಣ ಕಾರ್ಯಕ್ರಮಗಳು ಕಾಣುತ್ತಿಲ್ಲ ಎನ್ನುವುದು ಇಂದು ವಿಷಾದನೀಯವಾದ ವಿಚಾರ. ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಅನೇಕ ಬಡವರ ಕಲ್ಯಾಣ ಕಾರ್ಯಕ್ರಮಕ್ಕಾಗಿ ಆಶ್ರಯ, ಅಕ್ಷಯ, ಆರಾಧನಾ, ವಿಶ್ವ ಮುಂತಾದ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದ್ದರು. ಇವತ್ತು ಈ ಕಾರ್ಯಕ್ರಮಗಳು ಏನಾಗುತ್ತಿದೆ.

ಮಾನ್ಯ ಖರ್ಗೆಯವರು ಹೇಳಿದರು ಅದರಲ್ಲಿ ಕೆಲವು ಕುಂದುಕೊರತೆಗಳು ಇರಬಹುದು ನಾನು ಇಲ್ಲ ಎಂದು ಹೇಳುವುದಿಲ್ಲ, ಆ ಕುಂದುಕೊರತೆಗಳು ಇದ್ದುದಕ್ಕೋಸ್ಕರ ಬಡವರ ಕಲ್ಯಾಣ ಕಾರ್ಯಕ್ರಮಗಳನ್ನು ರದ್ದುಮಾಡುವಂಥ ಕೆಲಸವನ್ನು ತಾವು ದಯವಿಟ್ಟು ಮಾಡಬೇಡಿ. ಇವತ್ತು ಬಡವರ ಕಲ್ಯಾಣ ಕಾರ್ಯಕ್ರಮಕ್ಕಾಗಿ ನೀವು ನಿರ್ದಿಷ್ಟವಾದಂಥ ಒಂದು ಯೋಜನೆಯನ್ನು ರೂಪಿಸಬೇಕೆಂದು ಹೇಳಿ ಈ ಸರ್ಕಾರದ ಮುಂದೆ ನಾನು ಹೇಳಬಯಸುತ್ತೇನೆ. ಇನ್ನು ನಾವು ಹಳ್ಳಿಹಳ್ಳಿಗಳಲ್ಲಿ ಹೋದಾಗ ಸಾಕಷ್ಟು ಸಂಖ್ಯೆಯಲ್ಲಿ ನೀರಿಲ್ಲ ನೀರಿಲ್ಲ, ನೀರಿಲ್ಲ ಎಂಬುದನ್ನು ಕೇಳುತ್ತಿದ್ದೇವೆ. ಒಂದು ನೀರಿನ ಸುವ್ಯವಸ್ಥಿತವಾಗಿರತಕ್ಕಂಥ ವ್ಯವಸ್ಥೆ ಈ ರಾಜ್ಯದಲ್ಲಿ ಇಲ್ಲ, ಆದರೆ ಒಂದು ಗಂಟೆಗಳ ಕಾಲ ನಮ್ಮ ರೂಮಿನಲ್ಲಿ ನೀರು ಬರಲಿಲ್ಲ ಎಂದರೆ ನಾವು ಬೇಕಾದಷ್ಟು ಗಲಾಟೆ ಮಾಡುತ್ತೇವೆ. ಇವತ್ತು ಆ ಹಳ್ಳಿಗಳಲ್ಲಿ ಆ ಗ್ರಾಮೀಣ ಹೆಂಗಸರು ಕೊಡ ಪಾನಗಳನ್ನು ಹಿಡಿದುಕೊಂಡು ಒಂದೊಂದು ಕಿಲೋಮೀಟರ್ ಹೋಗುವಂಥ ಪರಿಸ್ಥಿತಿ ಇದೆ. ಕೆಲವರು ದೋಣಿಯಲ್ಲಿ ಎರಡು ಮೂರು ಕೊಡ ಪಾನಗಳನ್ನು ಕಟ್ಟಿಕೊಂಡು ಹೋಗಿ ಯಾರ್ಯಾರನ್ನೋ ಬೇಡಿ ಕಾಡಿ ನಾಲ್ಕು ಕೊಡಪಾನ ನೀರನ್ನು ತಂದು ಆ ನೀರನ್ನು ಒಂದು ವಾರಗಳ ಕಾಲ ಉಪಯೋಗಿಸುವಂಥ ಸಂದಿಗ್ಧ ಪರಿಸ್ಥಿತಿ ಇದೆ. ಇವತ್ತು ನೀರಿನ ಸರಬರಾಜಿನ ಬಗ್ಗೆ ನಾವು ಯುದ್ಧೋಪಾದಿಯಲ್ಲಿ ಕೆಲಸಮಾಡಬೇಕಾಗಿದೆ. ಇವತ್ತು ಕೊಳವೆ ಬಾವಿಯನ್ನು ಹಾಕುವಂತ ಸ್ಕೀಂ ಏನು ಇದೆ. ಅದರಲ್ಲಿ ಹೆಚ್ಚಿನ ಸಹಾಯವಾಗುತ್ತದೆ ಎಂಬ ಮಾತನ್ನು ನಾನು ಹೇಳುವುದಿಲ್ಲ. ಉಡುಪಿಯನ್ನು ತೆಗೆದುಕೊಳ್ಳುವುದಿದ್ದರೆ, ಸ್ವರ್ಣ ನದಿಯ ಎರಡನೇ ಹಂತದ ಯೋಜನೆ ಇದೆ ಅದನ್ನು ನಾವು ಇವತ್ತು ಅಳವಡಿಸಬೇಕಾಗಿದೆ. ಸ್ವರ್ಣ ನದಿಯ ಮೊದಲನೆಯ ಹಂತದ ಯೋಜನೆ 1972ನೇ ಇಸವಿಗೆ ಪ್ರಾರಂಭವಾದದ್ದು 1992ನೇ ಇಸವಿಗೆ ಮುಕ್ತಾಯವಾಗಿದೆ. ಇನ್ನು 1992ರ ನಂತರ ಹೊಸದಾಗಿ ಕನೆಕ್ಷನ್ ಕೊಡಲಿಕ್ಕಾಗಲಿಲ್ಲ. ಹೊಸದಾಗ ಕನೆಕ್ಷನ್ ಕೊಡಬೇಕಾದರೆ, ಸ್ವರ್ಣ ನದಿಯ ಎರಡನೇ ಹಂತದ ಯೋಜನೆ ಬರಬೇಕಾಗಿದೆ. ಅದಕ್ಕೆ ಕನಿಷ್ಟ ಹನ್ನೆರಡು ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದು ಒಂದು ಉಡುಪಿ ನಗರದ ವ್ಯವಸ್ಥೆ ಆದರೆ ಕರ್ನಾಟಕ ರಾಜ್ಯಾದ್ಯಂತ ಇವತ್ತು ಎಷ್ಟು ನಗರಗಳಿವೆ.

ಇವತ್ತು ಬೆಂಗಳೂರು ನಗರದ ಶಾಸಕರೂ ಕೂಡ ಇದರ ಬಗ್ಗೆ ಪ್ರತ್ಯೇಕವಾದಂತ ವಿಚಾರವನ್ನು ಸದನದ ಮುಂದಿಟ್ಟಿದ್ದಾರೆ. ಎನ್ನುವುದನ್ನು ತಾವು ಹೇಳಿದ್ದೀರಿ. ಇವತ್ತು ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಈ ಹಿಂದೆ ಜನತಾದಳ ಅಧಿಕಾರದಲ್ಲಿದ್ದಾಗ ನನಗೆ ನೆನಪಾಗುತ್ತಿದೆ - ದಿವಂಗತ ನಜೀರ್ ಸಾಬ್‌ರವರ ನೇತೃತ್ವದಲ್ಲಿ ಗ್ರಾಮೀಣಮಟ್ಟದಲ್ಲಿ ಸಾಕಷ್ಟು ಕೆಲಸ ಆಗಿದೆ. ಆಗಿಲ್ಲ ಎಂದು ನಾನು ಹೇಳುವುದಿಲ್ಲ, ಸರ್ಕಾರ ತನ್ನ ಅನುದಾನದಲ್ಲಿ ಕೊಡಬೇಕು ಎಂದು ಹೇಳುವುದಿಲ್ಲ, ಸಾಕಷ್ಟು ವಿಶ್ವಬ್ಯಾಂಕಿನಿಂದಲೋ ಅಥವಾ ಬೇರೆ ಬೇರೆ ದೇಶಗಳಿಂದ ಬೇರೆ ಬೇರೆ ಯೋಜನೆಗಳ ರೂಪದಲ್ಲಿ ಈ ನೀರಿಗೋಸ್ಕರ ಕೆಲವು ಹೊಸ ಯೋಜನೆಗಳನ್ನು ಎಲ್ಲಾ ಕ್ಷೇತ್ರಗಳಲ್ಲೂ ತಂದು ನೀರಿನ ವ್ಯವಸ್ಥೆ ಇದೆ, ಅದನ್ನು ಮೂಲಭೂತವಾಗಿ ಪರಿಗಣಿಸಿ ಆ ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಗರ ನೈರ್ಮಲ್ಯೀಕರಣ. ಇವತ್ತು ಪ್ರತಿಯೊಂದು ನಗರದಲ್ಲಿ ಕೊಳಚೆ ಅತಿಯಾಗಿ ಆಗಿದೆ. ಒಬ್ಬ ಬಡವ ಮನೆ ಕಟ್ಟಿ, ಅವನೇನಾದರೂ ಅವನ ಮನೆಯ ಕೊಳಚೆ ನೀರನ್ನು ರಸ್ತೆಗೆ ಬಿಟ್ಟುಬಿಟ್ಟರೆ ಕೂಡಲೇ ಅಧಿಕಾರಿಗಳು ಬಂದು ಅದನ್ನು ನಿಲ್ಲಿಸುತ್ತಾರೆ. ಆದರೆ ಇವತ್ತು ಒಬ್ಬ ಹೋಟೇಲ್ ಮಾಲೀಕ ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಬಹಳಷ್ಟು ಹೋಟೇಲ್‌ಗಳನ್ನು ಕಟ್ಟಿ ಅದರ ಕೊಳಚೆ ನೀರನ್ನು ರಸ್ತೆಗೆ ಬಿಟ್ಟರೆ ಕೇಳುವವರಿಲ್ಲದಂಥ ಪರಿಸ್ಥಿತಿ ಇದೆ.

ಉದಾಹರಣೆಗೆ ನನ್ನದೇ ಆದ ಉಡುಪಿ ಕ್ಷೇತ್ರದ ನಗರಸಭೆ ಒಳಗಿರತಕ್ಕಂಥ ಒಳಚರಂಡಿ ಅವ್ಯವಸ್ಥೆ.ಆ ಬಗ್ಗೆ ಸಾಕಷ್ಟು ಹೋರಾಟ ನಾವು ಮಾಡಿಯಾಯಿತು. ಈಗ ಹೊಸ ಸರ್ಕಾರ ಬಂದಿದೆ. ನಮಗೆ ಏನಾದರೂ ಒಳ್ಳೆಯದು ಆಗಬಹುದೇನೋ ಎಂಬ ಅನಿಸಿಕೆ ಬರುತ್ತಿದೆ. ನಗರ ಮಧ್ಯದಲ್ಲಿನ ಸುಮಾರು 250 ರಿಂದ 300ಕ್ಕೂ ಹೆಚ್ಚು ಬಾವಿಗಳು ಹಾಳಾಗಿವೆ. ಕೆಟ್ಟುಹೋಗಿವೆ. ಇವೊತ್ತು ಪರಿಸರ ಮಾಲಿನ್ಯದ ಬಗ್ಗೆ ನಾವು ಚಳುವಳಿ ಮಾಡುತ್ತೇವೆ. ಜಲಮಾಲಿನ್ಯದ ಬಗ್ಗೆ ಸಾಕಷ್ಟು ಚಳುವಳಿ ಮಾಡುತ್ತೇವೆ. ನಗರ ನೈರ್ಮಲೀಕರಣದ ವ್ಯವಸ್ಥೆಗೆ ಒಂದು ರಚನಾತ್ಮಕವಾದ ಕಾರ್ಯಕ್ರಮವನ್ನು ರೂಪಿಸಿಲ್ಲ. ಈ ಬಗ್ಗೆಯೂ ಕೂಡ ಸರ್ಕಾರ ತನ್ನ ಗಮನವನ್ನು ಹರಿಸಬೇಕು. ಎಲ್ಲದಕ್ಕಿಂತ ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಗ್ಗೆ ಯಾವುದೇ ರೀತಿಯ ಒಂದು ಕಾರ್ಯಕ್ರಮವನ್ನು ಪ್ರಸ್ತಾಪ ಮಾಡಿಲ್ಲ. ಇದೂ ಕೂಡ ಬಹಳಷ್ಟು ಗಮನಾರ್ಹವಾದ ವಿಚಾರ. ಇವರ ಮೇಲೆ ಸಾಕಷ್ಟು ಸಂಖ್ಯೆಯಲ್ಲಿ ದೌರ್ಜನ್ಯಗಳು ನಡೆಯುತ್ತಿವೆ; ಮತ್ತು ಇನ್ನೂ ಕೂಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲೆ ದೌರ್ಜನ್ಯಗಳು ನಡೆಯುವಂತ ಅನೇಕ ವರದಿಗಳನ್ನು ನಾವು ಪತ್ರಿಕೆಗಳಲ್ಲಿ ಪ್ರತಿದಿನ ಓದುತ್ತಿದ್ದೇವೆ. ಹೊಸ ಸರ್ಕಾರ ಈ ಬಗ್ಗೆ ಕಳಕಳಿಯಿಂದ ವರ್ತಿಸಬೇಕು.

ಇನ್ನು ಕ್ರೀಡಾಭಿವೃದ್ಧಿ ಬಗ್ಗೆ ಯಾವುದೇ ರೀತಿಯ ನೀತಿ ನಿರೂಪಣೆ ಇಲ್ಲ. ಇವೊತ್ತು ನಮ್ಮ ಭಾರತ ದೇಶ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಾವ ರೀತಿಯಲ್ಲಿ ನಮ್ಮ ಕ್ರೀಡೆಯನ್ನು ಬೆಳೆಸುತ್ತಿದೆ ಎನ್ನುವುದನ್ನು ನೋಡಿದರೆ, ಸಾಕಷ್ಟು ಸಂಖ್ಯೆಯಲ್ಲಿ ಕ್ರೀಡಾಪಟುಗಳು ಇದ್ದಾರೆ. ಆ ಕ್ರೀಡಾಪಟುಗಳಿಗೆ ಬೇಕಾದಂಥ ಕ್ರೀಡಾ ಸೌಲಭ್ಯಗಳನ್ನು ನಮ್ಮ ಸರ್ಕಾರ ಒದಗಿಸಿಕೊಡುವ ವ್ಯವಸ್ಥೆ ಮಾಡಿಲ್ಲ. ಸಾಕಷ್ಟು ಸಂಖ್ಯೆಯಲ್ಲಿ ಕ್ರೀಡಾಂಗಣಗಳು ಬೇಕಾಗಿವೆ. ಸಾಕಷ್ಟು ಸಂಖ್ಯೆಯಲ್ಲಿ ಯಾವ ಕ್ರೀಡಾಳುಗಳು ತಾವು ಸ್ಪರ್ಧಿಸಲಿಕ್ಕೆ ಹೋಗುತ್ತಾರೋ ಅಂದರೆ ಜಿಲ್ಲಾ ಮಟ್ಟದಲ್ಲಿ, ರಾಜ್ಯ ಮಟ್ಟದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಅವರಿಗೆ ಯೋಗ್ಯವಾದಂಥ ವ್ಯವಸ್ಥೆಗೆ ಒಂದು ನೀತಿ ನಿರೂಪಣೆ ಬೇಕಾಗಿದೆ. ಅದಕ್ಕಾಗಿ ಕ್ರೀಡಾಳುಗಳೋಸ್ಕರ ನಾವು ಕಾರ್ಯಕ್ರಮವನ್ನು ಹಾಕಬೇಕಾಗಿದೆ. ವಿದ್ಯೆ ಕೊಡಲಿಕ್ಕೆ ನಮಗೆ ಆಗುತ್ತಿಲ್ಲ, ಆರೋಗ್ಯ ಕೊಡಲಿಕ್ಕೆ ಆಗುತ್ತಿಲ್ಲ ಅದೇ ರೀತಿ ಕ್ರೀಡಾಳುಗಳಿಗೆ ಬೇಕಾದಂಥ ಯಾವ ವ್ಯವಸ್ಥೆ ಮಾಡಲಿಕ್ಕೆ ಆಗುವುದಿಲ್ಲ, ಅನ್ನುವುದಾದರೆ ನಾವು ಈ ಶಾಸನಸಭೆಯಲ್ಲಿ ಕುಳಿತುಕೊಂಡು ಗಂಟೆಗಟ್ಟಲೆ ಆರೋಪಗಳನ್ನು ಮಾಡುವುದಕ್ಕೆ ಅರ್ಥವೇ ಇಲ್ಲ ಎನ್ನುವಂಥ ವಿಚಾರವನ್ನು ನಾನು ತಮ್ಮ ಮುಂದೆ ಇಡಬಯಸುತ್ತೇನೆ.

ಇನ್ನು ಶಾಂತಿ ಪಾಲನೆ. ಶಾಂತಿ ಪಾಲನೆ ಬಗ್ಗೆ ಸ್ಪಷ್ಟವಾಗಿ ಹೇಳುವುದಾದರೆ, ನಮ್ಮ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಖರ್ಗೆಯವರು ಸಾಕಷ್ಟು ಹೇಳಿದ್ದಾರೆ. ಚುನಾವಣೆ ನಂತರ ಬಹಳಷ್ಟು ಕೊಲೆಗಳು ನಡೆದಿರೆ ಎನ್ನುವಂಥ ಮಾತನ್ನು ಆಡಿದರು. ನಾನು ಹೇಳುವುದು ಏನೆಂದರೆ ಈಗಿನ ಅಧಿಕಾರಿಗಳು ಹಿಂದಿದ್ದಂಥ ಸರ್ಕಾರವೇ ಅಧಿಕಾರದಲ್ಲಿ ಇನ್ನೂ ಇದೆ ಎನ್ನುವಂಥ ಭಾವನೆಯಲ್ಲಿ ಇದ್ದಾರೆ. ಇನ್ನು ಅದು ಬದಲಾವಣೆಯಾಗಿಲ್ಲ, ಇವೊತ್ತು ಅಧಿಕಾರಿಗಳು ಯಾವ ಸರ್ಕಾರ ಬರುತ್ತದೆ. ಯಾವ ಸರ್ಕಾರ ಹೋಗುತ್ತದೆ. ಯಾರು ಎಂಎಲ್ಎ ಆಗುತ್ತಾರೆ ಯಾರು ಮಂತ್ರಿಗಳು ಆಗುತ್ತಾರೆ. ಯಾರು ಸೋತುಹೋಗುತ್ತಾರೆ ಎನ್ನುವುದನ್ನು ಅಧಿಕಾರಿಗಳು ನೋಡುವುದು ಮುಖ್ಯವಲ್ಲ. ನ್ಯಾಯ ಒದಗಿಸುವುದರ ಬಗ್ಗೆ ಅವರು ನ್ಯಾಯ ಕೊಡಬೇಕಾದದ್ದು ಅಧಿಕಾರಿಗಳ ಕರ್ತವ್ಯ. ಪೊಲೀಸ್ ಅಧಿಕಾರಿಗಳು, ಯಾರು ಎಂಎಲ್ಎ ಬರುತ್ತಾರೆ. ಅವರ ಮಾತನ್ನು ಕೇಳಿಕೊಂಡು, ಯಾರು ಮಂತ್ರಿ ಆಗುತ್ತಾರೆ ಅವರ ಮಾತನ್ನು ಕೇಳಿಕೊಂಡು ಬಡವರಿಗೆ ಅನ್ಯಾಯ ಮಾಡುವುದಲ್ಲ... ಶ್ರೀ ದೇವೇಗೌಡರು ಬಹಳ

ಒಳ್ಳೆಯ ಪದವಿಯನ್ನು ಶ್ರೀ ಸಿಂಧ್ಯಾರವರಿಗೆ ಕೊಟ್ಟಿದ್ದಾರೆ. ಬಹಳಷ್ಟು ರಚನಾತ್ಮಕವಾದ ಕಾರ್ಯಕ್ರಮವನ್ನು ಈ ಮೂಲಕ ಗೃಹ ಮಂತ್ರಿಗಳು ಮಾಡಲಿದ್ದಾರೆ ಎನ್ನುವ ಭರವಸೆ ನನ್ನಲಿದೆ. ಪೊಲೀಸ್ ಸ್ಟೇಷನ್ ಒಳಗಡೆ ಹೋಗಲು ಒಬ್ಬ ಏಜೆಂಟ್ ಬೇಕೇ ಬೇಕು. ಯಾರೋ ಒಬ್ಬ ಬಡವ ಪೊಲೀಸ್ ಸ್ಟೇಷನ್‌ನಲ್ಲಿ ಕಂಪ್ಲೆಂಟ್ ಕೊಡಲಿಕ್ಕೆ ಹೋಗಬೇಕಂದರೆ ಅವರು ಧೈರ್ಯವಾಗಿ ಹೋಗಬೇಕಾದ ಪರಿಸ್ಥಿತಿ ಇಲ್ಲವೇ ಇಲ್ಲ. ಇದೆಲ್ಲಾ ನಿರ್ಮಾಣವಾಗಿದೆ. ಯಾರೋ ಒಬ್ಬ ಎಂಎಲ್‌ಎ ಅಥವಾ ಯಾರೋ ಇನ್‌ಫ್ಲೂಯನ್ಸ್ ಪರ್ಸನ್ ಅಂದರೆ ಸಬ್ ಇನ್ಸ್‌ಪೆಕ್ಟರ್ ಅಥವಾ ಸರ್ಕಲ್ ಇನ್ಸ್‌ಪೆಕ್ಟರ್‌ರವರಿಗೆ ಯಾರು ಬೇಕಾಗಿರುತ್ತಾರೆ ಅವರನ್ನು ಹುಡುಕಿಕೊಂಡು ಹೋದರೆ ಮಾತ್ರ ನ್ಯಾಯ ಸಿಗುತ್ತದೆ. ಇಲ್ಲದಿದ್ದರೆ ಇಲ್ಲ. ಸ್ವಾಮಿ, ಆ ರೀತಿಯ ಪೊಲೀಸ್ ಸ್ಟೇಷನ್‌ಗಳನ್ನು ಕಿತ್ತುಹಾಕಿ, ಯೋಗ್ಯರಾದ ಅಧಿಕಾರಿಗಳನ್ನು ನೀವು ನೇಮಕ ಮಾಡಿ. ಅಧಿಕಾರಿಗಳು ನಿರ್ದಾಕ್ಷಿಣ್ಯರಾಗಿ ವರ್ತಿಸಲಿ ಮತ್ತು ನ್ಯಾಯ ಕೊಡಲಿ ಎಂದು ಹೇಳಬಯಸುತ್ತೇನೆ.

ಹಾಗೆ ಮಾನ್ಯ ಯಡಿಯೂರಪ್ಪನವರು ನಿನ್ನೆಯ ದಿವಸ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರ ಬಗ್ಗೆ ಹೇಳಿದರು. ಬಿ.ಜೆ.ಪಿ. ಪಕ್ಷವು ನಾಲ್ಕರಿಂದ ನಲ್ವತ್ತಕ್ಕೆ ಬಂದದಕ್ಕಾಗಿ ನಮ್ಮ ಉಪಮುಖ್ಯಮಂತ್ರಿಗಳು ಬಹಳಷ್ಟು ನೊಂದುಕೊಂಡಿದ್ದಾರೆಂದು ಹೇಳಿದರು. ನೊಂದುಕೊಂಡದ್ದು ಹಾಗಲ್ಲ, ಇವೊತ್ತು ಏನು ಭಾರತೀಯ ಜನತಾ ಪಕ್ಷ ಈ ರಾಜ್ಯದಲ್ಲಿ ನಾಲ್ಕರಿಂದ ನಲ್ವತ್ತಕ್ಕೆ ಬಂದಿದೆಯೋ ಹಿಂದೆ ಇದೇ ಪಕ್ಷ 18 ಇದ್ದವರು ನಾಲ್ಕಕ್ಕೂ ಹಾಗೆ ಎರಡಕ್ಕೂ ಇಳಿದ ಪ್ರಸಂಗಗಳಿವೆ. ಆ ರೀತಿ ಆಗುತ್ತದೆ. ಅದು ಇಲ್ಲ ಅಂಥ ಹೇಳುವುದಿಲ್ಲ, ನಲ್ವತ್ತಕ್ಕೆ ಬಂದಕೂಡಲೇ ಒಂದುನೂರ ನಲ್ವತ್ತಕ್ಕೆ ಹೋಗಬೇಕು ಎಂದೇನೂ ಇಲ್ಲ, ಆದರೆ ಇವೊತ್ತು ಧರ್ಮದ ವಿಷಯದಲ್ಲಿ, ದೇವರ ಹೆಸರಿನಲ್ಲಿ ಸಮಾಜದಲ್ಲಿ ನಾವು ಒಳ್ಳೆಯ ರೀತಿಯಲ್ಲಿ, ಸೌಹಾರ್ದದಲ್ಲಿ ಇರಬೇಕೋ ಅಂಥ ಸೌಹಾರ್ದವನ್ನೇ ಕೆಡಿಸುವಂಥ ಕಾರ್ಯಕ್ರಮವನ್ನು ದಯವಿಟ್ಟು ಭಾರತೀಯ ಜನತಾಪಕ್ಷದವರು ಹಾಕದೇ ಇರಲಿ ಎಂದು ನನ್ನ ಒಂದು ಮನವಿ. ರಾಷ್ಟ್ರಧ್ವಜ ಹಾರಿಸಲಿ, ಆದರೆ ಬಿ.ಜೆ.ಪಿ.ಯವರು ಹೇಳಿದ ಜಾಗದಲ್ಲೇ ರಾಷ್ಟ್ರಧ್ವಜ ಹಾರಿಸಿದರೆ ಮಾತ್ರ ರಾಷ್ಟ್ರಭಕ್ತಿ ಇರುತ್ತದೆ ಎನ್ನುವುದು ಸರಿಯಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಈ ರೀತಿ ರಾಜಕೀಯದಲ್ಲಿ ಅಡ್ವೈಸ್ ಕೊಡುವುದಕ್ಕೆ ಬಂದರೆ ಅದಕ್ಕೆ ಬೇರೆ ವೇದಿಕೆ ಮಾಡೋಣ. ಈ ವೇದಿಕೆಯಲ್ಲಿ ರಾಜಕೀಯ ಅಡ್ವೈಸ್ ಕೊಡತಕ್ಕದ್ದು ಸೂಕ್ತ ಎಲ್ಲ.

ಒಬ್ಬ ಮಾನ್ಯ ಸದಸ್ಯರು : ಶಾಂತಿ ಪಾಲನೆ ವಿಷಯ ಮಾತನಾಡುತ್ತಿರುವುದರಿಂದ ಅವಕಾಶ ಕೊಡಬೇಕು. ನಾನು ಬೇಕಾದರೆ 6ರಿಂದ 12ಗಂಟೆಯವರೆಗೆ ಮಾತನಾಡುತ್ತೇನೆ, 20 ತಾಸು ಮಾತನಾಡುತ್ತೇನೆ..........

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಕುಳಿತುಕೊಳ್ಳಿ, ಸಭಾಪತಿಯವರೇ ಮುಂದುವರೆಸಿ.

ಒಬ್ಬ ಮಾನ್ಯ ಸದಸ್ಯರು :ನಾನು ಶಾಸನಸಭೆಗೆ ಹೊಸಬ ಇರಬಹುದು. ನೂರಾರು ಕಡೆ ಅವ್ಯವಹಾರ ನಡೆಯುತ್ತಿದೆ, ಅದು ಅವರಿಗೆ ಗೊತ್ತಿಲ್ಲ.......

(ಗೊಂದಲ)

ಅಧ್ಯಕ್ಷರು : ಅವರು ಮುಂದುವರಿಸಲಿ. ದಯವಿಟ್ಟು ನೀವು ಕುಳಿತುಕೊಳ್ಳಿ. ಸುಮ್ಮನೆ ಸಮಯ ಹಾಳಾಗುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸುವಾಗ ಬೇರೆಯವರಿಗೆ ಇಷ್ಟು ಇಲ್ಲವೆಂದು ಅವರು ಮಾತನಾಡುವುದನ್ನು ತಡೆಯತಕ್ಕದ್ದು. ಶಾಸಕಾಂಗಕ್ಕೆ ವಿರುದ್ಧವಾದ ಧೋರಣೆ. ಈ ರೀತಿ ಅಡ್ಡಿ ಪಡಿಸತಕ್ಕದ್ದು ಸರಿಯಲ್ಲ. ಬೇರೆ ಪಕ್ಷಗಳಿಗೆ ಅವರ ಉಪದೇಶದ ಅವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ಶಂಕರ ಲಿಂಗೇಗೌಡ : ಇದು ಸಮಾಜದ ದೃಷ್ಟಿಯಿಂದ ಒಳ್ಳೆಯದಲ್ಲ. ಶಾಸಕಾಂಗದ ಸಭೆಯೊಳಗೆ ಒಳ್ಳೆಯ ಬುದ್ಧಿವಾದದ ಮಾತನ್ನು ನಾವು ಮಾನ್ಯ ಸಭಾಪತಿಯವರಿಂದ ನಿರೀಕ್ಷಿಸುತ್ತಿದ್ದೇವೆ.

(ಗೊಂದಲ)

ಶ್ರೀ ಯು.ಆರ್. ಸಭಾಪತಿ : ನಾನು ಈ ಶಾಸನ ಸಭೆಗೆ ಹೊಸಬನಾಗಿರಬಹುದು. ಆದರೆ ಕಳೆದ ಕೆಲವಾರು ದಿನಗಳಿಂದ ಈ ಶಾಸನ ಸಭೆಯಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನಾನು ನೋಡಿದ್ದೇನೆ. ನಿನ್ನೆಯ ದಿನ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿ ಭಾಷಣ ಮಾಡುವಾಗ ಕನಿಷ್ಟ ಮೂರು ಸಲ ಮಾತನಾಡಿ ಹೇಳಿದ್ದಾರೆ, ನಾವು 40 ಮಂದಿ ಆರಿಸಿ ಬಂದಿದ್ದೇವೆಂದು.

ಅಧ್ಯಕ್ಷರು : ನೀವು ಮುಂದುವರಿಸಿ. ಅದೇನೂ ಕಡಿಮೆಯಾಗುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ನಾನು ಒಂದು ಮಾತು ಹೇಳಬೇಕಾಗಿದೆ. ಇವತ್ತು ಏನು ವಿರೋಧ ಪಕ್ಷದ ನಾಯಕರಾಗಿದ್ದುಕೊಂಡು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಜನತಾ ದಳದ ಅಂತರಿಕ ವ್ಯವಹಾರದ ಬಗ್ಗೆ ನಿಮಗೆ ಹೇಗೆ ಮಾತನಾಡುವ ಅಧಿಕಾರ ಇದೆಯೋ ಹಾಗೆ ಇವತ್ತು ರಾಜ್ಯದಲ್ಲಿ ಅವ್ಯವಸ್ಥೆ ಮಾಡಿರತಕ್ಕ ಭಾರತೀಯ ಜನತಾ ಪಕ್ಷದ ಕಾರ್ಯಕ್ರಮಗಳ ವಿರುದ್ಧ ಮಾತನಾಡುವುದಕ್ಕೆ ನಮಗೂ ಹಕ್ಕು ಇದೆ. ಜನತಾ ದಳದ ಶಾಸಕರ ಮೇಲೆ ಪಕ್ಷದ ಮೇಲೆ ಆರೋಪ ಮಾಡುವಾಗ ಜನತಾ ದಳದ ಶಾಸಕರು ಮೌನ ಪ್ರೇಕ್ಷಕರಾಗಿ ಕುಳಿತುಕೊಂಡಿದ್ದರು. ಕಾಂಗ್ರೆಸಿಸನ ಮೇಲೆ ಆರೋಪ ಮಾಡುವಾಗ ಅವರು ಮೌನ ಪ್ರೇಕ್ಷಕರಾಗಿ ಕುಳಿತುಕೊಂಡಿದ್ದರು. ಆದರೆ ಇವತ್ತು ಅವರು ನಮ್ಮ ಮೇಲೆ ಆರೋಪ ಮಾಡಬಹುದೇ?

ಒಬ್ಬ ಮಾನ್ಯ ಸದಸ್ಯರು : ಇವರು ವಕಾಲತ್ತು ವಹಿಸುತ್ತಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನರ ಸಮಸ್ಯೆಗಳ ಬಗ್ಗೆ ತುಂಬಾ ಒಳ್ಳೆಯ ವಿಷಯಗಳನ್ನು ಇಡುತ್ತಿದ್ದಾರೆ. ಭಾರತೀಯ ಜನತಾ ಪಕ್ಷದ ಬಗ್ಗೆ ತಮ್ಮದೇ ಆದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾನು ಅಭಿಪ್ರಾಯ ವ್ಯಕ್ತಪಡಿಸಬೇಡಿ ಎಂದು ಹೇಳುವುದಕ್ಕೆ ಇಷ್ಟ ಪಡುವುದಿಲ್ಲ. ಆದರೆ ಇವತ್ತು ನಿಮ್ಮ ನಾಯಕರು ಅಲ್ಲಿ ಮುಖ್ಯಮಂತ್ರಿಗಳಾಗಿದ್ದರು. ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಿದಂಥ ಹಗಲು ದರೋಡೆ ಆರೋಪಕ್ಕೆ ತುತ್ತಾಗಿ ಈ ದೇಶದ ಪ್ರಧಾನಿಯವರು ಒಳಗಡೆ ಇಂಟರ್ ವ್ಯೂ ಕೊಡದೆ ಹೊರಗಡೆ ಕಳುಹಿಸಿ, ರಾತ್ರಿ 12.30ಕ್ಕೆ ಹೈಕೋರ್ಟ್ ನ್ಯಾಯಾಧೀಶರ ಮನೆಗೆ ಹೋಗಿ ನಿರೀಕ್ಷಣಾ ಜಾಮೀನು ತೆಗೆದುಕೊಂಡು ಬಂದು, ಕ್ಲಾಸಿಕ್ ಕಂಪ್ಯೂಟರ್ ಹಗರಣದಲ್ಲಿ ಸಿಬಿಐ ತನಿಖೆಯನ್ನು ಎದುರಿಸಿ ಇವತ್ತು ನ್ಯಾಯಾಲಯದ ಕಟಕಟೆಯಲ್ಲಿ ನಿಂತಿರುವಂಥ ಆ ಬಿಂದು ಪಕ್ಷದ ಸದಸ್ಯರಾಗಿರುವುದು ಒಂದು ಅವಮಾನ ಅನ್ನಿಸುತ್ತದೆ. ಇವತ್ತು

ನಾನು ಹೇಳುತ್ತೇನೆ, ನಿಮಗೆ ಯಾವ ನೈತಿಕ ಹಕ್ಕು ಇದೆ? ಇವತ್ತು ರಾಜ್ಯದ ಬೊಕ್ಕಸವನ್ನು ಲೂಟಿ ಮಾಡಿ ಕಾಂಗ್ರೆಸ್ ಪಕ್ಷವನ್ನು ಈ ಸ್ಥಿತಿಗೆ ತರುವುದಕ್ಕೆ ಕಾರಣಕರ್ತರಾದ ಪಕ್ಷದವರು ಈ ರಾಜ್ಯದ ಜನತೆಯ ಕ್ಷಮಾಪಣೆ ಕೇಳಬೇಕು.

ಅಧ್ಯಕ್ಷರು : ದಯಮಾಡಿ ಸಾಕು.

ಶ್ರೀ ಯು.ಆರ್. ಸಭಾಪತಿ : ನಮ್ಮ ನಾಯಕರ ಬಗ್ಗೆ ಆರೋಪ ಮಾಡುವಾಗ ಅಥವಾ ನಮ್ಮ ನಾಯಕರ ಬಗ್ಗೆ ಹೇಳಿಕೆ ಕೊಡುವಾಗ ತಾಳ್ಮೆಯಿಂದ ಕೇಳಿದೆವು. ಆದರೆ ಅವರ ಪಕ್ಷದ ಬಗ್ಗೆ ನಾವು ಹೇಳುವಾಗ ಎದ್ದು ನಿಂತು ಏಕೆ ಗಲಾಟೆ ಮಾಡಬೇಕೆಂದು ಕೇಳಬಯಸುತ್ತೇನೆ. ಪ್ರಧಾನ ಮಂತ್ರಿಗಳು ತೆಗೆದು ಹಾಕಿದ್ದಾರೆಂದು ಇವರು ಹೇಳುವುದಾದರೆ, ಈವತ್ತು ವಿರೋಧ ಪಕ್ಷದ 4 ರಾಜ್ಯದ ಮುಖ್ಯ ಮಂತ್ರಿಗಳನ್ನು ಜನ ಕಿತ್ತು ಬಿಸಾಡಿದ್ದಾರೆ. ಅದರ ಬಗ್ಗೆ ಏನು ಹೇಳುತ್ತೀರಿ? ಇದಕ್ಕೆ ಉತ್ತರ ಕೊಡಿ. ನಮಗೆ ಮಾತನಾಡುವ ಹಕ್ಕು ಇದೆ. ನಾವು ಮಾತನಾಡುವಾಗ ಏಕೆ ಗದ್ದಲ ಮಾಡಬೇಕು? ನಮ್ಮ ಅಭಿಪ್ರಾಯ ಒಳ್ಳೆಯದಿದ್ದರೆ ಸ್ವೀಕಾರ ಮಾಡಿ, ಇಲ್ಲದಿದ್ದರೆ ಬಿಟ್ಟು ಬಿಡಿ. ನಾವು ಮಾತನಾಡುವಾಗ ಎಲ್ಲರೂ ಎದ್ದು ನಿಂತುಕೊಂಡರೆ ಸದನದ ಗೌರವವನ್ನು ಉಳಿಸಬಹುದೇ? ಇದು ನಿಮ್ಮ ಸಂಸ್ಕೃತಿಯೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ತಾವು ಬೇಗ ಮುಗಿಸಬೇಕು, ತಮಗೆ ನಿಗದಿ ಮಾಡಿದ್ದ ಅವಧಿ ಆಯಿತು.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಿಮ್ಮ ಸಂಸ್ಕೃತಿ ಬಹಳ ಚೆನ್ನಾಗಿದೆ!

ಶ್ರೀ ಯು.ಆರ್. ಸಭಾಪತಿ : ನಮ್ಮ ಸಂಸ್ಕೃತಿ ಬಹಳ ಚೆನ್ನಾಗಿರುವುದರಿಂದ ನಾವು ಶಾಸನಸಭೆಗೆ ಪ್ರವೇಶ ಮಾಡಿದ್ದೇವೆ.

ಅಧ್ಯಕ್ಷರು : ಹೀಗೆ ಪರಸ್ಪರ ಚರ್ಚೆ ಮಾಡುವುದರಿಂದ ಎಲ್ಲರ ಸಂಸ್ಕೃತಿ ನಮಗೆ ಪರಿಚಯವಾಗುತ್ತದೆ. ತಾವು ಮುಂದುವರಿಸಿ, ಬೇಗ ಮುಕ್ತಾಯ ಮಾಡಬೇಕು.

ಶ್ರೀ ಯು.ಆರ್. ಸಭಾಪತಿ : ಇವತ್ತು ಅವರ ಸಂಸ್ಕೃತಿ ಏನಿದೆ? ಈಗ ಕೆಲವು ಮಹತ್ತರ ವಿಚಾರಗಳನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ. ಮಾನ್ಯ ಖರ್ಗೆಯವರು ಮಾತನಾಡುತ್ತಾ ಹೇಳಿದರು, 4 ತಿಂಗಳು ಸಮಯವಕಾಶ ಕೊಡೋಣ ಎಂದು. ಮಾನ್ಯ ಮುಖ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಒಬ್ಬರು ಮುಖ್ಯ ಮಂತ್ರಿಗಳು, ಇಬ್ಬರು ಕ್ಯಾಬಿನೆಟ್ ಮಂತ್ರಿಗಳು ಮತ್ತು ಇಬ್ಬರು ರಾಜ್ಯ ಸಚಿವರು ಇದ್ದಂತಹ ನಮ್ಮ ಜಿಲ್ಲೆಯನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಿ ಒಬ್ಬರೇ ಒಬ್ಬ ರಾಜ್ಯ ಮಂತ್ರಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಅದನ್ನು ಸರಿಪಡಿಸುವುದಕ್ಕೆ ಹೇಳೋಣ. ಬೇಗ ಮುಗಿಸಿ. ಶ್ರೀ ಮೊಯಿಲಿಯವರು ಕೂಡ ಅದನ್ನು ಸರಿಪಡಿಸುವುದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ.

ಶ್ರೀ ಯು.ಆರ್. ಸಭಾಪತಿ : ನಾನು ಏನು ವಿಚಾರ ಇಟ್ಟಿದ್ದೇನೆ ಇದನ್ನು ತಾವು ದಯವಿಟ್ಟು ಅವಲೋಕನ ಮಾಡಿಕೊಂಡು ಈ ರಾಜ್ಯದ 5 ಕೋಟಿ ಜನರಿಗೆ ಒಂದು ಸುವ್ಯವಸ್ಥಿತವಾದ ಯೋಗ್ಯವಾದ ಕೆಲಸ ಮಾಡಬೇಕು. ನಾವೆಲ್ಲರೂ ಶಾಸಕರು ನಮ್ಮ ಊರಿಗೆ ನಮ್ಮ ಕ್ಷೇತ್ರಕ್ಕೆ ಹೋದಾಗ ನಾವು ಏನು ಇಲ್ಲಿ ಶಾಸನಸಭೆಯಲ್ಲಿ ಮಾಡಿದ್ದೇವೆ, ಹೊಸ ಸರ್ಕಾರ ಏನು ಬದಲಾವಣೆ ಮಾಡಿದೆ ಎಂಬುದರ ಬಗ್ಗೆ ನಿರ್ದಿಷ್ಟವಾದ ಧೋರಣೆಯನ್ನು ರೂಪಿಸಬೇಕೆಂದು ಕೇಳಿಕೊಂಡು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಪ್ರಸ್ತಾವನೆ ಏನಿದೆ ಅದರಲ್ಲಿ ಏನೂ ಹುರುಳಿಲ್ಲ ಎಂಬ ಮಾತನ್ನು ವ್ಯಕ್ತಪಡಿಸಿ ಅದನ್ನು ಸಂಪೂರ್ಣವಾಗಿ ವಿರೋಧಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ......

ಶ್ರೀ ಎಲ್.ಆರ್. ಶಿವರಾಮೇಗೌಡ : ನಮಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ನಮಗೆ ಯಾವಾಗ ಅವಕಾಶ ಕೊಡುತ್ತೀರಿ?

ಅಧ್ಯಕ್ಷರು : ನೀವು ಪಕ್ಷೇತರರು ಎಂಬುದು ನನಗೆ ಗೊತ್ತು. ಆದರೂ ನಾವು ಮಾನ್ಯ ಮಾಡಿದ್ದೇವೆಂಬುದು ನಿಮಗೂ ಗೊತ್ತು. ನೀವು ಒಂದು ತಂಡವಾಗಿದ್ದೀರಿ. ಅದನ್ನು ನಿಮಗೆ ತಿಳಿಸಿದ್ದೇವೆ. ನಿಮಗೂ ಅವಕಾಶ ಕೊಡುತ್ತೇವೆ. ದಯವಿಟ್ಟು ಹಿರಿಯ ಸದಸ್ಯರು ನಿಂತಾಗ ಈ ರೀತಿ ಮಾಡುವುದು ಸರಿಯಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಶಾಸಕಾಂಗದಲ್ಲಿ ಕೆಲಸ ಮಾಡುವ ಕಾಲದಲ್ಲಿ ವಿರೋಧಿ ಪಕ್ಷಗಳಿಗೆ ಮತ್ತು ಆಡಳಿತ ಪಕ್ಷಗಳಿಗೆ ಸಮವಾಗಿ ಸಮಯವನ್ನು ಕೊಡತಕ್ಕ ಪ್ರವೃತ್ತಿಯನ್ನು ನಾವು ನೀವು ಬಳಸಿಕೊಂಡು ಬಂದಿದ್ದೇವೆ. ಒಂದು ಪಕ್ಷದ ಪ್ರತಿನಿಧಿ ಮಾತನಾಡಿದ ಮೇಲೆ ಮತ್ತೊಂದು ಪಕ್ಷದ ಪ್ರತಿನಿಧಿ ಮಾತನಾಡಿದ ಮೇಲೆ ಮತ್ತೊಂದು ಪಕ್ಷದ ಪ್ರತಿನಿಧಿ ಮಾತನಾಡಿದ ನಂತರ, ಆಡಳಿತ ಪಕ್ಷಕ್ಕೆ ಬಂದು ಮತ್ತೆ ವಿರೋಧ ಪಕ್ಷಕ್ಕೆ ಬರಬೇಕೆ ವಿನಹ ಬೇರೆ ರೀತಿ ಬರತಕ್ಕದ್ದು ಒಳ್ಳೆಯ ಸಂಪ್ರದಾಯ ಅಲ್ಲ ಎಂಬ ಸೂಚ್ಯವನ್ನು ಕೊಡಬಯಸುತ್ತೇನೆ.

ಅಧ್ಯಕ್ಷರು : ತಮ್ಮ ಸೂಚನೆಯನ್ನು ನಾನು ಗಮನಿಸುತ್ತೇನೆ. ಈಗ ಮಾನ್ಯ ಘೋರ್ಪಡೆಯವರು ಮಾತನಾಡುವುದು.

ಶ್ರೀ ಬಿ. ಶಿವರಾಮು : ಸೂಚ್ಯವನ್ನು ಮೊದಲೇ ಕೊಟ್ಟರೆ ಒಳ್ಳೆಯದು.

ಅಧ್ಯಕ್ಷರು : ನಾನು ಸೂಚ್ಯ ಕೊಟ್ಟೇ ಮಾಡುತ್ತಿದ್ದೇನೆ. ಯಾರಿಗೆ ಸೂಚ್ಯ ಬರುವುದಿಲ್ಲ ಅವರು ಮಾತನಾಡುವುದಿಲ್ಲ.

4.25 ಪಿ.ಎಂ.

ಶ್ರೀ ಎಂ.ವೈ. ಘೋರ್ಪಡೆ (ಸೊಂಡೂರು) : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಮೇಲೆ ಕೆಲವು ವಿಚಾರಗಳನ್ನು ವ್ಯಕ್ತಪಡಿಸಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಸಾಮಾನ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಒಂದು ಸರ್ಕಾರದ ಧೋರಣೆ ಕಾರ್ಯಕ್ರಮದ ಬಗ್ಗೆ ಆಳವಾದಂಥ ಮತ್ತು ಸ್ಪಷ್ಟವಾದಂಥ ನಿರೂಪಣೆ ನಾವು ನಿರೀಕ್ಷೆ ಮಾಡಬೇಕಾಗುತ್ತದೆ. ಆದರೆ ದುರ್ದೈವದಿಂದ ಈ ರಾಜ್ಯಪಾಲರ ಭಾಷಣದಲ್ಲಿ ಆಳವಾದಂಥ ಚಿಂತನೆಯ ಅಭಾವ ಕಂಡು ಬರುತ್ತಿದೆ. ಪರಿಶ್ರಮದ ಅಭಾವ ಕೂಡ ಇದರಲ್ಲಿ ಕಂಡು ಬರುತ್ತಿದೆ. ಬಹುಶಃ ಕಾಲದ ಅಭಾವ ಇರಬಹುದು. ನಾನು ಇಲ್ಲ ಎಂದು ಹೇಳುವುದಿಲ್ಲ, ಆದರೆ ಇದು ಬಹಳ ಲೋಕಾಭಿರಾಮವಾಗಿ ಆಲಸ್ಯದಿಂದ ಕೂಡಿರತಕ್ಕ ಒಂದು ಭಾಷಣ ಎಂದು ನಾನು ಹೇಳಲೇಬೇಕಾಗುತ್ತದೆ. ಆದರೆ ತಾವು ಸನ್ಮಾನ್ಯ ಅಧ್ಯಕ್ಷರೆ, ಆ ಸ್ಥಾನವನ್ನು ಅಲಂಕರಿಸಿದ ನಂತರ ತಮ್ಮ ಪ್ರಥಮ ಭಾಷಣದಲ್ಲಿ ಮನಮುಟ್ಟುವ ರೀತಿಯಲ್ಲಿ ಸೈದ್ಧಾಂತಿಕವಾಗಿ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿ ದಿವಂಗತ ದೇವರಾಜ ಅರಸ್ ಅವರ ಬಗ್ಗೆ ಏನೊಂದು ಗೌರವ ತೋರಿಸಿದ್ದೀರಿ ಅದರ ಬಗ್ಗೆ ನನ್ನ ಮನಸ್ಸಿನಲ್ಲಿ ಸಂಪೂರ್ಣವಾದಂಥ ಸ್ವಾಗತ ಇದೆ. ಏಕೆಂದರೆ ಅವರ ಬಗ್ಗೆ ತಮ್ಮ ಮನಸ್ಸಿನಲ್ಲಿರತಕ್ಕ ಗೌರವ ವ್ಯಕ್ತ ಪಡಿಸಲಿಕ್ಕೆ ತಾವು ಹಿಂಜರಿಯಲಿಲ್ಲ, ಈಗ ನಾನಾದರೂ ಈ ಸಭೆಗೆ ನೆನಪು ಮಾಡಿಕೊಡುವುದಕ್ಕೆ ಇಷ್ಟ ಪಡುತ್ತೇನೆ, ದೇವರಾಜ ಅರಸ್ ಅವರ ಕಾಲ ಎಂದರೆ ಸಾಮಾಜಿಕ ನ್ಯಾಯ ಮತ್ತು ಬಡವರ ಕಡೆ ವಿಶೇಷವಾದಂಥ ಲಕ್ಷ್ಯ ಕೊಡುವಂಥ ಕಾಲ. ಆ ಕಾಲದಲ್ಲಿ ನಾನು ಕೂಡ ಈ ರಾಜ್ಯದ ಹಣಕಾಸು ಮಂತ್ರಿಯಾಗಿ

ಸೇವೆ ಮಾಡುವಂಥ ಅವಕಾಶ ನನಗೆ ಕೂಡ ಇತ್ತು. ಆ ಅನುಭವದಿಂದ ಒಂದೆರಡು ಮಾತನ್ನು ಈ ಸಂದರ್ಭದಲ್ಲಿ ರಾಜ್ಯದ ಹಣಕಾಸಿನ ಬಗ್ಗೆ ಹೇಳಬೇಕಾದರೆ, ಕರ್ನಾಟಕದ ಹಣಕಾಸಿನ ಪರಿಸ್ಥಿತಿ ಅಷ್ಟು ದುರ್ಬಲವಾಗಿಲ್ಲ. ಬೇರೆ ರಾಜ್ಯಕ್ಕೆ ಹೋಲಿಸಿದರೆ ಮೂಲಭೂತವಾಗಿ ಭದ್ರವಾದ ಹಣಕಾಸಿನ ಪರಿಸ್ಥಿತಿ ಕರ್ನಾಟಕದಲ್ಲಿದೆ. ಇದಕ್ಕೆ ಕಾರಣ ಏನೆಂದರೆ ರೆವಿನ್ಯೂ ಸರ್ ಪ್ಲಸ್ ಇರತಕ್ಕ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಸೇರಿದೆ. ಅದಕ್ಕಾಗಿ ಮೂಲಭೂತವಾಗಿ ಭದ್ರವಾದ ಪರಿಸ್ಥಿತಿ ಇದೆ. ಸಾಲ ತೆಗೆದುಕೊಳ್ಳದೆ ಅಭಿವೃದ್ಧಿ ಮಾಡುವುದಕ್ಕಾಗುವುದಿಲ್ಲ ಎಂಬುದು ಎಲ್ಲರೂ ಒಪ್ಪುವಂಥ ಮಾತು. ಆದರೆ ಸಾಲ ತೆಗೆದುಕೊಳ್ಳುವಾಗ ಅದನ್ನು ರೀಪೇ ಮಾಡುವುದು ಯಾವ ರೀತಿ ಎಂಬ ಬಗ್ಗೆ ಚಿಂತನೆ ನಡೆಯುತ್ತಿದೆ. ಆದ್ದರಿಂದ ಎಲ್ಲಾ ರಾಜ್ಯಗಳಲ್ಲಿ ಈ ಲೋನ್ ರೀಪೇಮೆಂಟ್ ಬಗ್ಗೆ ತೊಂದರೆ ಏನು ಉಂಟಾಗುತ್ತಿದೆ ಅದಕ್ಕೆ ತಾವು ಆಸ್ಪದ ಕೊಡಬಾರದು ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ವೈಟ್ ಪೇಪರ್ ಬಗ್ಗೆ ತಾವು ಪ್ರಸ್ತಾಪ ಮಾಡಿದ್ದೀರಿ. ಮೂರು ದಿನಗಳಲ್ಲಿ ಒಂದು ವೈಟ್ ಪೇಪರ್ ಕೊಡುತ್ತೇವೆ ಎಂದು ಹೇಳಿದ್ದೀರಿ. ನನಗಂತೂ ಅರ್ಥವಾಗಲಿಲ್ಲ ಇದರ ಉದ್ದೇಶ ಏನು? ಅದರಿಂದ ಸಾಧನೆಯಾಗುವುದು ಏನು? ಗೌರ್ನರ್ ಆಡ್ರೆಸ್‌ನಲ್ಲಿ ಕೂಡ ಅದರ ಬಗ್ಗೆ ಪ್ರಸ್ತಾಪ ಇಲ್ಲ. ಅದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ, ನಾನು ಇವತ್ತು ನನ್ನ ಭಾಷಣದಲ್ಲಿ ಪಂಚಾಯತ್ ರಾಜ್ಯದ ಬಗ್ಗೆ ಕೆಲವು ಸ್ಪಷ್ಟವಾದಂಥ ಮಾತನ್ನು ಹೇಳಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಪಂಚಾಯತ್ ರಾಜ್‌ಗೋಸ್ಕರ ಒಂದು ಪ್ರತ್ಯೇಕವಾದಂಥ ಫೈನಾನ್ಸ್ ಕಮಿಷನ್ ರಚನೆ, ಕಾನೂನು ಪ್ರಕಾರ ಆಗಲೇಬೇಕು ಎಂದಿದೆ. ತಮಗೂ ಗೊತ್ತಿದೆ. ನಾವು ಮಾಡಿರತಕ್ಕ ಪಂಚಾಯತ್ ರಾಜ್ ಕಾಯಿದೆ 1993ರ ಪ್ರಕಾರ ಕಾನೂನು ಆದಮೇಲೆ ಒಂದು ವರ್ಷದೊಳಗೆ ಪಂಚಾಯತ್ ರಾಜ್ ಫೈನಾನ್ಸ್ ಕಮಿಷನ್ ನೇಮಕ ಆಗಿದೆ. ಆದರೆ ಆಶ್ಚರ್ಯ ಏನೆಂದರೆ ಸರ್ವೇ ಸಾಮಾನ್ಯವಾಗಿ ಯಾರಿಗೂ ಅದರ ಬಗ್ಗೆ ಮಾಹಿತಿ ಇಲ್ಲ, ಅದರ ಪ್ರಕಾರ 31ನೇ ಡಿಸೆಂಬರ್ ಒಳಗೆ ಫೈನಾನ್ಸ್ ಕಮಿಷನ್ ಇಂಟೀರಿಯಂ ರಿಪೋರ್ಟ್ ಕೊಡಬೇಕೆಂದು ಇದೆ. ಬಹಳ ಮಹತ್ವವಾದ ವಿಷಯ ಇಂಟೀರಿಯಂ ರಿಪೋರ್ಟ್ ಕೊಡದೇ ಹೋದರೆ ನೀವು ನಿಮ್ಮ ಬಜೆಟ್‌ನಲ್ಲಿ ಹಣಕಾಸಿನ ದೃಷ್ಟಿಯಿಂದದ ಪಂಚಾಯತ್ ರಾಜ್‌ಗೆ ಏನೇನು ಮಾಡಬೇಕೋ ಅದು ಮಾಡಲಿಕ್ಕೆ ಆಗುವುದಿಲ್ಲ, ಆದಕಾರಣ ಇಂಟೀರಿಯಂ ರಿಪೋರ್ಟ್ ಬಗ್ಗೆ ಏನಾಯಿತು ಎಂದು ಹೇಳಬೇಕು. ಏಕೆಂದರೆ ಗ್ರಾಮಾಂತರ ಪ್ರದೇಶದ ಬಗ್ಗೆ ತಮಗೇನಾದರೂ ಕಳಕಳಿ ಇದ್ದರೆ, ಇದು ಬಹಳ ಪ್ರಾಮುಖ್ಯವಾದುದು. ಏಕೆಂದರೆ ನಮ್ಮ ಆಕ್ಟ್‌ನಲ್ಲಿ ಪ್ರತಿಯೊಂದು ಪಂಚಾಯಿತಿಗೆ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ನಾವು ಸೇರಿಸಿದ್ದೇವೆ. ಅಂದರೆ 5600 ಗ್ರಾಮ ಪಂಚಾಯಿತಿಗಳಿಗೆ 56 ಕೋಟಿ ರೂಪಾಯಿ ವರ್ಷ ವರ್ಷೇ ಕಡ್ಡಾಯವಾಗಿ ಸರ್ಕಾರ ಕೊಡಲೇಬೇಕೆಂದು ನಮ್ಮ ಕಾನೂನಿನಲ್ಲಿದೆ.

ಇದರ ಉದ್ದೇಶವೇನೆಂದರೆ ಅಷ್ಟಾದರೂ ಅವರಿಗೆ ಸಿಕ್ಕಲಿ ಎಂದು. ಅದಕ್ಕೆ ಪೂರಕವಾಗಿ ಫೈನಾನ್ಸ್ ಕಮೀಷನ್ನವರು ಕೊಡತಕ್ಕ ಇಂಟಿರೀಯಂ ವರದಿಯನ್ನು ತಾವು ತಕ್ಷಣ ತರಿಸಿ ನಮಗೆ ಹೇಳಬೇಕು. ಅದರ ಬಗ್ಗೆ ತಮ್ಮ ಬಜೆಟ್ನಲ್ಲಿ ಈ ಪಂಚಾಯಿತಿರಾಜ್ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಹಣಕಾಸಿನ ನೆರವನ್ನು ಕೊಡುತ್ತೀರಿ ಎಂದು ನಾನು ನಂಬಿದ್ದೇನೆ. ನಾವು ಕೊಡತಕ್ಕ 56 ಕೋಟಿ ರೂ. ಅಲ್ಲದೆ ಕೇಂದ್ರದಿಂದ 150 ಕೋಟಿ ರೂ. ಇವತ್ತು ಪಂಚಾಯಿತಿಗಳಿಗೆ ಬರುತ್ತಿದೆ. ನಮ್ಮ ರಾಜ್ಯದ ಬಜೆಟ್ 3000 ಕೋಟಿ ರೂಪಾಯಿಗಳು ಇದರಲ್ಲಿ ಮೂರನೆಯ ಒಂದು ಭಾಗ $\frac{1}{3}$ ಹೆಚ್ಚು ಕಡಿಮೆ 1,000 ಕೋಟಿ ರೂ. ಇಷ್ಟು ಹಣವನ್ನು ನಮ್ಮ

ಪಂಚಾಯಿತಿ ರಾಜ್ ಸಂಸ್ಥೆಗಳ ಮೂಲಕ ಖರ್ಚು ಮಾಡುತ್ತಿದ್ದೇವೆ. ಈ 1,000 ಸಾವಿರ ಕೋಟಿ ರೂ.ಗಳ ಜೊತೆಗೆ ಇನ್ನೂ ಹೆಚ್ಚಿಗೆ ಜಾಸ್ತಿ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ. ಇದರ ಬಗ್ಗೆ ಗಮನಹರಿಸಬೇಕು. ಪಂಚಾಯಿತಿರಾಜ್ ಕಾರ್ಯ ವ್ಯಾಪ್ತಿಯನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಬೆಳೆಸುವುದಕ್ಕೆ ಹೊರಟಿದ್ದೇವೆ. ಕಾರಣವೇನೆಂದರೆ, 73ನೇ ಸಂವಿಧಾನ ತಿದ್ದುಪಡಿಯಲ್ಲಿ 11ನೇ ಷೆಡ್ಯೂಲ್ ಅದರಲ್ಲಿ ಅಡಕವಾಗಿದೆ. ಆ 11ನೇ ಷೆಡ್ಯೂಲ್ನಲ್ಲಿ ಯಾವ್ಯಾವ ಕೆಲಸಗಳನ್ನು ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಕೊಡಬೇಕು ಎಂದುಹೇಳಿ ಸಾಕಷ್ಟು ಪ್ರಸ್ತಾಪ ಅದರಲ್ಲಿ ಮಾಡಿದ್ದೇವೆ.

ಅದನ್ನೇ ಗಮನದಲ್ಲಿಟ್ಟುಕೊಂಡು ನಮ್ಮ ಆಕ್ಟ್‌ನಲ್ಲಿ 3 ಷೆಡ್ಯೂಲ್‌ಗಳನ್ನು ಸೇರಿಸಿದ್ದೇವೆ. ಅಂದರೆ ಯಾವ್ಯಾವ ಕಾರ್ಯಕ್ರಮಗಳನ್ನು ಯಾವ್ಯಾವ ಹಂತಕ್ಕೆ ಕೊಡಲಿಕ್ಕೆ ಸಾಧ್ಯ ಎಂಬ ಉದ್ದೇಶದಿಂದ ಮಾಡಿದ್ದೇವೆ. ಇದಾದ ನಂತರ ಇನ್ನೊಂದು ಕೆಲಸವನ್ನೂ ನಾವು ಮಾಡಿದ್ದೇವೆ. ಹೈಪವರ್ ಕಮಿಟಿ ಎಂದು ಮಾಡಿದ್ದೇವೆ. ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅಫಿಷಿಯಲ್ಸ್‌ಗಳನ್ನು ನೇಮಕ ಮಾಡಿದ್ದೇವೆ. ಹಲವಾರು ಸ್ಕೀಮುಗಳು ರಾಜ್ಯದಲ್ಲಿವೆ. ಆದರೆ ಯಾವ ಸ್ಕೀಮುಗಳು ಯಾವ ಮಟ್ಟಕ್ಕೆ ಕೊಡಬೇಕು, ಎಷ್ಟರಮಟ್ಟಿಗೆ ಅಧಿಕಾರ ಈ ಸ್ಕೀಮ್ ಬಗ್ಗೆ ಗ್ರಾಮ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಚಲಾಯಿಸಬೇಕು ಎಂಬುದನ್ನು ಇನ್ನೂ ಸ್ಪಷ್ಟವಾಗಿ ಕಾನೂನು ಪ್ರಕಾರ ನಾವು ಮಾಡಬೇಕಾಗಿದೆ. ತಾವು ವೈಟ್ ಪೇಪರ್ ತರುತ್ತೇವೆ ಎಂದು ಹೇಳಿದ್ದೀರಿ. ಯಾವ ಬಣ್ಣದ ಪೇಪರ್ ಆದರೂ ಇರಲಿ, ಅದರ ಬಗ್ಗೆ ಈ ಸರ್ಕಾರ ಏನು ಮಾಡಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ ಇದನ್ನು ನಿರ್ಲಕ್ಷ್ಯ ಮಾಡಿದರೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ತಾಲ್ಲೂಕು ಮಟ್ಟದಲ್ಲಿ ಏನೆಲ್ಲಾ ಕಾರ್ಯಕ್ರಮಗಳನ್ನು ಕೊಡಬೇಕು? ಅವರ ಒಂದು ಕಾನೂನು ವ್ಯಾಪ್ತಿಯಲ್ಲಿ ಯಾವ್ಯಾವುದನ್ನು ಕೊಡಬೇಕೆಂದಿದ್ದೇವೆಯೋ ಅದನ್ನು ಕೊಡಲಿಕ್ಕಾಗಲಿಕ್ಕಿಲ್ಲ, ಸುಮ್ಮ ಸುಮ್ಮನೆ ಒಂದು ವರ್ಷ ಕಾಲಹರಣ ಮಾಡಿದ ಹಾಗೆ ಆಗುತ್ತದೆ. 73ನೇ ತಿದ್ದುಪಡಿ ಏನಾಯಿತು, ಆದಾದ ನಂತರ ಒಂದು ವರ್ಷದ ಒಳಗಾಗಿ ಎಲ್ಲಾ ರಾಜ್ಯಗಳಲ್ಲೂ ಆ ತಿದ್ದುಪಡಿಗಳನ್ನು ಮಾಡಬೇಕು ಎಂದು ಇದೆ. ಈಗ ನಾನು ಹೆಮ್ಮೆಯಿಂದ ಹೇಳುವಂಥ ಮಾತು ಎಂದರೆ, ಕರ್ನಾಟಕ ನಮ್ಮ ದೇಶದಲ್ಲೇ ಪ್ರಥಮವಾಗಿ ಈ ಕೆಲಸ ಮಾಡಿದೆ. ಆಶ್ಚರ್ಯವಾಗಬಹುದು. 73ನೇ ಸಂವಿಧಾನ ತಿದ್ದುಪಡಿ ಏನು ಇದೆ, ಆ ಸಂವಿಧಾನ ತಿದ್ದುಪಡಿ ಏಪ್ರಿಲ್ 25, 1993ಕ್ಕೆ ಆಯಿತು. ಆದರೆ ಕರ್ನಾಟಕದಲ್ಲಿ 10, ಮೇ 1993ಕ್ಕೆ ಹೊಸ ಕಾನೂನು ಆಯಿತು. ಒಂದು ವರ್ಷವೂ ನಮಗೆ ಬೇಕಾಗಲಿಲ್ಲ, ಇನ್ನೊಂದು ಹೆಮ್ಮೆಯಿಂದ ಹೇಳುವಂತಹ ವಿಷಯ. ಒಮ್ಮತದಿಂದ ಈ ಕಾನೂನನ್ನು ಕರ್ನಾಟಕದಲ್ಲಿ ನಾವು ಪಾಸು ಮಾಡಿದ್ದೇವೆ. 13 ಏಪ್ರಿಲ್ 1993. ಸಂವಿಧಾನ ತಿದ್ದುಪಡಿ ಆಗುವುದಕ್ಕಿಂತ ಮುಂಚೆ ಒಂದು ವಾರದಲ್ಲಿ ಕರ್ನಾಟಕದಲ್ಲಿ ಅದಕ್ಕನುಗುಣವಾಗಿ ನಾವು ಒಮ್ಮತದಿಂದ ನಮ್ಮ ಹೊಸ ಕಾನೂನನ್ನು ಪಾಸು ಮಾಡಿದ್ದೇವೆ. ಒಮ್ಮತದಿಂದ ಪಾಸು ಮಾಡಿದ್ದೇವೆ. ಈ ಮಾತಿಗೆ ಬಹಳಷ್ಟು ಅರ್ಥ ಇದೆ. ತಾವು ಗಮನ ಕೊಡಬೇಕು. ಏಕೆಂದರೆ ಸಾಕಷ್ಟು ಚರ್ಚೆ ಇಲ್ಲಿ ನಡೆಯಿತು. ಕೌನ್ಸಿಲ್ನಲ್ಲೂ ಸಾಕಷ್ಟು ಚರ್ಚೆ ನಡೆಯಿತು. ಚರ್ಚೆ ನಡೆದ ನಂತರ ನಮ್ಮ ವಿರೋಧಪಕ್ಷದವರು ಸೂಚಿಸಿರತಕ್ಕ 7 ತಿದ್ದುಪಡಿಗಳನ್ನು ನಾವು ಅದರಲ್ಲಿ ಸೇರಿಸುತ್ತೇವೆ ಎಂದು ಹೇಳಿದ್ದೇವೆ.

ಇವತ್ತು ಅಮೆಂಡ್ಮೆಂಟ್, ಏನು ಇದೆ, 3, ಸೆಪ್ಟೆಂಬರ್ 1993 ಇಲ್ಲಿ ನಾನೇ ಮಂತ್ರಿಯಾಗಿ ಇಂಟರ್ಡ್ಯೂಸ್ ಮಾಡಿದ್ದೇನೆ. 11ನೇ ಅಮೆಂಡ್ಮೆಂಟ್. ವಿರೋಧ ಪಕ್ಷದವರು

ಮಾಡಿರತಕ್ಕಂತಹದ್ದು 7 ನಾವು ಸೇರಿಸಿರತಕ್ಕಂತಹದ್ದು 4. ಹೀಗೆ ಒಟ್ಟು 11 ಅಮೆಂಡ್ಮೆಂಟ್ನು ನಾನೇ ಮಂತ್ರಿಯಾಗಿ 3-9-93ಕ್ಕೆ ಇಂಟರ್ರೊಡ್ಯೂಸ್ ಮಾಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಮತ್ತೆ ತಮಗೆ ಆಶ್ಚರ್ಯವಾಗಬಹುದು. 15ನೇ ಫೆಬ್ರವರಿ 1994ರಲ್ಲಿ ನಾನೇ ಮಂತ್ರಿಯಾಗಿ ಆ ತಿದ್ದುಪಡಿಯನ್ನು ಇಲ್ಲಿ ಮಂಡಿಸಿದ್ದೆ. ಅದಕ್ಕಿಂತ ಹೆಚ್ಚಿಗೆ ನಾನು ಬೇರೆ ಏನನ್ನೂ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ದುರ್ದೈವದಿಂದ ತಿದ್ದುಪಡಿಗಳನ್ನು ಪಾಸ್ ಮಾಡುವ ಕಡೆ ಯಾರೂ ಲಕ್ಷ್ಯ ಕೊಡಲಿಲ್ಲ. ಏಕೆಂದರೆ ಎಲ್ಲಾ ಆ ಕಾಲಕ್ಕೆ ಧರಣ ಮಾಡುವುದರಲ್ಲಿ ಹೆಚ್ಚು ಕಾಲ ಗಮನ ಕೊಡುತ್ತಿದ್ದರು. ಇದು ನನ್ನ ತಪ್ಪು ಅಥವಾ ಆಗಿನ ಸರ್ಕಾರದ ತಪ್ಪಲ್ಲ. ಹೀಗಿರುವಾಗ ನೀವು ಆರ್ಡಿನೆನ್ಸ್ ತರಬೇಕಾಗಿತ್ತು ಎಂದು ಏನು ಇವರು ಹೇಳುತ್ತಿದ್ದಾರೆ ಅದು ಅರ್ಥರಹಿತವಾದುದು. ಆ 11 ತಿದ್ದುಪಡಿಗಳಲ್ಲಿ 7 ತಿದ್ದುಪಡಿಗಳು ಏನು ಇವೆ ಅವನ್ನು ನಾವು ಒಪ್ಪಿದಮೇಲೆಯೇ ನೀವು ಅದನ್ನು ಯುನಾನಿಮಸ್ಸಾಗಿ ಪಾಸ್ ಮಾಡಿದ್ದುದು. ಈಗ ಅದರ ಬಗ್ಗೆ ಪುನಃ ಹೊಸ ಚಿಂತನೆ ಮಾಡುವ ಅವಶ್ಯಕತೆ ಇಲ್ಲ. ತಾವು ಪದೇ ಪದೇ ಹೇಳುತ್ತಿರುವ ಮಾತು ಒಂದೇ. ಅಧಿಕಾರಸ್ಥರಿಗೆ ಬಹಳಷ್ಟು ಅಧಿಕಾರವನ್ನು ಕೊಟ್ಟಿದ್ದಾರೆ. ಒಂದೇ ಮಾತನ್ನು ಹೇಳುತ್ತಿದ್ದೇನೆ. ಈಗ ಅದನ್ನು ಹತ್ತು ಸಲ ಸದನದ ಒಳಗಡೆ ಹಾಗೂ ಹೊರಗಡೆ ಹೇಳಿದ್ದೇನೆ. ಆ ಪ್ರಶ್ನೆಯೇ ಇಲ್ಲ, ಏಕೆಂದರೆ, ಮೇಲ್ವಿಚಾರಣೆ ಮತ್ತು ನಿಯಂತ್ರಣ ಈ ಎರಡೂ ಪದಗಳನ್ನು ನಾನು ಪದೇ ಪದೇ ನನ್ನ ಆಕ್ಟ್ನಲ್ಲಿ ಬಳಸಿದ್ದೇನೆ ಎಂದರೆ ಚುನಾಯಿತ ಸಂಸ್ಥೆಗಳಿಗೆ ಸಂಪೂರ್ಣವಾದಂತಹ ಮೇಲ್ವಿಚಾರಣೆ ಮತ್ತು ನಿಯಂತ್ರಣ ಅವರು ಕೊಟ್ಟಿರತಕ್ಕ ಕೆಲಸದ ಮಟ್ಟಿಗೆ ಇದೆ. ಅದರ ಬಗ್ಗೆ ಅನುಮಾನ ಇಲ್ಲ. ಈಗ ಅಧಿಕಾರಿಗಳಿಗೂ ಅವರ ಜವಾಬ್ದಾರಿ ಇದೆ.

ಇವರು ಅಧಿಕಾರಿಗಳೇ ಆಗಲೀ ಅಥವಾ ಚುನಾಯಿತ ಪ್ರತಿನಿಧಿಗಳೇ ಆಗಲಿ ಕಾನೂನಿನ ಚೌಕಟ್ಟಿನಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ. ಅದೂ ಕೂಡ ಸ್ಪಷ್ಟ. ಅದನ್ನು ನೀವೂ ಕೂಡ ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಆದಕಾರಣ ಈ 7 ತಿದ್ದುಪಡಿಗಳನ್ನು ಒಪ್ಪಿದ್ದರಿಂದ ಯುನಾನಿಮಸ್ಸಾಗಿ ಆ ಆಕ್ಟ್ ಪಾಸ್ ಆಗಿರುವುದರಿಂದ ಹೊಸ ತಿದ್ದುಪಡಿಗಳನ್ನು ತಾವು ತರುವ ಅವಶ್ಯಕತೆ ಎಳ್ಳಷ್ಟೂ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ತಿದ್ದುಪಡಿಗಳನ್ನು ಇಲ್ಲಿ 10 ನಿಮಿಷದಲ್ಲಿ ಪಾಸ್ ಮಾಡಿಸಬಹುದು. ಏಕೆಂದರೆ ಅವೆಲ್ಲಾ ಒಪ್ಪಿಗೆಯಾದ ತಿದ್ದುಪಡಿಗಳು. ಅದರ ಬಗ್ಗೆ ಸಾಕಷ್ಟು ಚರ್ಚೆ ಆಗಿ ನಾವು ಒಮ್ಮತಕ್ಕೆ ಬಂದಮೇಲೆ ಅದರ ಬಗ್ಗೆ ಮತ್ತೆ ಪುನಃ ಚರ್ಚೆ ಆಗಬೇಕಾದ್ದಿಲ್ಲ. ಇದು ಕೇವಲ ಒಂದು ಟೆಕ್ನಾಕಾಲಿಟಿ. ಆ ಕಾಲಕ್ಕೆ ನೀವು ಪಾಸ್ ಮಾಡಲಿಕ್ಕೆ ಯಾರೂ ಮನಸ್ಸು ಮಾಡಲಿಲ್ಲ. ಈಗಲಾದರೂ ಮಾಡಿ. ನಾವೇ ಒಪ್ಪಿರತಕ್ಕ ತಿದ್ದುಪಡಿಗಳನ್ನು ನಾವು ಈ ಸದನದಲ್ಲಿ ಈ ಕಡೆಗೆ ಬಂದಿದ್ದೇವೆ ಎಂದು ಹೇಳಿ ನಾವು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ತಾವೂ ತಮ್ಮ ಅಭಿಪ್ರಾಯಗಳನ್ನು ಅದರ ಬಗ್ಗೆ ಬದಲಾಯಿಸುವುದಕ್ಕೆ ದಯಮಾಡಿ ಹೋಗಬಾರದು ಎಂದು ಹೇಳಿ ನಾನು ಎಚ್ಚರಿಕೆಯ ಮಾತನ್ನು ನಾನು ಹೇಳುತ್ತಿದ್ದೇನೆ.

ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಎಲೆಕ್ಟೆಡ್ ಬಾಡೀಸ್ನ ಸ್ಥಾಪನೆ ಮಾಡುವ ವಿಷಯದಲ್ಲಿ ಮುಂದಕ್ಕೆ ಹಾಕುವುದಕ್ಕೋಸ್ಕರ. ಈ ಬಗ್ಗೆ ಕಾರಣಗಳನ್ನು ಹುಡುಕುತ್ತಿದ್ದೀರಿ. ಈ ಕುಂಟು ನೆಪಗಳನ್ನು ಹುಡುಕುವುದು ಬೇಡ ಎಂದು ನಾನು ಹೇಳುತ್ತಿದ್ದೇನೆ. ಉದಾಹರಣೆಗೆ ಈ ರಿಸರ್ವೇಷನ್ಸ್. ಮಾನ್ಯ ಪಟೇಲ್ರಿಗೆ ಹೇಳುತ್ತಿದ್ದೇನೆ. ರಿಸರ್ವೇಷನ್ಸ್ ಬಗ್ಗೆ 73ನೇ ತಿದ್ದುಪಡಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಹರಿಜನ ಗಿರಿಜನರಿಗೆ ಅವರ ಜನಸಂಖ್ಯೆ ಪ್ರಕಾರ ಮೀಸಲಾತಿ ಕೊಡಲೇಬೇಕು. ನಮ್ಮ ರಾಜ್ಯದಲ್ಲಿಹರಿಜನ ಗಿರಿಜನರ ಸಂಖ್ಯೆ ಶೇಕಡ 18 ಇದ್ದಿದ್ದು ಇವತ್ತು 23 ಪರ್ಸೆಂಟ್ ಆಗಿದೆ. ಮತ್ತೆ ಒಬಿಸಿ

ಏನಿದೆ ಅವರಿಗೂ ರಿಸರ್ವೇಷನ್ ಮಾಡಬಹುದು ಎಂದು ಇದೆ. ನಾವು ಮೂರರಲ್ಲಿ ಒಂದು ಭಾಗ ಮಾತ್ರ ಓಬಿಸಿ ರಿಸರ್ವೇಷನ್ಸ್ ಮಾಡಿದ್ದೇವೆ. ಅದು 23 ಹಾಗೂ ಇದು 33 ಪರ್ಸೆಂಟ್ ಎಂದರೆ ಒಟ್ಟು 56 ಪರ್ಸೆಂಟ್ ಮಾತ್ರ ಆಗುತ್ತದೆ. ಅದು 18 ಪರ್ಸೆಂಟ್ ಇದ್ದಿದ್ದರೆ 18 ಹಾಗೂ 33 ಎಂದರೆ ಒಟ್ಟು 51 ಪರ್ಸೆಂಟ್ ಲಷ್ಟೇ ಆಗುತ್ತಿತ್ತು. ಈ ರಿಸರ್ವೇಷನ್ ಮಾಡುವಾಗ ಇದಕ್ಕೆ ಯಾರೂ ವಿರೋಧ ಮಾಡಲಿಲ್ಲ. ಏಕೆಂದರೆ ಓ.ಬಿ.ಸಿ. ಜನಸಂಖ್ಯೆ ಕರ್ನಾಟಕದಲ್ಲಿ 33 ಪರ್ಸೆಂಟ್ಗಿಂತ ಬಹಳಷ್ಟು ಜಾಸ್ತಿ ಇದೆ ಎಂಬುದು ಸರ್ವರಿಗೂ ಗೊತ್ತಿರತಕ್ಕ ವಿಷಯ. ಓಬಿಸಿ ಯಾರು ಎನ್ನುವ ಪ್ರಶ್ನೆ ಬಂದಾಗ ನಿಮ್ಮ ಈಗಿನ ಕಾನೂನು ಮಂತ್ರಿಗಳು ನಮ್ಮ 1986ರಲ್ಲಿ ಆರ್ಡರ್ನಲ್ಲಿ ಏನಿದೆ ಅದನ್ನೇ ತಾವು ಒಪ್ಪಿಕೊಳ್ಳಬೇಕೆಂದು ಹೇಳಿದರು ನಾವು ಒಪ್ಪಿಕೊಂಡೆವು.

ಏಕೆಂದರೆ, ಜಾತಿ ಘರ್ಷಣೆಗೆ ನಾವು ವರಿ ಮಾಡುವ ಉದ್ದೇಶ ಸರ್ಕಾರಕ್ಕೆ ಇರಲಿಲ್ಲ ಯಾವುದೇ ಒಂದು ಡೆಫನೀಷನ್, ನೀವೇ ಒಪ್ಪಿರತಕ್ಕ ಡೆಫನೀಷನ್, ಹಲವಾರು ವರ್ಷಗಳಿಂದ ಈ ರಾಜ್ಯದಲ್ಲಿ ಚಾಲ್ತಿಯಲ್ಲಿ ಇರತಕ್ಕ ಒಂದು ಡೆಫನೀಷನ್ 1986 ಆರ್ಡರ್. ರಾಮಕೃಷ್ಣ ಹೆಗಡೆಯವರು ಮಾಡಿರತಕ್ಕ ಒಂದು ಓಬಿಸಿ ಡೆಫನೀಷನ್ ಏನಿದೆ, ಯಾವುದು ಆರ್ಟಿಕಲ್ 16(4), 15(4) ನೀವು ಅನ್ವಯಿಸುತ್ತೀರಿ ಅದನ್ನೇ ಇಲ್ಲಿ ಅನ್ವಯಿಸಬೇಕು ಎಂದು ಹೇಳಿದಿರಿ. ನಾವು ಅದನ್ನು ಸಂತೋಷವಾಗಿ ಒಪ್ಪಿಕೊಂಡೆವು. ಏಕೆಂದರೆ ಜಾತಿಗಳಿಗಿಂತಲೂ ಆ 86ರ ಆರ್ಡ್ನರ್‌ಯಲ್ಲಿರತಕ್ಕ ಆದಾಯದ ಮಿತಿ ಏನು ಇದೆ ಅದು ಬಡವರ ದೃಷ್ಟಿಯಿಂದ ಹಿತಕರ; ಇಂತಹ ರಿಸರ್ವೇಷನ್ಗೋಸ್ಕರ ಎಂದು ಹೇಳಿ ನಾವು ಅದನ್ನು ಒಪ್ಪಿಕೊಂಡೆವು. ಆ 7 ತಿದ್ದುಪಡಿಗಳಲ್ಲಿ 1 ತಿದ್ದುಪಡಿ ಕೂಡ ಇದೆ. ನಾವು ಅದೇ ಡೆಫನೀಷನ್ನು ಉಪಯೋಗಿಸಬೇಕು. ಅಥವಾ ಆ ಡೆಫನೀಷನ್ ಜಾಗದಲ್ಲಿ ಬೇರೆ ಡೆಫನೀಷನ್ ಬಂದರೆ ಅದು ಬೇರೆ ವಿಷಯ. ಆದಕಾರಣ ಇದನ್ನೂ ಕೂಡ ನಾವು ಒಪ್ಪಿದ್ದೇವೆ. ಅಂದಮೇಲೆ ಈ ರಿಸರ್ವೇಷನ್ಸ್ ಮಾತು ಹೇಳಿ, ಈ ವಿಷಯವನ್ನು ಗೊಂದಲಕ್ಕೆ ಗುರಿ ಮಾಡುವುದು ಬೇಡ. ಸುಪ್ರೀಂಕೋರ್ಟ್ನವರು ಏನು ರಿಸರ್ವೇಷನ್ಸ್ ಬಗ್ಗೆ ಹೇಳಿದ್ದಾರೆ ಅದು ಆರ್ಟಿಕಲ್ 16(4) ಮತ್ತು 15(4) ಗೋಸ್ಕರ ಹೇಳಿರತಕ್ಕ ಮಾತು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಯವರು) : ತಮ್ಮ ರಿಸರ್ವೇಷನ್ ಪಾಲಿಸಿ ಹಿಂದಿರತಕ್ಕ ನೀತಿ ಮತ್ತು ಪಂಚಾಯಿತ್ ರಾಜ್ ವ್ಯವಸ್ಥೆಯಲ್ಲಿ ತಾವು ಮಾಡಿ ಬದಲಾವಣೆ, ಏಕೆಂದ್ದರೆ ನಾವೂ ಹಿಂದೆ ವಿಕೇಂದ್ರೀಕರಣವನ್ನು ಮಾಡಿದ್ದೆವು. ಆಗ ಮಂಡಲಪಂಚಾಯಿತಿಗಳು ಹಾಗೂ ಜಿಲ್ಲಾಪರಿಷತ್ತುಗಳು ಇದ್ದವು. ನಾವು ಹೇಗೆ ನಡೆಸಿದ್ದೆವು ಎಂಬುದೂ ನಿಮಗೆ ಗೊತ್ತಿದೆ. ಆದರೆ ನಾವು ಎಲ್ಲಿ ತಪ್ಪಿದ್ದೇವೆ, ಎಲ್ಲಿ ನಿಜವಾಗಿಯೂ ವಿಕೇಂದ್ರೀಕರಣ ಆಗಿಲ್ಲ ಎಂಬುದನ್ನು ತಿದ್ದುತ್ತೇವೆ ಎಂದು ಹೋಗಿ ನೀವು ಏನು ಆ ಏಳು ತಿದ್ದುಪಡಿಗಳ ಬಗ್ಗೆ ಹೇಳುತ್ತಿದ್ದೀರಲ್ಲಾ ಆ ಏಳು ತಿದ್ದುಪಡಿಗಳು ಅದೇ ಉದ್ದೇಶದಿಂದಲೇ. ಉದ್ದೇಶ ಒಳ್ಳೆಯದು ಇರಬಹುದು. ಆ 7 ತಿದ್ದುಪಡಿಗಳಲ್ಲಿ ಎಲೆಕ್ಟೆಡ್ ರೆಪ್ರೆಸೆಂಟಿಟೀವ್ಸ್ಗೆ ನಿಜವಾದ ಎಕ್ಸಿಕ್ಯೂಟಿವ್ ಪವರ್ ಇಲ್ಲ ಎಂಬುದು ಒಂದು ಮೂಲಭೂತವಾದಂತಹ ನಮ್ಮ ಆಲೋಚನೆ. ಅದನ್ನು ತಿದ್ದುವುದಕ್ಕೆ ನೀವೇ ಸದನದಲ್ಲಿ ಹೇಳಿದ್ದೀರಿ. ಒಪ್ಪಿಕೊಂಡಿದ್ದೀರಿ. ಆದರೆ ಆಗಲಿಲ್ಲ ಏಕೆ?

ಶ್ರೀ ಎಂ.ವೈ. ಘೋರ್ಪಡೆ : ಅದನ್ನೇ ಹೇಳುತ್ತಿದ್ದೇನೆ. ಇದರಲ್ಲಿ ಹೊಸದು ಏನೂ ಇಲ್ಲ. ಸೂಪರ್ವಿಷನ್ ಮತ್ತು ಕಂಟ್ರೋಲ್ ಆನ್ ಎಲೆಕ್ಟೆಡ್ ಬಾಡೀಸ್ ಏನು ಇದೆ ಅದು ತಿದ್ದುಪಡಿಯಲ್ಲಿ ಬರುವ ವಿಷಯ ಅಲ್ಲ, ನಮ್ಮ ಮೂಲ ಆಕ್ಟ್ನಲ್ಲಿ ಇರತಕ್ಕ ವಿಷಯ. ಎಲೆಕ್ಟೆಡ್ ಬಾಡಿ. ಸೂಪರ್ವಿಷನ್ ಮತ್ತು ಕಂಟ್ರೋಲ್ ಪೂರ್ಣ ಎನ್ನುವ ಪದ ಏನು ಇದೆ, ಅದನ್ನು ಏನೂ ಕೆಲವು ಸೆಕ್ಷನ್ನಲ್ಲಿ

ಸೇರಿಸಬೇಕು ಎಂದು ಹೇಳಿದಾಗ ನಾವು ಅದನ್ನು ಸಂತೋಷವಾಗಿ ಒಪ್ಪಿಕೊಂಡೆವು. ಏಕೆಂದರೆ ನಾವು ಮಾಡಿರತಕ್ಕ ಕಾನೂನಿಗೆ ಅದು ವಿರೋಧವಾಗಿರತಕ್ಕ ಸಲಹೆ ಇದ್ದಿಲ್ಲ. ಅದೇ ಸೂಪರ್ವಿಷನ್ ಮತ್ತು ಕಂಟ್ರೋಲ್ ಪದ ಇನ್ನೂ ಕೆಲವು ಸೆಕ್ಷನ್ನಲ್ಲಿ ಸೇರಿಸುತ್ತೇವೆಂದು ತಾವು ಹೇಳೋದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ. ಇಲ್ಲೇ ಆ ತಿದ್ದುಪಡಿಗಳನ್ನು ಮಂಡಿಸಿ ಫಾರ್ ಕನ್ಸಿಡರೇಷನ್ ಕೂಡಾ ತೆಗೆದುಕೊಂಡ ನಂತರ ಅದನ್ನು ಐದೇ ನಿಮಿಷದಲ್ಲಿ ಮುಗಿಸಬಹುದಾಗಿತ್ತು. ವಿರೋಧಪಕ್ಷದವರೂ ಆ ಬಗ್ಗೆ ಲಕ್ಷ್ಯ ಕೊಡಲಿಕ್ಕೆ ತಯಾರಿದ್ದಿಲ್ಲ. ಯಾರದ್ದೇ ತಪ್ಪು ಇರಲಿ. ಅದು ನಡೆಯಲಿಲ್ಲ ಹೋಗಲಿ. ಅದರ ಬಗ್ಗೆ ಚರ್ಚೆ ಹೆಚ್ಚು ಬೇಡ. ನಾವು ಹೇಳುವುದು.

ಶ್ರೀ ಜೆ.ಹೆಚ್. ಪಟೇಲ್ : ತಾವು ರಾಜೀನಾಮೆ ಏಕೆ ಕೊಟ್ಟಿರಿ ಯೋಚನೆ ಮಾಡಿ.

ಶ್ರೀ ಎಂ.ವೈ. ಘೋರ್ಪಡೆ : ಆ ಅಮೆಂಡ್ಮೆಂಟ್ಗೆ ಅದಕ್ಕೆ ಸಂಬಂಧ ಇಲ್ಲ. ನಾನು ರಾಜೀನಾಮೆ ಯಾಕೆ ಕೊಟ್ಟೆ ಪಂಚಾಯಿತ್ಗೋಸ್ಕರ ಅದು ಹಳೇ ಕತೆ ಇದೆ. ಅದರ ಬಗ್ಗೆ ಪುನಃ ಪ್ರಸ್ತಾಪ ಮಾಡುವುದರಲ್ಲಿ ವ್ಯರ್ಥ ಅದರಿಂದ ಉಪಯೋಗ ಆಗುವುದಿಲ್ಲ. ಆ ತಿದ್ದುಪಡಿಗಳನ್ನು ನಾವು ಒಪ್ಪಿದಾಗ ವಾದವಿವಾದ ಮುಗಿಯಿತು. ಇವತ್ತು 10 ನಿಮಿಷದಲ್ಲಿ ಅದನ್ನು ಪಾಸ್ ಮಾಡಿ. ಏಕೆಂದರೆ ಅದು ಯುನಾನಿಮಸ್, ಎಲ್ಲರೂ ಒಪ್ಪಿರತಕ್ಕ ತಿದ್ದುಪಡಿ ಇರುವುದರಿಂದ ಅದರ ಬಗ್ಗೆ ಹೊಸ ಚಿಂತನೆಯನ್ನು ನಾವು ಪ್ರಾರಂಭ ಮಾಡುವ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತಿದ್ದೇನೆ. ಸುಪ್ರೀಂ ಕೋರ್ಟ್ದೇನಿದೆ 50 ಪರ್ಸೆಂಟ್, ಅದು 15(4) ಮತ್ತು 16(4) ಗೆ ಅನ್ವಯಿಸುತ್ತದೆ. ಇವತ್ತು ನಾವು ಇಲ್ಲಿ 56 ಪರ್ಸೆಂಟ್ ರಿಸರ್ವೇಷನ್ ಕೊಟ್ಟತಕ್ಷಣ, ಇದು ಕಾನೂನು ಬಾಹಿರವಾಗಿದೆ ಎಂದು ಯಾವ ಕೋರ್ಟ್ ಕೂಡ ಹೇಳಿಲ್ಲ. ಆದಕಾರಣ, ಆ ಸುಪ್ರೀಂ ಕೋರ್ಟ್ ಹೇಳಿರತಕ್ಕ ಮಾತಿಗೆ, ರಾಜಕೀಯ ರಿಸರ್ವೇಷನ್ಸ್ಗೆ ಯಾವ ಸಂಬಂಧವಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮತ್ತೆ ನಿಮ್ಮದೇ ಆದಂಥ 1986 ಆರ್ಡರ್ ಏನಿದೆ, ಅದರ ಪ್ರಕಾರ ನೀವು ಚುನಾವಣಾ ಆಯುಕ್ತರಿಗೆ ಹೇಳಬಹುದಲ್ಲಾ,

ಅಧ್ಯಕ್ಷರು : 1986ರ ಸರ್ಕಾರಿ ಆದೇಶ ಏನಿತ್ತು, that was just a stop-gap arrangement. ಚಿನ್ನಪ್ಪರೆಡ್ಡಿ ಆಯೋಗ ಬರುವುದಕ್ಕೆ ಮೊದಲು, ವೆಂಕಟಸ್ವಾಮಿ ಕಮೀಷನ್ ವಿರುದ್ಧ ಅಭಿಪ್ರಾಯ ವ್ಯಕ್ತವಾದಾಗ, it came into force only as a interim arrangement. I don't know how that it became the basis for identifying.

SRI. M.Y. GHORPADE : All that I am saying is that need not be a difficulty to postpone the elections. For the purpose of election, you to define only backwardclasses.. 1986 order is there. All that you have to do is that to tell the Election Commission to follow the 1986 order 86ರ ಆರ್ಡರ್ ಪ್ರಕಾರ ನಾವು ಗ್ರಾಮಪಂಚಾಯಿತ್ತಿ ಚುನಾವಣೆಗಳನ್ನು ಮಾಡಿದ್ದೇವೆ. 5,600 ಗ್ರಾಮ ಪಂಚಾಯಿತ್ತಿಗಳಲ್ಲಿ 80 ಸಾವಿರ ಜನರನ್ನು ಕರ್ನಾಟಕದ ಜನತೆ ಆರಿಸಿದ್ದಾರೆ. ಅದು ಯಾವ ಪ್ರಕಾರ ಎಂದರೆ, 86 ಆರ್ಡರ್ ಪ್ರಕಾರವೇ ಇದೆ.

MR. SPEAKER : That is precisely what I am saying. The very method we chose to reply on this 86 order was only unscientific because that was a temporary arrangement. It is not a permanent feature.

ಶ್ರೀ ಎಂ.ವೈ. ಘೋರ್ಪಡೆ : ಆ ಆರ್ಡರನ್ನು ನಾವು ಅನುಸರಿಸಬೇಕೆಂದು ವಿರೋಧಪಕ್ಷದವರೇ ಒತ್ತಾಯ ಮಾಡಿದಾಗ, ನಾವು ಒಪ್ಪಿದ್ದು.

ಶ್ರೀ ಜೆ.ಹೆಚ್. ಪಟೇಲ್ : ನಾವು ಒಪ್ಪಿದೆವು. ನೀವು ಆ ರಿಸರ್ವೇಷನ್ ಬಗ್ಗೆ ಚುನಾವಣೆಯನ್ನು ಮುಂದೆ ಹಾಕುವಾಗ, ಬೇರೆ ರಿಸರ್ವೇಷನ್ ಆರ್ಡರ್ ಹೊರಡಿಸಿದಿರಿ. ಅನಂತರ, ನಿಮ್ಮ ಸರ್ಕಾರ ಮತ್ತೊಂದು ಹೊರಡಿಸಿದಿರಿ. ಎಲ್ಲಿಯವರೆಗೆ, ಅದು ಕೋರ್ಟ್‌ಗೆ ಹೋಗಿ ಅದು ಸ್ಟ್ರೈಕ್ ಡೌನ್ ಆಗುತ್ತದೆ, ಅಲ್ಲಿಯವರೆಗೆ ನೀವು ಮಾಡಿದಿರಿ. ಕೊನೆಗೆ, ಸುಪ್ರೀಂಕೋರ್ಟ್ ಆರ್ಡರ್ ಬರಲಿ ಎಂಬುದೇ ನಿಮ್ಮ ಸರ್ಕಾರದ ಉದ್ದೇಶ ಇತ್ತು. ನೀವು ಏಕೆ ಆ ರೀತಿ ಹೇಳುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ : ನನ್ನ ರಾಜೀನಾಮೆ ಹಿಂದೆ ಏನಾಯಿತು ಎಂಬುದು ಬೇರೆ ವಿಷಯ, ಅದನ್ನು ನಾನು ಈಗ ಪ್ರಸ್ತಾಪ ಮಾಡುತ್ತಿಲ್ಲ. ಈ ತಿದ್ದುಪಡಿ ಏನಿದೆ, 10 ನಿಮಿಷದಲ್ಲಿ ಒಪ್ಪಬೇಕೆಂದು ಹೇಳುತ್ತೇನೆ. ಎರಡನೆಯದು ಡಿ-ಲಿಮಿಟೇಷನ್ ಬಗ್ಗೆ...

MR. SPEAKER : If you could kindly yield. Former Rural Development Minister Sri Yavgal wants to say something, because he worked under late Nazir Sab.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಮಾನ್ಯ ಘೋರ್ಪಡೆಯವರು ಈ 86ರ ಆದೇಶವನ್ನು ಏನು ಪ್ರಸ್ತಾಪ ಮಾಡಿದರು, ಆಗಿನ ಚುನಾವಣೆ ನಡೆದಾಗ, ಅದರನ್ವಯ ಅದಕ್ಕೆ ಆಗಿತ್ತೆಂದು ಇಲ್ಲ, ಅದು 71ರ ಸೆನ್ಸಸ್ ಮೇಲೆ ಮಾತ್ರ ಆಗಿತ್ತು. ರಿಸರ್ವೇಷನ್ ಮಾತ್ರ. ಲೇಡೀಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಬಗ್ಗೆ ಮಾತ್ರ ರಿಸರ್ವೇಷನ್ ಆಗಿತ್ತು.

ಶ್ರೀ ಎಂ.ವೈ. ಘೋರ್ಪಡೆ : ಆರ್ಟಿಕಲ್ 15(4) ಮತ್ತು 16(4) ಅದಕ್ಕೋಸ್ಕರ ಮಾಡಿರತಕ್ಕ ಆರ್ಡರ್ ಅದು. ನಾವು ಹೊಸ ಕಾನೂನಿನಲ್ಲಿ ರಾಜಕೀಯವಾಗಿ, ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಮೂರರಲ್ಲಿ ಒಂದು ಭಾಗ ಮೀಸಲಿಡಬೇಕೆಂಬ ಪ್ರಶ್ನೆ ಆಗ ಇರಲಿಲ್ಲ, ನಾವು ಹೊಸದಾಗಿ ಅದನ್ನು ಪಾಸ್ ಮಾಡಿದ್ದೇವೆ. ಏಕೆಂದರೆ, 73ರ ತಿದ್ದುಪಡಿಯಲ್ಲಿ ಅದನ್ನು ಮಾಡಲಿಕ್ಕೆ ಅವಕಾಶ ಇತ್ತು ಎಂದು ನಾವು ಮಾಡಿದ್ದೇವೆ. ಇದಾದಮೇಲೆ, ಯಾವ ಡೆಫಿನಿಷನ್‌ನ್ನು ಉಪಯೋಗಿಸಬೇಕೆಂಬ ಪ್ರಶ್ನೆ ಬಂದಾಗ, ನಿಮ್ಮ ಹಳೆಯ ಡೆಫಿನಿಷನ್‌ನ್ನು ನಾವು ಉಪಯೋಗಿಸಿದ್ದೇವೆ. ಮಾನ್ಯ ನಸೀರ್ ಸಾಬ್‌ರವರ ಬಗ್ಗೆ ನನಗೆ ಬಹಳಷ್ಟು ಅಭಿಮಾನ ಇದೆ. ಅವರ ಕಾಲಕ್ಕೆ ಏನು ಮಾಡಿದರು ಅದಕ್ಕೂ ಹಲವಾರು ಹೆಜ್ಜೆಗಳು ಮುಂದೆ ಹೋಗಿದ್ದೇವೆ.

ಶ್ರೀ ಜೆ.ಹೆಚ್. ಪಟೇಲ್ : ಅವರ ಆಕ್ಟ್‌ನಲ್ಲಿರುವ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಪಂಚಾಯತ್ ಲೆವಲ್‌ನಲ್ಲಿ ಮಾತ್ರ. ಅವರು ಮಾಡಿದ ಆಕ್ಟ್‌ನಲ್ಲೇ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಇದೆ. ಈ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಎಂದರೆ, it is not equal to executive powers of a body, or Head of the Institution. ಎಕ್ಸಿಕ್ಯುಟಿವ್ ಪವರ್ಸ್ ಎಂದರೆ ಡೆಫಿನಿಷನ್ ಬೇರೆ, ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಬೇರೆ. ಮಾನ್ಯ ಸದಸ್ಯರು ಸಚಿವರಾಗಿದ್ದಾಗ ಮಾಡಿದ ಕಾನೂನಿನಲ್ಲಿ ಪಂಚಾಯತ್ ಮಟ್ಟದಲ್ಲಿ ಈ ಪದ ಇದೆ. ಇವರು ಪ್ರಪೋಸ್ ಮಾಡಿದ ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯ್ತಿನಲ್ಲಿ ಈ ಪದ ಇಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಈ ಅಭಿಪ್ರಾಯ ಸತ್ಯಕ್ಕೆ ದೂರವಾದುದು. ಏಕೆಂದರೆ, ತಾವು ನಮ್ಮ ಕಾನೂನು ನೋಡಿ. ಸೆಕ್ಷನ್ 152 ಮತ್ತು ಸೆಕ್ಷನ್ 193(ಸಿ)

ಇದು ತಾಲ್ಲೂಕು ಮತ್ತು ಜಿಲ್ಲಾಮಟ್ಟಕ್ಕೆ ಅನ್ವಯಿಸುವಂತಾದ್ದು. ಇದರಲ್ಲಿ it is mentioned as follows:

"Exercise, supervision and control over the Executive officer for securing implementation of resolution or decision of the Taluka Panchayat or of the Standing Committee which are not inconsistent with the provisions of this Act".

This is what is mentioned here.

ಅಂದರೆ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾಮಟ್ಟದಲ್ಲಿ ಎಕ್ಸಿಕ್ಯುಟಿವ್ ಆಫೀಸರ್ಸ್ ಮೇಲೆ ಸಂಪೂರ್ಣವಾದ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಚಲಾಯಿಸುವುದಕ್ಕೆ ಎಲೆಕ್ಟೆಡ್ ಬಾಡಿಗೆ ಅಧಿಕಾರ ಇದೆ. ಆದರೆ, ಅದು ಕಾನೂನು ಪ್ರಕಾರವಾಗಿ ಇರಬೇಕು. ಹಿಂದೆ ಏನಾಯಿತು, ಈ ಎಕ್ಸಿಕ್ಯುಟಿವ್ ಆಫೀಸರ್ಸ್, ಚೀಫ್ ಸೆಕ್ರೆಟರೀಸ್ ನಮಗೆ ಯಾವ ಜವಾಬ್ದಾರಿ ಇಲ್ಲವೆಂದು, ಲಕ್ಷಗಟ್ಟಲೆ ಹಣ ಲೂಟಿಯಾದರೂ ಕೂಡ ಅವರಿಗೆ ನಾವು ಶಿಕ್ಷೆ ಮಾಡಲಿಕ್ಕಾಗಲಿಲ್ಲ. ಏಕೆಂದರೆ, ಅವರು ಚುನಾಯಿತ ಪ್ರತಿನಿಧಿಗಳ ಮೇಲೆ ತಪ್ಪು ಹಾಕುತ್ತಿದ್ದರು. ಈ ವಿಷಯ ಕೋರ್ಟಿಗೆ ಹೋಗಿದೆ. ಕೋರ್ಟ್‌ನಲ್ಲಿ ಕೂಡ ಅವರ ಮೇಲೆ ಏನೂ ಮಾಡಲಿಕ್ಕಾಗಲಿಲ್ಲ. ಏಕೆಂದರೆ, ಅವರು ಹೇಳಿದರು, ನಮ್ಮ ಜವಾಬ್ದಾರಿ ಅಲ್ಲ, ಚುನಾಯಿತ ಪ್ರತಿನಿಧಿಗಳು ಮಾಡಿದ್ದಾರೆ, ನಮಗೆ ಕಾನೂನು ಪ್ರಕಾರ ಅದನ್ನು ಮಾಡಲಿಕ್ಕೆ ಅವಕಾಶ ಇಲ್ಲ ಎನ್ನುವ ಮಾತನ್ನು ಕೋರ್ಟ್‌ನಲ್ಲಿ ಹೇಳಿದ್ದಾರೆ. ನಾವು ಮಾಡಿರತಕ್ಕಂಥಾದ್ದು ಅಧಿಕಾರ ಹೆಚ್ಚಿಸಲಿಕ್ಕೆ ಅಲ್ಲ. ಅವರ ಮೇಲೆ ನಿಯಂತ್ರಣವನ್ನು ಇಡುವುದಕ್ಕೋಸ್ಕರ. ಅವರೇನಾದರೂ ಕಾನೂನುಬಾಹಿರವಾಗಿ ಪಬ್ಲಿಕ್ ಫಂಡ್ಸ್‌ನ್ನು ದುರುಪಯೋಗ ಮಾಡಿದರೆ, ಅವರಿಗೆ ಶಿಕ್ಷೆ ಕೊಡುವಂಥ ಅಧಿಕಾರವನ್ನು ದಯವಿಟ್ಟು ಇಟ್ಟುಕೊಳ್ಳಿ. ಇಲ್ಲದೇ ಹೋದರೆ, ಈ ಪಂಚಾಯತ್ ರಾಜ್ ಏನಿದೆ, ಇದು ಭ್ರಷ್ಟಾಚಾರದ ವಿಕೇಂದ್ರೀಕರಣ ಆಗಲಿಕ್ಕೆ ಸಾಧ್ಯವಿದೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ : ಸನ್ಮಾನ್ಯ ಘೋರ್ಪಡೆಯವರು ಮಾತನಾಡಿದುದರಲ್ಲಿ ಅಂದಿನ ನಜೀರ್ ಸಾಬ್ ರವರ ಪಂಚಾಯತ್ ರಾಜ್ ನಲ್ಲಿ ಜನರ ಕೈಗೆ ಅಧಿಕಾರ ಇತ್ತು, ಇವರು ಬಂದ ಮೇಲೆ ಅದನ್ನು ಕಿತ್ತುಕೊಂಡು, ಅಲ್ಲಿರತಕ್ಕಂಥ ಕೇವಲ ಸರ್ಕಾರಿ ಅಧಿಕಾರಿಗಳ ಕೈಗೆ ಅಧಿಕಾರ ಕೊಡುವುದನ್ನು ಮಾಡಿದರು ಎನ್ನುವ ಅರ್ಥ ಬರುತ್ತದೆ. ಪ್ರತಿನಿಧಿಯಾಗಿ ಆರಿಸಿ ಬಂದಿರತಕ್ಕ ಪಂಚಾಯತ್ ರಾಜ್ ಸದಸ್ಯರು ಇರಬಹುದು ಅಥವಾ ಅಧ್ಯಕ್ಷರು ಇರಬಹುದು, ಅವರುಗಳು ಅಲ್ಲಿರತಕ್ಕಂಥ ಒಬ್ಬ ಅಧಿಕಾರಿ ಹಿಂದೆ ತಿರುಗಾಡತಕ್ಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿದರು ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಇದು ರಾಜಕೀಯ ಪ್ರಚಾರ ಆಯಿತು. ತಮ್ಮ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಈ ರಾಜಕೀಯ ಪ್ರಚಾರ ಈ ರೀತಿ ನಡೆಯುತ್ತಾ ಇದೆ.

ಶ್ರೀಮತಿ ಆರ್. ಲೀಲಾವತಿ ಪ್ರಸಾದ್ : ಇದರಲ್ಲಿ ರಾಜಕೀಯ ಪ್ರಚಾರ ಇಲ್ಲ, ಸತ್ಯವನ್ನು ಹೇಳುತ್ತಿದ್ದೇನೆ. ತಮ್ಮ ಕಾನೂನಿನಲ್ಲಿ ಏನು ಮಾಡಿದಿರಿ ಎಂಬ ಬಗ್ಗೆ ಸತ್ಯ ಹೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ನಾನೂ ಕೂಡ ಕಾನೂನನ್ನು ಓದಿ ಹೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ಈ ಪಂಚಾಯತ್‌ರಾಜ್ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಬೇಕೆಂದು. ಅವರಿಗೆ ಸಂಪೂರ್ಣವಾದ ಆಸೆ ಇತ್ತು. ಮೊದಲು

ಚುನಾವಣೆಯಾಗಬೇಕೆಂದು ಇತ್ತು, ಅದು ಆಗಲಿಲ್ಲ, ರಾಜೀನಾಮೆ ಕೊಟ್ಟರು. We appreciate his action. Rarely we came across such people. ಇಲ್ಲಿ ಏನಾಗಿದೆ, ಪಂಚಾಯತ್ ಅಧ್ಯಕ್ಷರ ಅಧಿಕಾರಗಳನ್ನು ಡಿಫೈನ್ ಮಾಡುವಾಗ, ಅವರು ಹೇಳಿದಹಾಗೆ ಸೂಪರ್‌ವಿಷನ್ ಅಂಡರ್ ಕಂಟ್ರೋಲ್ ಎಂದು ಹಾಕಿದ್ದಾರೆ. ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಿಗೆ ಮತ್ತು ಜಿಲ್ಲಾಪಂಚಾಯಿತಿ ಅಧ್ಯಕ್ಷರುಗಳ ಅಧಿಕಾರ ಏನಿದೆ, ಅಲ್ಲಿ ಸೂಪರ್‌ವಿಷನ್ ಎಂದು ಮಾತ್ರ ಹಾಕಿದ್ದಾರೆಯೇ ಹೊರತು ಕಂಟ್ರೋಲ್ ಎಂದು ಹಾಕಿಲ್ಲ. ಅದನ್ನೇ ನಾವು ಇನ್‌ಸಿಸ್ಟ್ ಮಾಡಿದ್ದುದು, ಪಂಚಾಯಿತಿಗೆ ಮಾತ್ರ ಕಂಟ್ರೋಲ್ ಎಂದು ಸೇರಿಸಿದ್ದೀರಿ, ಇಲ್ಲಿ ಮಾತ್ರ ಸೇರಿಸಿಲ್ಲವೆಂದೂ, ಇಲ್ಲಿಯೂ ಕಂಟ್ರೋಲ್ ಎಂಬ ಪದವನ್ನು ಸೇರಿಸಿ ಎಂದು ಹೇಳಿದೆವು.

ಶ್ರೀ ಎಂ.ವೈ. ಘೋರ್ಪಡೆ : ಇದು ಸರಿಯಲ್ಲ, ಎಂದು ನಾನು ಹೇಳುತ್ತಿದ್ದೇನೆ. ಏಕೆಂದರೆ "ಸಿ" ನಲ್ಲಿ ಈ ಪದ ಇದೆ. ಅದೇ ಪದ ಅಂದರೆ, "ಕಂಟ್ರೋಲ್" ಎನ್ನುವುದನ್ನು "ಡಿ" ಸೆಕ್ಷನ್‌ನಲ್ಲೂ ಸೇರಿಸಿ ಎಂದು ತಾವು ಹೇಳಿದಿರಿ. ಇರಲಿಲ್ಲವೆಂದಲ್ಲ, ಇತ್ತು. ಇನ್ನೊಂದು ಸೆಕ್ಷನ್‌ನಲ್ಲೂ ಸೇರಿಸಿ ಎಂದು ಹೇಳಿದಿರಿ, ನಾವು ಸುಲಭವಾಗಿ ಅದನ್ನು ಒಪ್ಪಿಕೊಂಡೆವು. ಏಕೆಂದರೆ, ಅದು ನಮ್ಮ ಉದ್ದೇಶವೇ ಆಗಿರುವುದರಿಂದ, ನಾವು ಒಪ್ಪಿಕೊಂಡೆವು. ಇನ್ನು ಡೀ-ಲಿಮಿಟೇಷನ್ ಬಹಳ ನ್ಯಾಯವಾಗಿ ಮಾಡಿದ್ದೇವೆ.

4.55 ಪಿ.ಎಂ.

ಡಿ ಲಿಮಿಟೇಷನ್ ಸರಿ ಇಲ್ಲ ಎಂದು ಹೇಳಿ ಯಾವ ಕೋರ್ಟಿನಲ್ಲಿಯೂ ಕೂಡ ನಮ್ಮ ಗ್ರಾಮ ಪಂಚಾಯಿತಿಯು ಚುನಾವಣೆಯನ್ನು ರದ್ದು ಮಾಡಿಲ್ಲ. ಈಗ ತಾವು ಟೈಮ್ ಎರಡು ಮೂರು ತಿಂಗಳು ತೆಗೆದುಕೊಂಡು ಡೀಲಿಮಿಟೇಷನ್ ಸರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಇದರ ಬಗ್ಗೆ ನಾನು ಒಂದು ಎಚ್ಚರಿಕೆಯ ಮಾತನ್ನು ಹೇಳಬೇಕು. ನಾವು ಶಾಸ್ತ್ರೀಯವಾಗಿ ಮಾಡಿರತಕ್ಕಂಥ ಡೀಲಿಮಿಟೇಷನ್ ಅನ್ನು based upon contiguity, population etc., ನೀವು ರಾಜಕೀಯವಾಗಿ ಏನಾದರೂ ಹಸ್ತಕ್ಷೇಪ ಮಾಡಿ ಏನಾದರೂ ಬದಲಾಯಿಸಲು ಪ್ರಯತ್ನ ಮಾಡಿದರೆ ಆಗ ನಾವು ನಮ್ಮ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ತಾವು ಮಾಡಲಿಕ್ಕೆ ಇಲ್ಲ; ಮಾಡಬಾರದು ಎಂದು ಹೇಳುತ್ತಿದ್ದೇನೆ. ನನ್ನ ಡ್ಯೂಟಿ ಏನು ಇದೆ, ಅದನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಕ್ಷೇತ್ರಗಳ ವಿಂಗಡಣೆ ಮಾಡತಕ್ಕಂಥಾದ್ದರಲ್ಲಿ ಅದು ಸರಿ ಇಲ್ಲ. ವೈಜ್ಞಾನಿಕವಾಗಿ ಮಾಡಿಲ್ಲ ಎಂದು ಹೇಳಿ ಆರೋಪಗಳು ಬಂದು ಅದರ ಬಗ್ಗೆ ಬೋಪಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿ ಅವರು ವರದಿ ಕೂಡ ಕೊಟ್ಟಿದ್ದಾರೆ. ಆ ವರದಿ ಪ್ರಕಾರ ಅದು ವೈಜ್ಞಾನಿಕವಾಗಿಲ್ಲ, ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಸನ್ಮಾನ್ಯ ಘೋರ್ಪಡೆಯವರು ಹೇಳುತ್ತಾರೆ ಅದನ್ನು ನಾವು ಶಾಸ್ತ್ರೀಯವಾಗಿ ಮಾಡಿದ್ದೇವೆ ಎಂದು. ತಾವು ಇಲ್ಲ ಎಂದು ಹೇಳುತ್ತಿದ್ದೀರಿ. ರಾಜಕೀಯ ಹಸ್ತಕ್ಷೇಪ ಮಾಡಿದರೆ ಅದಕ್ಕೆ ತೀವ್ರವಾದ ಪ್ರತಿಭಟನೆ ಬರುತ್ತದೆಂದು ಅವರು ಹೇಳುತ್ತಾರೆ. ಎಲ್ಲಿ ರಾಜಕೀಯ ಹಸ್ತಕ್ಷೇಪ ಮಾಡಿ ಕೆಟ್ಟಿದೆ ಅದನ್ನು ಸರಿಪಡಿಸಿ, ಶಾಸ್ತ್ರೀಯವಾಗಿ ಎಲ್ಲಿ ಆಗಿದೆ ಅದನ್ನು ಹಾಗೆಯೇ ಉಳಿಸಿಕೊಳ್ಳಿ. I think that should be a fair manner.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಶಾಸ್ತ್ರೀಯವಾಗಿ ಮಾಡಬೇಕೆಂದು ಅವರ ಮನಸ್ಸಿನಲ್ಲಿ ಇತ್ತೋ ಏನ ಆದರೆ, ಶಾಸ್ತ್ರೀಯವಾಗಿ ಆಗಲಿಲ್ಲ, ಅದು

ಶಾಸ್ತ್ರೀಯವಾಗಿ ಆಗದೇ ಬೊಪ್ಪಣ್ಣನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಆಗಿ ಅದು ಸರಿ ಇಲ್ಲ ಎಂಬ ವರದಿ ಕೊಟ್ಟಿದ್ದಾರೆ. ಅವರ ಒಂದು ವರದಿಯ ಪ್ರಕಾರವಾಗಿ ಅದು ಶಾಸ್ತ್ರೀಯವಾಗಿ ಆಗಿಲ್ಲ, ವೈಜ್ಞಾನಿಕವಾಗಿ ಆಗಿಲ್ಲ ಅವರು ಡಿ ಲಿಮಿಟೇಷನ್ ಸರಿ ಮಾಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ.

MR. SPEAKER : Dr. Shankar Naik was a Z P Vice and he appears to be having some interesting point.

ಡಾ|| ಶಂಕರನಾಯಕ್ : ಮಾನ್ಯ ಅಧ್ಯಕ್ಷರೇ, ಈಗ ವೈಜ್ಞಾನಿಕವಾಗಿ ಮಾಡಿಲ್ಲ ಎನ್ನುವುದಕ್ಕೆ ಕೆಲವು ಮಂಡಲ ಪಂಚಾಯಿತಿಗಳಲ್ಲಿ 8 ಜನ ಸದಸ್ಯರಿರುವ ಮಂಡಲ ಪಂಚಾಯತಿಗಳನ್ನು ಮಾಡಿದ್ದಾರೆ. ಅಂದರೆ 4 ಸಾವಿರ ಪಾಪ್ಯುಲೇಷನ್‌ನಲ್ಲಿ ಅವರ ಒಂದು ನೀತಿಯ ಪ್ರಕಾರ ಐದೂವರೆ ಸಾವಿರ ಪಾಪ್ಯುಲೇಷನ್ ಬೇಕಾಗಿತ್ತು ಒಂದೊಂದು ಮಂಡಲ ಪಂಚಾಯಿತಿ ಮಾಡುವುದಕ್ಕೆ. ಕೆಲವು ಮಂಡಲ ಪಂಚಾಯಿತಿಗಳಲ್ಲಿ 16 ಜನ ಸದಸ್ಯರು ಇದ್ದಾರೆ. ಕೆಲವು ಕಡೆ 8 ಜನ ಸದಸ್ಯರಿರುವ ಮಂಡಲ ಪಂಚಾಯತಿಗಳನ್ನು ಅವರು ಮಾಡಿದ್ದಾರೆ. ಅವರು ಕಂಟ್ರೋಲ್ ಅಂಡ್ ಪವರ್ಸ್ ಕೊಟ್ಟಿದ್ದಾರೆ. ಚುನಾಯಿತ ಪ್ರತಿನಿಧಿಗಳು ಮಾಡಿದಂತಹ ನಿರ್ಣಯಗಳನ್ನು ಎಕ್ಸಿಕ್ಯೂಟೀವ್ ಆಫೀಸರ್ಸ್ ಏನು ಇದ್ದಾರೆ ಅವರು ಅದನ್ನು ಇಂಪ್ಲಿಮೆಂಟ್ ಮಾಡಿದರೂ ಮಾಡಬಹುದು ಬಿಟ್ಟರೂ ಬಿಡಬಹುದು ಎನ್ನುವುದನ್ನು ಅವರು ಅದರಲ್ಲಿ ಸೇರಿಸಿದ್ದಾರೆ. ಚುನಾಯಿತ ಪ್ರತಿನಿಧಿಗಳಿಗೆ ಅದರ ಮೇಲೆ ಯಾವ ಅಧಿಕಾರ ಇದೆ ಎಂದು ನಾನು ಕೇಳಬಯಸುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಅಧಿಕಾರಿಗಳಾಗಲಿ ಅಥವಾ ಚುನಾಯಿತ ಪ್ರತಿನಿಧಿಗಳೇ ಆಗಲಿ ಕಾನೂನು ಬಾಹಿರವಾಗಿ ಯಾವ ಕೆಲಸವೂ ನಡೆಯಬಾರದು. ಉದಾಹರಣೆಗೆ ಬೆಳಗಾಂ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಆಗಲಿ ತಾಲ್ಲೂಕು ಪಂಚಾಯತ್ ಆಗಲಿ ಅಥವಾ ಗ್ರಾಮಪಂಚಾತ್ ಆಗಲಿ ನಾವು ಮಹಾರಾಷ್ಟ್ರಕ್ಕೆ ಸೇರುತ್ತೇವೆಂದು ಏನಾದರೂ ಒಂದು ರೆಸಲ್ಯೂಷನ್ ಮಾಡಿದರೆ, ಆಗ ಖಂಡಿತವಾಗಿ ಅದನ್ನು ನಾವು ಸಸ್ಪೆಂಡ್ ಮಾಡುತ್ತೇವೆ.

ಡಾ|| ಶಂಕರನಾಯಕ್ : ಅದು ನಿಮ್ಮ ಆಕ್ಟ್‌ನಲ್ಲಿ ಇಲ್ಲ, ಎಲೆಕ್ಟೆಡ್ ಬಾಡಿ ಸುಪ್ರೀಂ ಎಂದು ಇದ್ದಾಗ ಅವರು ಏನೇ ನಿರ್ಣಯ ಮಾಡಿದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡತಕ್ಕಂಥ ಅಧಿಕಾರ ಅಲ್ಲಿರತಕ್ಕಂಥ ಅಧಿಕಾರಿಗೆ ಇರಬೇಕು. ಆದರೆ ನೀವು ಅಧಿಕಾರಿಗೆ ಏನು ಅಧಿಕಾರ ಕೊಟ್ಟಿದ್ದೀರಿ ಅದನ್ನು ಇಂಪ್ಲಿಮೆಂಟ್ ಮಾಡಿದರೂ ಮಾಡಬಹುದು ಬಿಟ್ಟರೂ ಬಿಡಬಹುದು. ಚುನಾಯಿತ ಪ್ರತಿನಿಧಿಗಳಿಗೆ ಆಗ ಏನು ಅಧಿಕಾರ ಬಂತು?

ಶ್ರೀ ಎಂ.ವೈ. ಘೋರ್ಪಡೆ : ಕಾನೂನು ಬಾಹಿರವಾಗಿ ಕೆಲಸ ಮಾಡುತ್ತಿದ್ದರೆ, ಅದನ್ನು ಅವರ ಗಮನಕ್ಕೆ ತರುವ ಜವಾಬ್ದಾರಿ ಕೂಡ ಅದರಲ್ಲಿದೆ. ಈಗ ಕ್ಯಾಬಿನೇಟ್ ಇದೆ. ಕ್ಯಾಬಿನೇಟ್‌ನಲ್ಲಿ ಕಾನೂನು ಬಾಹಿರವಾದ ಕೆಲಸ ಏನಾದರೂ ಮಾಡಲಿಕ್ಕೆ ಹೊರಟರೆ ಆಗ ಚೀಫ್ ಸೆಕ್ರೆಟರಿ ಇದು ಕಾನೂನು ಬಾಹಿರ ಎಂದು ಹೇಳುತ್ತಾರೆ. ಕಾನೂನು ಪ್ರಕಾರ ಮಾಡಬೇಕಾದರೆ ಈ ರೀತಿ ಮಾಡಬೇಕು ಎಂದು ಹೇಳಲೇಬೇಕಾಗುತ್ತದೆ.

SRI. J.H. PATIL : The Chief Secretary to Government cannot supervise what the Cabinet had already taken a decision. He cannot, Similarly, if a Chief Minister obviously commits a mistake, the Chief Secretary cannot take action on it. But, this House may. The Chief Secretary has no powers either

of supervision or control over the executive. That is the definition of the executive.

ನೀವು ಎಕ್ಸಿಕ್ಯೂಟೀವ್ ಹೆಡ್ ಎಂದು ಒಬ್ಬರನ್ನು ಮಾಡಿ, ಅವರ ಮೇಲೆ ಸೂಪರ್‌ವಿಷನ್ ಅಂಡ್ ಕಂಟ್ರೋಲ್ ಮಾಡುವುದು, ಮೇ ಎಂದು ಕೆಲವು ಕಡೆ ಹಾಕುವುದು ಕೆಲವು ಕಡೆ ಮೇ ಆರ್ ಮೇ ನಾಟ್ ಎಂದು ಹಾಕುವುದು ಸರಿಯೇ? ತಾವು ದಯವಿಟ್ಟು ಒಳ್ಳೆಯ ವಿಷಯವನ್ನು ಹೇಳಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಆಡಳಿತ ವಿಕೇಂದ್ರಿಕರಣ ಆಗಬೇಕು ಎನ್ನುವಂತಹ ತತ್ವವನ್ನು ತಾವು ಒಪ್ಪಿದ್ದೀರಿ. ಆಗಲೇ ತಾವು ಏನು ಹೇಳಿದಿರಿ ಭ್ರಷ್ಟಾಚಾರ ವಿಕೇಂದ್ರಿಕರಣ ಆಗಬಹುದು. ಈಗ ಕೇಂದ್ರೀಕೃತ ಭ್ರಷ್ಟಾಚಾರದಿಂದ ದೇಶದಲ್ಲಿ ಏನಾಗುತ್ತಿದೆ ರಾಜ್ಯದಲ್ಲಿ ಏನಾಗುತ್ತಿದೆ ಎಂದು ನೋಡುತ್ತಿದ್ದೇವಲ್ಲಾ, ಆದ್ದರಿಂದ ನಾನು ಹೇಳುವುದು ಭ್ರಷ್ಟಾಚಾರ ವಿಕೇಂದ್ರೀಕೃತ ಎನ್ನುವ ವಾದವನ್ನು ಕೇಂದ್ರೀಕೃತ ಭ್ರಷ್ಟಾಚಾರವನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ತಮ್ಮಂತಹವರು ಉಪಯೋಗಿಸಿಕೊಳ್ಳಬಾರದು. Brastachara by Chief Minsiter or Brastachara by Prime Minister should be controllable by people's representatives.

ಅದನ್ನಾದರೂ ಒಪ್ಪಿಕೊಳ್ಳುತ್ತೀರಾ? ಯಾರೋ ಒಬ್ಬ ಪಂಚಾಯಿತಿ ಚೇರ್‌ಮೆನ್ ಮೇಲೆ ನೀವು ಕಂಟ್ರೋಲ್ ಮಾಡುವುದಕ್ಕೆ ಹೋಗುತ್ತೀರಿ. ಪ್ರಜಾಪ್ರಭುತ್ವದಲ್ಲಿ ಯಾರು ಯಾರನ್ನು ಕಂಟ್ರೋಲ್ ಮಾಡಬೇಕೆಂದು ತಾವು ಇನ್ನೂ ಸ್ಪಷ್ಟವಾಗಿ ಹೇಳದೇ ಹೋದರೆ ಹೇಗೆ? ಭ್ರಷ್ಟಾಚಾರದ ಬಗ್ಗೆ ಒಬ್ಬ ಹಳ್ಳಿಯಲ್ಲಿರುವ ಛೇರ್‌ಮನ್ ಅನ್ನು ಟಾರ್‌ಗೇಟ್ ಆಗಿ ಇಟ್ಟುಕೊಳ್ಳುತ್ತೀರಿ. ನಿಮ್ಮ ಪ್ರಧಾನ ಮಂತ್ರಿಗಳು, ಚೀಫ್ ಮಿನಿಸ್ಟರ್ಸ್ ಕಣ್ಣಿಗೆ ಕಾಣದಿದ್ದರೆ ಏನು ಮಾಡಬೇಕು ಸ್ವಾಮಿ?

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಸಾರ್ವಭೌಮತ್ವ ಎನ್ನುವ ಪದವನ್ನು ಉಪಯೋಗಿಸಿದ್ದೀರಿ. ಪ್ರತಿನಿಧಿಗಳ ಸಾರ್ವಭೌಮತ್ವವನ್ನು ಮರಳಿ ವಾಪಸ್ಸ್ ಕೊಡಲಿಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತಿದ್ದೀರಿ. ಈಗ ಸಾರ್ವಭೌಮತ್ವವನ್ನು ಮರಳಿ ವಾಪಸ್ಸ್ ಕೊಡುವಂತಹ ಸಂದರ್ಭ ಉದ್ಭವಿಸುವುದೇ ಇಲ್ಲ. ಏಕೆಂದರೆ ಒಪ್ಪಿರುವ ಅಮೆಂಡ್‌ಮೆಂಟ್ಸ್ ಇರುವುದರಿಂದ, ಏನು ವಾದ ಇದೆ ಅಂದರೆ ಅಧಿಕಾರ ಸಾಕಷ್ಟು ಕೊಟ್ಟಿಲ್ಲ ಅಮೆಂಡ್‌ಮೆಂಟ್ಸ್‌ನಲ್ಲಿ ನಾವೆಲ್ಲಾ ಸರಿ ಮಾಡಿದ್ದೇವೆ ಆದಕಾರಣ ಪದೇ ಪದೇ ಈ ಸಾರ್ವಭೌಮತ್ವಕ್ಕೆ ಬದಲು ಅಧಿಕಾರ ಎನ್ನುವ ಶಬ್ದ ಉಪಯೋಗಿಸಿದ್ದಾರೆ. ಏಕೆಂದರೆ ಸಾರ್ವಭೌಮತ್ವ ಅಂದರೆ, Supremacy and Sovereignty ಇಲ್ಲಿ ಈ ಪದದ ದುರುಪಯೋಗ ಆಗಿದೆ. ಇದು ಅರ್ಥ ರಹಿತವಾದುದು ಎಂದು ನಾನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಜನತೆಯ ಪ್ರಭುತ್ವ ರಾಜ್ಯಾಂಗದಲ್ಲಿ ಸಂಪೂರ್ಣವಾಗಿದೆ. ಅಂದರೆ Indian Constitiution alone is Sovereign and Supreme. The Sovereign Republic of India ಎಂದು ಇದೆ. Yes. people Sovereignty is in the Constitution.

ಜವಾಹರಲಾಲ್ ನೆಹರು ಮತ್ತು ಅಂಬೇಡ್ಕರ್ ಇವರೆಲ್ಲರೂ ಸೇರಿ ಮಾಡಿರತಕ್ಕಂಥ ರಾಜ್ಯಾಂಗದಲ್ಲಿ ಪೀಪಲ್ಸ್ ಸಾವರಿನ್ ಅಂತಲೇ ಅಡಕವಾಗಿದೆ. ಬೇರೆ ಎಲ್ಲಾ ರಾಜ್ಯಗಳಲ್ಲಿ ರಾಜ್ಯದ ಅಧಿಕಾರವನ್ನು ವಿಕೇಂದ್ರಿಕರಣ ಮಾಡಿ ಈ ಸ್ಥಳೀಯ ಸಂಸ್ಥೆಗಳನ್ನು ನಾವು ಏನು ಸ್ಥಾಪನೆ ಮಾಡಿದ್ದೇವೆ ಅವರು ಅಷ್ಟೇ ರಾಜ್ಯಾಂಗದ ಸಾವರಿನ್ ಆಗುವುದಕ್ಕೆ ಸಾಧ್ಯವಿಲ್ಲ. ಅವರವರ ಅಧಿಕಾರದ ಇತಿಮಿತಿ ಏನು ಇದೆ ಅದರ ಪ್ರಕಾರ ಅವರು ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗಾಗಿ ನಮ್ಮ ಅಸೆಂಬ್ಲಿಯನ್ನೇ ತೆಗೆದುಕೊಳ್ಳಿ. ನಮ್ಮ ಅಸೆಂಬ್ಲಿ ಏನು ಇದೆ ನಾವು ಸಾರ್ವಭೌಮರು ಎಂದು ಹೇಳಿ ಮೂರರಲ್ಲಿ ಒಂದು ಭಾಗ ಹೆಣ್ಣು ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು ಎಂದು

ಹೇಳುವುದಕ್ಕೆ ಹಕ್ಕು ಇಲ್ಲ, ಏಕೆಂದರೆ ಆ ಅಧಿಕಾರಕ್ಕೆ ನಮ್ಮ ಕಡೆ ಇಲ್ಲ, ಆ ವಿಚಾರವನ್ನು ತಾವು ವ್ಯಕ್ತಪಡಿಸಬಹುದು ಒಳ್ಳೆಯ ವಿಚಾರ. ಆದರೆ ಅದನ್ನು ಕಾರ್ಯಗತ ಮಾಡಬೇಕಾದರೆ ಪೀಪಲ್ಸ್ ರೆಪ್ರಜಂಟೇಷನ್ಸ್ ಆಕ್ಟ್ ಏನು ಇದೆ ಅದರಲ್ಲಿ ಬದಲಾವಣೆ ಮಾಡಬೇಕಾಗುತ್ತದೆ. ಅದಕ್ಕೆ ನಾವು ನಮ್ಮ ರಾಜ್ಯಾಂಗದ ಕಡೆ ನೋಡಬೇಕಾಗುತ್ತದೆ. ಅದೇ ರೀತಿಯಲ್ಲಿ ಒಂದು ತಾಲ್ಲೂಕು ನಾವು ಮಹಾರಾಷ್ಟ್ರಕ್ಕೆ ಸೇರುತ್ತೇವೆಂದು ರೆಜಲೂಷನ್ ಮಾಡಿದರೆ, ತಕ್ಷಣ ಅಂತಹ ರೆಜಲೂಷನ್ ಅನ್ನು ಸಸ್ಪೆಂಡ್ ಮಾಡುವಂತಹ ಅಧಿಕಾರ ನಾವು ಇಟ್ಟುಕೊಳ್ಳಬೇಕಾಗುತ್ತದೆ. ಅವರು ಸಾರ್ವಭೌಮರು ಎಂದು ಅಧಿಕಾರ ಅಲ್ಲ, ಈ ರೀತಿ ಹಲವಾರು ಪ್ರಸಂಗಗಳು ಬರುತ್ತವೆ. ನಾನು ಏತಕ್ಕೆ ಹೇಳುತ್ತೇನೆಂದರೆ ಇದು ಟೆಕ್ನಿಕಲ್ ಮ್ಯಾಟರ್. ಸಾವರ್ನಿಟಿ ಏನು ಇದೆ ಇದು ರಿಪಬ್ಲಿಕ್, ರಾಜ್ಯಾಂಗದಲ್ಲಿದೆ ಅದರ ಅಡಿಯಲ್ಲಿ ಸ್ಥಾಪನೆಯಾಗಿರತಕ್ಕಂಥ ರಾಜ್ಯಗಳು ಮತ್ತು ರಾಜ್ಯದ ಅಧಿಕಾರದ ವಿಕೇಂದ್ರಿಕರಣದಿಂದ ಆಗಿರತಕ್ಕಂಥ ಸಂಸ್ಥೆಗಳು ಅದರ ಅಧಿಕಾರಕ್ಕೆ ಇತಿಮಿತಿ ಇದೆ. ಆ ಅಧಿಕಾರದ ಇತಿಮಿತಿ ಏನು ಎಂದು ನಾವು ಕಾನೂನಿನಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಆಫೀಸರ್ಸ್ ಆಗಲಿ, ಚುನಾಯಿತ ಪ್ರತಿನಿಧಿಗಳು ಆಗಲಿ ಆ ಇತಿಮಿತಿಯನ್ನು ಮೀರುವುದಕ್ಕೆ ಹಕ್ಕು ಇಲ್ಲ, ಹಾಗೆ ಅಂದ ತಕ್ಷಣ ಅವರ ಸಾರ್ವಭೌಮತ್ವವನ್ನು ನಾವು ಕಸಿದುಕೊಂಡಿದ್ದೇವೆ ವಾಪಸ್ಸ್ ತೆಗೆದುಕೊಂಡಿದ್ದೇವೆ ಅದಕ್ಕೆ ಮರಳಿ ವಾಪಸ್ಸ್ ಕೊಡಬೇಕು ಎನ್ನುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ, ಈಗ ತಾವು ಒಂದು ಮಾತನ್ನು ಹೇಳಿದ್ದೀರಿ. ಅದು ತಮ್ಮ ಪಕ್ಷದ ಧಾಟಿ ದಯವಿಟ್ಟು ಕ್ಷಮಿಸಬೇಕು.

ಹಳ್ಳಿಯ ಗ್ರಾಮಪಂಚಾಯಿತಿಯ ಅಧ್ಯಕ್ಷರು ಹಳ್ಳಿಗೆ ಚೀಫ್‌ಮಿನಿಸ್ಟರ್, ಜಿಲ್ಲಾ ಅಧ್ಯಕ್ಷರು ಆ ಜಿಲ್ಲೆಗೆ ಚೀಫ್ ಮಿನಿಸ್ಟರ್, ಹೀಗಾಗಿ ತಮ್ಮ ಮಂತ್ರಿಗಳು ಜಿಲ್ಲೆಗೆ ಹೋದರೆ ಅವರು ಮಂತ್ರಿಗಳನ್ನು ಕಾಣಲು ಬರುತ್ತಾ ಇರಲಿಲ್ಲ, ನಾವೇನು ಕಡಿಮೆ ಎಂಬ ಭಾವನೆ ಅವರದ್ದು. ಇದನ್ನು ನಾವುಗಳು ಸ್ಪಷ್ಟರಾಗಿ ಅರ್ಥ ಮಾಡಿಕೊಳ್ಳಬೇಕು. ಸಂವಿಧಾನದ ಪ್ರಕಾರ ಈ ದೇಶಕ್ಕೆ ಒಬ್ಬರೇ ಪ್ರಧಾನಮಂತ್ರಿ ಇರುವುದಕ್ಕೆ ಸಾಧ್ಯ. ಒಂದು ರಾಜ್ಯಕ್ಕೆ ಒಬ್ಬರೇ ಮುಖ್ಯಮಂತ್ರಿ ಇರುವುದಕ್ಕೆ ಸಾಧ್ಯ. ಎಲ್ಲಾ ಪಕ್ಷಗಳ ಅಧ್ಯಕ್ಷರುಗಳನ್ನು ನಾವು ಚೀಫ್‌ಮಿನಿಸ್ಟರ್ ಎಂದು ಕರೆಯಲಿಕ್ಕೆ ಹೊರಟರೆ, it is a disintegration of Indian administration. ಭಾರತೀಯ ಆಡಳಿತದ ವಿಚ್ಛಿದ್ರೀಕರಣ ಎಂದು ನಾನು ಹೇಳಬೇಕಾಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ಇದಕ್ಕೆ ಉತ್ತರವನ್ನು ಆಮೇಲೆ ಕೊಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಆಯಿತು, ಈ ರೀತಿಯಲ್ಲಿ ನಾವು ಹೋದರೆ ಆಗ ಭ್ರಷ್ಟಾಚಾರದ ವಿಕೇಂದ್ರಿಕರಣ ಕೂಡ ಆಗಲಿಕ್ಕೆ ಸಾಧ್ಯವಿದೆ. ನಾವು ಈ ಆಫೀಸರ್ಸ್‌ನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ಅವರು ಏನಾದರೂ ತಪ್ಪು ಮಾಡಿದರೆ ಅವರನ್ನು ಶಿಕ್ಷೆ ಮಾಡುವ ಅಧಿಕಾರವನ್ನು ನಾವು ಇಟ್ಟುಕೊಳ್ಳಬೇಕು. ಯಾವುದಾದರೂ ಒಂದು ಸ್ಕೀಮ್ ಕೊಟ್ಟಾಗ ಅದನ್ನು ಯಾವ ರೀತಿಯಲ್ಲಿ ಕಾರ್ಯಗತ ಮಾಡಬೇಕು, ಎಂಬುದು ಎಲೆಕ್ಟೆಡ್ ರೆಪ್ರಸೆಂಟೇಟಿವ್‌ಗೆ ಬಿಟ್ಟಿರತಕ್ಕಂಥಾದ್ದು. ಆದರೆ ಒಂದು ಸ್ಕೂಲ್ ಕಟ್ಟುವಾಗ ಸಿಮೆಂಟ್, ಸ್ಟೀಲ್ ಇತ್ಯಾದಿಗಳನ್ನು ಸರಿಯಾಗಿ ತಂದಿದ್ದಾನೋ ಇಲ್ಲವೋ ಎಂಬ ಒಂದು ವಿಚಾರದಲ್ಲಿ ಅಧಿಕಾರಸ್ಥರನ್ನು ನಾವು ಜವಾಬ್ದಾರಿ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಆ ಸ್ಟೀಲ್, ಸಿಮೆಂಟ್‌ಗೆ ನಾನು ಜವಾಬ್ದಾರನಲ್ಲ ಎಂದು ಅಧಿಕಾರಸ್ಥರು ಹೇಳುವುದಾದರೆ ಆವಾಗ ಭ್ರಷ್ಟಾಚಾರದ ವಿಕೇಂದ್ರೀಕರಣವಾಗುತ್ತದೆ.

I don't want to subject Panchayat Raj in Karnataka. I want to save it. I don't want it to be abused.

ತಮಗೆ ಸಾಕಷ್ಟು ಅನುಭವ ಇದೆ. ಈ ಇನ್‌ಸ್ಪೆಕ್ಷನ್ ಹೈರಾರ್ಕಿ ಏನಿದೆಯಲ್ಲಾ, ಇದು ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನಲ್ಲಿಯೂ ಇದೆ, ಆ ಹೈರಾರ್ಕಿ ಕೆಲಸ ಮಾಡಬೇಕೇ ಬೇಡವೇ? ಕೆಳಮಟ್ಟದಲ್ಲಿರತಕ್ಕಂಥ ಆಫೀಸರ್ಸ್ ಸರಿಯಾಗಿ ಕೆಲಸ ಮಾಡಿದ್ದಾರೋ ಇಲ್ಲವೋ ಎಂಬುದನ್ನು ಸರಿಯಾಗಿ ನೋಡಲಿಕ್ಕೆ ಮೇಲ್ಪಟ್ಟದಲ್ಲಿರತಕ್ಕಂಥ ಆಫೀಸರ್ಸ್‌ಗೆ ಅವಕಾಶ ಇರಬೇಕೋ ಬೇಡವೋ? ಆ ರೀತಿಯಲ್ಲಿ ಇನ್ಸ್‌ಪೆಕ್ಷನ್ಸ್ ಪವರ್ಸ್ ನಾವು ಕೊಟ್ಟಿದ್ದರೆ, ಅದು ಎಲೆಕ್ಟೆಡ್ ಬಾಡೀಸ್‌ಗೆ ಯಾವುದೇ ವಂಚನೆ ಮಾಡುವ ದೃಷ್ಟಿಯಿಂದ ಅಲ್ಲ, ಇಲೆಕ್ಟೆಡ್ ಬಾಡೀಸ್‌ಗೆ ಸಾಕಷ್ಟು ಕಾನೂನಿನ ರಕ್ಷಣೆಯನ್ನು ಕೊಡುವ ದೃಷ್ಟಿಯಿಂದ ಮಾಡಿದ್ದೇವೆ. ಈಗ ರಾಜಕೀಯವಾಗಿ ನಾನೊಂದು ಅನುಭವದ ಮಾತನ್ನು ಹೇಳುತ್ತೇನೆ. 1983ರಲ್ಲಿ ತಮ್ಮ ಪಕ್ಷ ಬಹಳ ದೊಡ್ಡ ಪ್ರಮಾಣದ ಸೋಲನ್ನು ಅನುಭವಿಸಬೇಕಾಯಿತು. ಆ ಸಮಯದಲ್ಲಿ ಭ್ರಷ್ಟಾಚಾರದ ಪ್ರಮಾಣವನ್ನು ತಮಗೆ ತಡೆಗಟ್ಟುವುದಕ್ಕೆ ಆಗಲಿಲ್ಲವೆಂದು ಹೇಳಿ ಆ ಸೋಲನ್ನು ತಾವುಗಳು ಒಪ್ಪಿಕೊಳ್ಳಬೇಕಾಯಿತು. ಅದಕ್ಕೆ ನಾನು ತಮ್ಮ ಪಕ್ಷಕ್ಕೆ ಇನ್ನೊಮ್ಮೆ ಅಪಾಯ ಆಗಬಾರದು ಎನ್ನುವ ದೃಷ್ಟಿಯಿಂದ ನಿಷ್ಪಕ್ಷಪಾತವಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಸದಸ್ಯರು ಸ್ವಲ್ಪ ಫಿಗರ್ಸ್ ತರಿಸಿ ನೋಡಲಿ. ಹಿಂದೆ ಕಾಂಗ್ರೆಸ್‌ಗೆ ಎಷ್ಟು ಓಟ್ಸ್ ಬಂದಿವೆ, ಜನತಾದಳದ ಎರಡು ಭಾಗಗಳಿಗೆ ಎಷ್ಟು ಓಟ್ಸ್ ಬಂದಿವೆ ಎಂಬುದನ್ನು ನೋಡಬೇಕು. ನಾವು ನಮ್ಮಲ್ಲಿ ಎರಡು ಭಾಗದ ಓಟುಗಳನ್ನು ಹಂಚಿಕೊಂಡು ಸೋತಿದ್ದೇವೆ. ನೀವು ನಮ್ಮನ್ನು ಸೋಲಿಸಿಲ್ಲ.

ಡಾ|| ಶಂಕರ್ ನಾಯಕ್ : ಅಧ್ಯಕ್ಷರೇ, ನಿಜವಾಗಿ ಅಧಿಕಾರ ವಿಕೇಂದ್ರೀಕರಣ ಮಾಡುವುದರಿಂದ ಮಂಡಲ್ ಪಂಚಾಯತ್ ಲೆವೆಲ್ ನಿಂದ ಅವರಿಗೇನದಾರೂ ಅಧಿಕಾರ ಕೊಟ್ಟು ಅಲ್ಲಿ ಮುಖ್ಯಮಂತ್ರಿಯಾದರೆ ಅಥವಾ ಜಿಲ್ಲಾಪರಿಷತ್‌ನಲ್ಲಿ ಮುಖ್ಯಮಂತ್ರಿಗೆ ಇರತಕ್ಕಂಥ ಅಧಿಕಾರವನ್ನು ಕೊಟ್ಟರೆ ನೀವು ನಿಜವಾಗಿಯೂ ಅಧಿಕಾರ ವಿಕೇಂದ್ರೀಕರಣ ಮಾಡಿದ ಹಾಗೆ ಆಗುತ್ತದೆ. ಆದರೆ ನಮ್ಮ ಹಿಂದಿನ ಗ್ರಾಮೀಣಾಭಿವೃದ್ಧಿ ಸಚಿವರ ಸ್ಟೇಟ್‌ಮೆಂಟನ್ನು ನಾನು ಹಿಂದೆ ಓದಿದ್ದೇನೆ, ಅದರ ಪ್ರಕಾರ ಅವರು ಹೇಳುವ ಧಾಟಿಯನ್ನು ನೋಡಿದರೆ, ಇಲ್ಲಿ ಚುನಾಯಿತ ಪ್ರತಿನಿಧಿಗಳೆಲ್ಲರೂ ಭ್ರಷ್ಟರು, ಅಲ್ಲಿ ಕೆಲಸಮಾಡತಕ್ಕಂಥ ಅಧಿಕಾರಿಗಳೆಲ್ಲರೂ ಒಳ್ಳೆಯವರು ಎಂದಾಗುತ್ತದೆ. ಈ ಎರಡು ವರ್ಷಗಳಲ್ಲಿ ಏನಾಗಿದೆ ಅಂದರೆ, ಈ ಮಂಡಲ್ ಪಂಚಾಯತ್ ಸೆಕ್ರೆಟರಿಗೆ ಬರತಕ್ಕಂಥ ಕೆಲಸಗಳಿಂದಾಗಿ ಆತನು ಮಾರುತಿಕಾರ್‌ನಲ್ಲಿ ಬರುವ ಹಾಗೆ ಆಗಿದೆ. ಆತನ ಭ್ರಷ್ಟಾಚಾರದ ಕೇವಲ ಮಂಡಲ್ ಪಂಚಾಯತ್ ಅಥವಾ ಜಿಲ್ಲಾ ಪಂಚಾಯತ್‌ಗೆ ಮಾತ್ರ ಸೀಮಿತವಾಗಿಲ್ಲ, ಅದು ವಿಧಾನಸೌಧದ ಮೂರನೇ ಮಹಡಿಗೂ ಹೋಗಿರುವುದನ್ನು ಅವರು ಮರೆತು ಬಿಟ್ಟಿದ್ದಾರೆಂದು ಕಾಣುತ್ತದೆ. ಯಾವುದೇ ಒಬ್ಬ ಚುನಾಯಿತ ಪ್ರತಿನಿಧಿಗೆ ಕಡಿವಾಣ ಹಾಕಬೇಕೆಂದರೆ ಐದು ವರ್ಷ ಆದನಂತರ ಅದಕ್ಕೊಂದು ಅರ್ಥ ಬರುತ್ತದೆ ಹೊರತು, ಅವನು ಸರಿಯಾಗಿ ಕೆಲಸ ಮಾಡಿದರೆ ಎಲೆಕ್ಟ್ ಆಗಿ ಬರುತ್ತಾನೆ, ಇಲ್ಲವಾದರೆ ಇಲ್ಲ, ಅದಕ್ಕೆ ನಾನೊಂದು ಉದಾಹರಣೆಯನ್ನು ಕೊಡಬಯಸುತ್ತೇನೆ.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೀರಿ. Please sit down. Let's allow him to continue.

ಶ್ರೀ ಎಂ.ವೈ. ಘೋರ್ಪಡೆ : ಪದೇ ಪದೇ ನಾನು ಅದೇ ಅಭಿಪ್ರಾಯವನ್ನು ವ್ಯಕ್ತಮಾಡಲು ಇಚ್ಛೆಪಡುವುದಿಲ್ಲ. ಈಗ ಸುಪ್ರೀಂ ಕೋರ್ಟ್‌ನ ಬಗ್ಗೆ ನಾನು ಹೇಳಬೇಕಾಗುತ್ತದೆ. ನಾವು ಜನವರಿಯಲ್ಲಿ ಚುನಾವಣೆ ಮಾಡುತ್ತೇವೆಂದು ಹೇಳಿದ್ದೇವೆ, ಹೀಗೆ ಕರ್ನಾಟಕ ಸರಕಾರವು ಮಾತು ಕೊಟ್ಟಿದ್ದಷ್ಟೇ ಅಲ್ಲ, ಅವರ ಆದೇಶದ

ಪ್ರಕಾರ ಮಾಡಬೇಕಾಗುತ್ತದೆ. ಈಗ ಸರಕಾರ ಬದಲಾವಣೆ ಆದಮಾತ್ರಕ್ಕೆ ಕೋರ್ಟ್‌ನ ಆದೇಶವು ಹೊರಟು ಹೋಗುವುದಿಲ್ಲ. ಅದು ಇದ್ದೇ ಇರುತ್ತದೆ. ಸುಪ್ರೀಂ ಕೋರ್ಟ್‌ನವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಜನವರಿಯಲ್ಲಿ ಚುನಾವಣೆಯನ್ನು ಮಾಡಬೇಕು ಮತ್ತು ಫೆಬ್ರವರಿ ತಿಂಗಳಲ್ಲಿ ಈ ಕಂಟೆಂಪ್ಟ್ ಕೇಸ್ ಇದೆಯಲ್ಲಾ ಅದರ ಬಗ್ಗೆ ನಾವು ಗಮನಹರಿಸಬೇಕಾಗುತ್ತದೆ ಎಂದು ಹೇಳಿದ್ದಾರೆ.

ಅದರ ಬಗ್ಗೆ ನಾನು ಸ್ವಲ್ಪ ಪ್ರಸ್ತಾಪ ಮಾಡಿದ ತಕ್ಷಣವೇ ತಮ್ಮ ಮಂತ್ರಿಗಳು ನಾವು ಏಪ್ರಿಲ್ ನಲ್ಲೇ ಮಾಡಬೇಕೆಂದು ಹೇಳಿದರು. ಮಾರ್ಚಿನಲ್ಲಿ ಮಾಡುತ್ತೇವೆಂದು ಇನ್ನೊಬ್ಬರು ಹೇಳಿದರು. ಇದು ನಿಮ್ಮ ಸ್ವಂತದ ಪ್ರಶ್ನೆ ಅಲ್ಲ, ಇದೇನೆಂದರೆ ಸ್ಟೇಟ್ ಎಲೆಕ್ಷನ್ ಕಮೀಷನ್ ಏನಿದೆ ಅದಕ್ಕೆ ಸಂಪೂರ್ಣ ನಿರ್ಲಕ್ಷ್ಯ ಮಾಡುತ್ತಿದ್ದೀರಿ. ಇವತ್ತು ಕೇಂದ್ರಕ್ಕೆ ಶೇಷನ್ ಯಾವರೀತಿ ಇದ್ದಾರೆ ಅದೇ ರೀತಿ ನಮ್ಮ ರಾಜ್ಯ ಆಯೋಗವನ್ನು ನೇಮಕ ಮಾಡಿದ್ದು 73ನೇ ತಿದ್ದುಪಡಿಯನ್ವಯ ಇದನ್ನು ಯಾಕೆ ಮಾಡಿದ್ದು ಎಂದರೆ 10 ವರ್ಷಗಳ ಕಾಲ ರಾಜ್ಯಗಳು ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಿರಲಿಲ್ಲ. ಅದಕ್ಕಾಗಿ ಈ ಪ್ರತ್ಯೇಕವಾದ ಸ್ಟೇಟ್ ಎಲೆಕ್ಷನ್ ಕಮೀಷನ್‌ಗೆ ಅಧಿಕಾರ 73ನೇ ತಿದ್ದುಪಡಿಯನುಸಾರವಾಗಿ ಮತ್ತೆ ಅದನ್ನೇ ನಾವುಗಳು ಕಾನೂನಿನಲ್ಲಿ ಸೇರಿಸಿಕೊಳ್ಳಬೇಕಾಯಿತು. ಇವತ್ತು ನ್ಯಾಯವಾಗಿ ನೋಡಿದರೆ, ತಾವು ಸ್ಪಷ್ಟವಾಗಿ ಇಂತಹ ದಿನ ನಾವು ಚುನಾವಣೆ ನಡೆಸುತ್ತೇವೆ ಎಂದು ಹೇಳಬೇಕಾಗುತ್ತದೆ. ಇಂತಹ ದಿನ ಕರ್ನಾಟಕದಲ್ಲಿ ಚುನಾವಣೆಗಳು ನಡೆಯಬೇಕು ಎಂದು ಶೇಷನ್ ಹೇಳಿದರು. ಯಾರಾದರೂ ವಿರೋಧ ಮಾಡಲಿಕ್ಕೆ ಆಯಿತಾ? ವಿರೋಧ ಮಾಡುವ ಮನಸ್ಸು ಶಕ್ತಿ ಆಧರೂ ಇತ್ತೇ? ಅದೇ ರೀತಿ ಇವತ್ತು ಸ್ಟೇಟ್ ಎಲೆಕ್ಷನ್ ಕಮೀಷನರ್‌ಗೆ ಈ ವಿಷಯದಲ್ಲಿ ಅಷ್ಟೇ ಅಧಿಕಾರ ಇದೆ.

ಅವರು ಒಂದು ತಾರೀಖನ್ನು ನಿಗದಿ ಮಾಡಿದ ಮೇಲೆ ಸಂಪೂರ್ಣವಾದಂಥ ಸಹಕಾರ ರಾಜ್ಯಸರ್ಕಾರ ಕೊಡಬೇಕಾಗುತ್ತದೆ. ಕೊಡದೇ ಇದ್ದರೆ ಸಂವಿಧಾನ ಉಲ್ಲಂಘನೆ ಆಗುತ್ತದೆ. ಅದರ ಬಗ್ಗೆ ತಾವು ತೀವ್ರವಾಗಿ ಗಮನಕೊಡಬೇಕು. ಮತ್ತೆ ಸುಪ್ರೀಂ ಕೋರ್ಟಿಗೆ ಎಲೆಕ್ಷನ್ ಕಮೀಷನ್ ಮೂಲಕವಾಗಿ ಇಂತಹ ದಿನ ನಾವು ಚುನಾವಣೆ ಮಾಡುತ್ತೇವೆಂದು ರಾಜ್ಯ ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಇಲ್ಲದೇ ಹೋದರೆ ನಿಮ್ಮ ಸರ್ಕಾರಕ್ಕೆ ಮತ್ತೆ ಕರ್ನಾಟಕಕ್ಕೆ ಮುಖಭಂಗವಾಗುವಂತಹ ಒಂದು ಪ್ರಸಂಗ ಉದ್ಭವಿಸುತ್ತದೆ. ಆ ರೀತಿ ಆಗಬಾರದೆಂದು ನಾನು ಹೇಳುತ್ತಿದ್ದೇನೆ. ಈಗ ತಮ್ಮ ಪಕ್ಷದ ವತಿಯಿಂದ ಕೆ.ಆರ್.ಪೇಟೆಯಿಂದ ಆರಿಸಿ ಬಂದಿರುವ ಕೃಷ್ಣರವರು ಭಾಷಣ ಮಾಡಿದಾಗ ಒಂದು ಮಾತು ಹೇಳಿದರು. ಪಕ್ಷಾತೀತವಾಗಿ ಈ ಚುನಾವಣೆಗಳನ್ನು ಮಾಡಿಬಿಡಿ, ನಿಮಗೇ ಹೇಳಿದ್ದುದು, ನಾನು ಕೇಳುತ್ತಿದ್ದೆ ಆ ಮಾತು. ಅದಕ್ಕೆ ಉತ್ತರವಾಗಿ ನಾನು ಹೇಳುವುದಿಷ್ಟೆ. ನಾವು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಪಕ್ಷಾತೀತವಾಗಿಯೇ ಮಾಡಿದ್ದೇವೆ. ಅದಕ್ಕೋಸ್ಕರ 80 ಸಾವಿರ ಪ್ರತಿನಿಧಿಗಳನ್ನು ಶಾಂತಿಯುತವಾಗಿ ನಮ್ಮ ಜನ ಆರಿಸಿದ್ದಾರೆ. ಬೇರೆ ಬೇರೆ ಪಕ್ಷಗಳು ಅಲ್ಲಿ ಘರ್ಷಣೆ ಇಡಲಿಕ್ಕೆ, ನಾವು ರಾಜಕೀಯ ಪರಿಸ್ಥಿತಿ ಮಾಡಿದರೆ ಆಗ ಹಳ್ಳಿಗಳಿಗೆ ಬಹಳ ಅಪಾಯ ಆಗುತ್ತಿತ್ತು ಎಂದು ಎಲ್ಲರಿಗೂ ಗೊತ್ತಿರುವಂತ ವಿಚಾರ. ಇವತ್ತು ಆ ಮಾತನ್ನು ನೀವು ಒಪ್ಪುವುದಾದರೆ ವೈಯಕ್ತಿಕವಾಗಿ ನಾನು ಒಪ್ಪಲಿಕ್ಕೆ ಸಿದ್ಧನಾಗಿದ್ದೇನೆ. ಯಾಕೆಂದರೆ ಪಕ್ಷಗಳ ರಾಜಕೀಯಕ್ಕೆ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಯಾವ ಅವಕಾಶ ಇಲ್ಲ, ಏಕೆಂದರೆ..

ಶ್ರೀ ಎ. ರುಕ್ಮಯ್ಯ ಪೂಜಾರಿ : ಪಕ್ಷಗಳ ನೆಲೆಯಲ್ಲಿ ಚುನಾವಣೆ ಮಾಡಲಿಲ್ಲ ಎಂದಿದ್ದಾರೆ. ಆದರೆ ಚುನಾವಣೆಗಳಲ್ಲಿ ಗೆದ್ದ ನಂತರ ಎಲ್ಲಾ ರಾಜಕೀಯ ಪಾರ್ಟಿಗಳು

ಹೇಳಿವೆ ನಮ್ಮ ಪಕ್ಷದಿಂದ ಇಷ್ಟು ಜನ ಅಭ್ಯರ್ಥಿಗಳು ಗೆದ್ದು ಬಂದಿದ್ದಾರೆ ಎಂದು. ಆದ್ದರಿಂದ ಪಕ್ಷಾತೀತ ನೆಲೆ ಎಂದು ಹೇಗೆ ಹೇಳಿದರು.

ಅಧ್ಯಕ್ಷರು : ಕಡಿಮೆ ಬಂದವರು ಹೇಳಲಿಲ್ಲ, ಜಾಸ್ತಿ ಬಂದವರು ಹೇಳಿಕೊಂಡರು.

ಶ್ರೀ ಎಂ.ವೈ. ಘೋರ್ಪಡೆ : ಪಕ್ಷಾತೀತವಾಗಿ ನಡೆಸಿದರೆ ಏನಾಗುತ್ತದೆ ಜನಕ್ಕೆ ಯಾರುಬೇಕೋ ಅವರನ್ನು ಆರಿಸುವುದಕ್ಕೆ ಸ್ವಲ್ಪ ಸ್ವಾತಂತ್ರ್ಯ ಹೆಚ್ಚಾಗುತ್ತದೆ. ನಾವು ಅಲ್ಲಿ ಹೋಗಿ ರಾಜಕೀಯವಾಗಿ ಗುಂಪು ಕಟ್ಟಿ ಪಾರ್ಟಿಗಳನ್ನು ಮಾಡಿದರೆ ಪ್ರಚೋದನೆಯಾಗುತ್ತದೆ. ಮತ್ತೆ ಹಿಂದೆ ಕೂಡ ಆಗುತ್ತದೆ. ಪಕ್ಷದ ಘರ್ಷಣೆ ಆಗುತ್ತದೆ. ಸಾಮರಸ್ಯ ಕೆಟ್ಟು ಹೋಗುತ್ತದೆ.

ಶ್ರೀ ಜೆ.ಹೆಚ್. ಪಟೇಲ್ : ನಾವು ಮಂಡಲ್ ಎಲೆಕ್ಷನ್ ಮಾಡಿದ್ದೇವೆ. ಆಮೇಲೆ ಜಿಲ್ಲಾಪರಿಷತ್ ಎಲೆಕ್ಷನ್ ಮಾಡಿದ್ದೇವೆ, ಆಗ ಏಕೆ ಆಗಲಿಲ್ಲ?

ಶ್ರೀ ಆರ್.ಎಲ್. ಜಾಲಪ್ಪ : ನಮ್ಮ ಪಕ್ಷದ ಕಾರ್ಯಕರ್ತರು ನಮ್ಮ ಮುಖಂಡರ ಫೋಟೋ ಹಾಕಿಕೊಂಡರು, ನಿಮ್ಮ ಪಕ್ಷದವರು ನಿಮ್ಮ ಮುಖಂಡರ ಫೋಟೋ ಹಾಕಿಕೊಂಡು ಬಿಜೆಪಿಯವರು ಅವರ ಪಕ್ಷದವರ ಫೋಟೋಗಳನ್ನು ಹಾಕಿಕೊಂಡರು. ನಾವು ಜನತಾದಳದವರು, ನಾವು ಕಾಂಗ್ರೆಸ್‌ನವರು ಎಂದು ಹೇಳಿಕೊಂಡೇ ಅವರು ಓಟು ಕೇಳಿದ್ದುದು ಅಲ್ಲಿ.

ಶ್ರೀ ಎಂ.ವೈ. ಘೋರ್ಪಡೆ : ತಮ್ಮ ಮುಖಾಂತರ ಮುಖ್ಯಮಂತ್ರಿಗಳಿಗೆ ಇಷ್ಟೇ ಹೇಳುತ್ತೇನೆ. ನಮ್ಮ ಪಕ್ಷದ ವತಿಯಿಂದ ಆ ಮಾತು ಬಂದಿರುವುದರಿಂದ ವೈಯಕ್ತಿಕವಾಗಿ ನಾನು ಸ್ವಾಗತ ಮಾಡುತ್ತೇನೆ. ಇಲ್ಲಿರತಕ್ಕಂತಹ ಎಲ್ಲಾ ಪಕ್ಷಗಳೂ ಅದನ್ನು ಒಪ್ಪುವುದಾದರೆ ನನ್ನದೇನೂ ಆಕ್ಷೇಪಣೆ ಇಲ್ಲ.

ಅಧ್ಯಕ್ಷರು : ನಿಮ್ಮ ಪಾರ್ಟಿಯಲ್ಲಿ ನಿಮ್ಮ ಮಾತು ಕೇಳುವುದಿಲ್ಲ, ಅವರ ಪಕ್ಷದಲ್ಲಿ ಅವರ ಮಾತು ಕೇಳುವುದಿಲ್ಲ.

ಶ್ರೀ ಎಂ.ವೈ. ಘೋರ್ಪಡೆ : ಈ ಚುನಾವಣೆಯಲ್ಲಿ ಸೆಂಟ್ರಲ್ ಎಲೆಕ್ಷನ್ ಕಮೀಷನರ್ ಶೇಷನ್ ಅವರು ನಮ್ಮ ಕಾನೂನನ್ನು ಕಾರ್ಯಗತವನ್ನು ಕಟ್ಟುನಿಟ್ಟಾಗಿ ಮಾಡುವಂತಹ ಇಚ್ಛಾಶಕ್ತಿಯನ್ನು ತೋರಿಸಿಧರು. ಆ ಕಾನೂನು ಇಲ್ಲದೇ ಹೋದರೆ ಜಾಸ್ತಿ ಮರ್ಡರ್‌ಗಳಾಗುತ್ತಿತ್ತು. ಈ ಸಂದರ್ಭದಲ್ಲಿ ನಾನು ನನ್ನ ಅನುಭವದಿಂದ ಒಂದು ಮಾತನ್ನು ಹೇಳಲು ಇಚ್ಛಿಸುತ್ತೇನೆ. 6ನೇ ಸಲ ನಾನು ಇಲ್ಲಿ ಆರಿಸಿ ಬರುತ್ತಿದ್ದೇನೆ. ಇವತ್ತು ಅರ್ರ್‍ಯಾಕ್ ಏನು ಇದೆ ಮತ್ತು ಕಪ್ಪು ಹಣ ಜಾತೀಯತೆ ಏನು ಇದೆ ಇದನ್ನು ಶೇಷನ್ ಕೂಡ ಸಂಪೂರ್ಣವಾಗಿ ತಡೆಗಟ್ಟಲಿಕ್ಕಾಗಲಿಲ್ಲ, ಈ ಅರ್ರ್‍ಯಾಕ್ ಬಗ್ಗೆ ನಾವು ಗಂಭೀರವಾದ ಚಿಂತನೆ ಮಾಡಬೇಕು, ನನಗೆ ತಿಳಿದ ಮಟ್ಟಿಗೆ ಅರ್ರ್‍ಯಾಕ್ ಮತ್ತು ಕಪ್ಪು ಹಣ ಇದಕ್ಕೆ ಆಳವಾದ ಸಂಬಂಧವಿದೆ. ಇದನ್ನು ಎಲ್ಲಿಯವರೆಗೆ ನಾವು ತೆಗೆದುಹಾಕುವುದಿಲ್ಲ, ಅಲ್ಲಿಯವರೆಗೆ ಬರೀ ಭ್ರಷ್ಟಾಚಾರದ ಭಾಷಣ ಆಗುತ್ತದೆಯೇ ಹೊರತು ಇದನ್ನು ಕಾರ್ಯಗತ ಮಾಡಲಿಕ್ಕೆ ಆಗುವುದಿಲ್ಲ, ಹಳ್ಳಿಯಲ್ಲಿ ಹೆಣ್ಣುಮಕ್ಕಳು ಅರ್ರ್‍ಯಾಕನ್ನು ನಿಲ್ಲಿಸಬೇಕೆಂದು ಹೋರಾಟ ಮಾಡುತ್ತಿದ್ದಾರೆ. ನನ್ನ ಕ್ಷೇತ್ರದಲ್ಲಿನ ಚಿಕ್ಕಹಳ್ಳಿ ಒಡ್ಡು ಬಸಾಪುರ ಎಂದು ಇದೆ ಅಲ್ಲಿ ಹೆಣ್ಣುಮಕ್ಕಳೆಲ್ಲಾ ಒಂದಾಗಿ ಅರ್ರ್‍ಯಾಕ್ ಮಾರಾಟವನ್ನು ನಿಲ್ಲಿಸಿದ್ದಾರೆ. ನಾನು ಅಧಿವೇಶನಕ್ಕೆ ಬರುವುದಕ್ಕೆ ಮುಂಚೆ ಸಂಡೂರಿನ ಟೌನ್ ಮುನಿಸಿಪಲ್‌ನ ಕೆಲಸಗಾರರಾದ ಸ್ವೀಪರ್ಸ್ ಹೆಣ್ಣುಮಕ್ಕಳೆಲ್ಲಾ ಬಂದು ನಮಗೆ ರಕ್ಷಣೆ ಕೊಡಬೇಕೆಂದು ಹೇಳಿದರು. ನಮ್ಮ ಗಂಡಸರು ನಾವು ದುಡಿದಿರತಕ್ಕಂತಹ ಹಣವನ್ನು ಒತ್ತಾಯದಿಂದ ತೆಗೆದುಕೊಂಡು ಹೋಗುತ್ತಿದ್ದಾರೆ ನಾವು ಮನೆಯಲ್ಲಿ

ಜೀವನ ಮಾಡುವುದು ಅಸಾಧ್ಯವಾಗುತ್ತಿದೆ ಎಂದು ಹೇಳಿದರು. ಪಾವರ್ಟಿ ಎಲಿಮಿನೇಷನ್ ಬಗ್ಗೆ ಎಲ್ಲರೂ ಭಾಷಣ ಮಾಡುತ್ತೇವೆ.

ಈ ಅರ್‍ಯಾಕ್ ನಿಲ್ಲಿಸುವವರೆಗೆ ಈ ಪಾವರ್ಟಿ ಎಲಿಮಿನೇಷನ್ ಮಾತಿಗೆ ಅಷ್ಟೊಂದು ಅರ್ಥವಿರುವುದಿಲ್ಲವೆಂದು ನನಗನ್ನಿಸುತ್ತದೆ. ಹಣಕಾಸಿನ ಸಚಿವರು ಇಲ್ಲಿ ಇಲ್ಲ, ಇದ್ದಿದ್ದರೆ ಅವರಿಗೆ ಹೇಳುತ್ತಿದ್ದೆ. ಇನ್‌ಕಂ ಆರ್ಗ್ಯುಮೆಂಟ್ ಅನ್ನು ಹಲವಾರು ವರ್ಷಗಳಿಂದ ಉಪಯೋಗಿಸುತ್ತಾ ಬಂದಿದ್ದೇವೆ. ಸರಕಾರದ ಆದಾಯ ಹೊರಟು ಹೋದರೆ ಹೇಗೆ ಎಂದು ಕೇಳಬಹುದು. ಈ ಕಪ್ಪು ಆದಾಯ ತೆಗೆದುಕೊಂಡು ಬಡಜನರ ಸಂಸಾರವನ್ನು ನಾಶ ಮಾಡಿ ಅವರ ಆರೋಗ್ಯವನ್ನು ನಾಶ ಮಾಡಿ ಅದಕ್ಕೆ ಎರಡರಷ್ಟು ಹಣವನ್ನು ಅವರ ಆರೋಗ್ಯ ಸರಿ ಮಾಡಲಿಕ್ಕೆ ಖರ್ಚು ಮಾಡಬೇಕಾಗುತ್ತದೆ. ಅಂದ ಮೇಲೆ ಮೂಲಭೂತವಾಗಿ ಅಂತಹ ಆದಾಯ ನಮ್ಮ ಸರಕಾರಕ್ಕೆ ಬೇಡವೆಂದು ಹೇಳಿದರೆ ಕರ್ನಾಟಕ ರಾಜ್ಯ ಮುಳುಗಿ ಹೋಗುವುದಿಲ್ಲ, ನಾನು ಮಂತ್ರಿಯಾಗಿ 6ವರ್ಷದ ಅನುಭವವಿದೆ. ಎಲ್ಲಾ ಕಾಮಗಾರಿಗಳು ಸ್ಥಗಿತವಾಗುತ್ತದೆ. ನಾವೇನು ಕೆಲಸ ಮಾಡಲಿಕ್ಕಾಗುವುದಿಲ್ಲವೆಂದು ಹೇಳಿದರೆ ಅದನ್ನು ನಾನು ಒಪ್ಪಲಿಕ್ಕಾಗುವುದಿಲ್ಲ. ನಾನು ಅರ್‍ಯಾಕ್ ಮಾತ್ರ ಹೇಳುತ್ತಿದ್ದೇನೆ ಹಿಂದೆ ಪ್ರೊಹಿಬಿಷನ್ ಮಾಡಿದಾಗ ಆ ಪ್ರೊಹಿಬಿಷನ್ ಯಶಸ್ವಿಯಾಗುವುದಿಲ್ಲವೆಂದು ಎಲ್ಲಾ ಕಡೆ ದೇಶದಲ್ಲಿ ಪ್ರಚಾರ ನಡೆಯಿತು. 20 ವರ್ಷಗಳ ಹಿಂದೆ ಏನು ಪರಿಸ್ಥಿತಿ ಇತ್ತು ಅದಕ್ಕೆ ಅಜಗಜಾಂತರ ವ್ಯತ್ಯಾಸ ಇದೆ. ಇವತ್ತು ವಿಮೆನ್ಸ್ ಅವೇರ್‌ನೆಸ್ ಅಂಡ್ ಪವರ್, ಹೆಣ್ಣುಮಕ್ಕಳು ತಿಳುವಳಿಕೆ ಮತ್ತು ಅಧಿಕಾರವೇನು ಇದೆ ಇದನ್ನು ವ್ಯಕ್ತ ಮಾಡುತ್ತಿದ್ದಾರೆ. ಆಂಧ್ರದಲ್ಲಿ ಅವರಾಗಲೀ ಮಾಡಿಬಿಟ್ಟಿದ್ದಾರೆ. ಕರ್ನಾಟಕದ ಹೆಣ್ಣುಮಕ್ಕಳೇನೂ ಕಡಿಮೆ ಇಲ್ಲ, ಅವರೂ ಅದೇ ಮಾತನ್ನು ಹೇಳುತ್ತಿದ್ದಾರೆ. ಅದಕ್ಕೆ ಸ್ಪಂದಿಸಬೇಕು, ಇದನ್ನು ನಿರ್ಲಕ್ಷ್ಯ ಮಾಡಬಾರದು ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಮ್ಮ ಕಾಂಗ್ರೆಸ್ ಮ್ಯಾನಿಫೆಸ್ಟೋದಲ್ಲಿ ಈ ಮಾತನ್ನು ಹೇಳಿದ್ದೇವೆ. ಜೂನ್ ತಿಂಗಳಲ್ಲಿ ಹೊಸ ಅರ್‍ಯಾಕ್ ಕಂಟ್ರಾಕ್ಟ್ ಮಾಡುತ್ತೀರಿ ಅದನ್ನು ಮಾಡಬಾರದು ನಿಲ್ಲಿಸಬೇಕು. Arrack sale in Karnataka must be stopped by June. ಇದನ್ನು ಮಾಡಿದರೆ ಕರ್ನಾಟಕದ ಹೆಣ್ಣುಮಕ್ಕಳಷ್ಟೇ ಅಲ್ಲ ಬೇರೆ ಬಡಜನರೂ ಕೂಡ ನಮಗೆ ನಿಮಗೆ ಆಶೀರ್ವಾದ ಮಾಡುತ್ತಾರೆ. ಇದರಲ್ಲಿ ಅನುಮಾನವೇ ಇಲ್ಲ.

ಇವತ್ತು ಸಂಡೂರು ತಾಲ್ಲೂಕಿನಲ್ಲಿ ನಾವು ಅರ್‍ಯಾಕನ್ನು ಹಂಚುವುದಕ್ಕೆ ಬಿಡಬಾರದು ಎನ್ನುವ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಗದಗ್ ತಾಲ್ಲೂಕಿನಲ್ಲೂ ಕೂಡ ಅದೇ ತೀರ್ಮಾನವನ್ನು ಅವರು ಮಾಡಿದ್ದಾರೆ. ಕೊನೆಯ ಪಕ್ಷ ಒಂದು ಪಂಚಾಯಿತಿಯಲ್ಲಿ ಏನಾದರೂ ಗ್ರಾಮ ಪಂಚಾಯಿತಿ ಮತ್ತು ಗ್ರಾಮಸಭೆ ಆ ರೀತಿ ತೀರ್ಮಾನಮಾಡಿದರೆ ಅಲ್ಲಿ ಅರ್‍ಯಾಕ್ ಅಂಗಡಿಯನ್ನು ತೆಗೆಯಬಾರದು ಎಂದು ನೀವು ಸ್ಪಷ್ಟವಾಗಿ ಹೇಳತಕ್ಕದ್ದು. ನನಗೆ ತಿಳಿದಮಟ್ಟಿಗೆ ಆ ಅಧಿಕಾರ ಇದೆ. ಅದನ್ನು ನೀವು ಸ್ಪಷ್ಟವಾಗಿ ಹೇಳಿದರೆ ಇನ್ನಷ್ಟು ಗ್ರಾಮಪಂಚಾಯಿತಿಗಳಿಗೆ, ತಾಲ್ಲೂಕು ಪಂಚಾಯಿತಿಗಳಿಗೆ ಜಿಲ್ಲಾ ಪಂಚಾಯಿತಿಗಳಿಗೆ ಕೊಟ್ಟಂತೆ ಆಗುತ್ತದೆ. ಇದನ್ನು ಮಾಡುವಂಥ ಕಾಲ ಬಂದಿದೆ. ಧೈರ್ಯವಾಗಿ, ಸ್ಪಷ್ಟವಾಗಿ ಮಾಡಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು : ಬಹಳ ಸೂಕ್ತವಾದಂಥ ಸಲಹೆಯನ್ನು ಹಿರಿಯರು ಕೊಡುತ್ತಿದ್ದಾರೆ. ಸರ್ಕಾರದ ವಿವೇಚನೆ, ಚಿಂತನೆಗೆ ಬಿಟ್ಟಂಥ ವಿಚಾರ. ಆದರೆ ಮಧ್ಯದಲ್ಲಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುವ ಮನವಿ. ಏನೆಂದರೆ ಏನು ಅಕ್ರಮವಾಗಿ ಸರ್ಕಾರದಿಂದ ಅನುಮತಿ ಪಡೆಯದೆ ಕೆಲವೊಂದು ಶಾಲೆ, ಕಾಲೇಜು ಮನೆ, ದೇವಸ್ಥಾನದ ಮುಂದೆ ಸಾರಾಯಿ ಅಂಗಡಿಗಳು ಇದೆ, ಸರ್ಕಾರದ ಅನುಮತಿ ಪಡೆಯದೆಯೇ ಅಕ್ರಮವಾಗಿ ನಡೆಸುವಂಥ ಅಂಗಡಿಗಳು ಇದೆ, ಕೊನೆಯ

ಪಕ್ಷ ಸರ್ಕಾರ ಅದರ ಬಗ್ಗೆಯಾದರೂ ತತ್‌ಕ್ಷಣ ಕ್ರಮ ತೆಗೆದುಕೊಂಡು, ಅವುಗಳನ್ನು ಖಾಲಿ ಮಾಡಿಸುವಂಥ ಸೂಕ್ತ ಕ್ರಮ ಜರುಗಿಸಿ ಎತ್ತಂಗಡಿ ಮಾಡಿಸುವಂಥ ಕೆಲಸವನ್ನು ಸರ್ಕಾರ ಮಾಡಿಸಬೇಕು ಎಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಉಪಮುಖ್ಯಮಂತ್ರಿಗಳು ಈ ರಾಜ್ಯದಲ್ಲಿ ಪಾನನಿರೋಧ ಮಾಡುವುದಿಲ್ಲ ಎಂದು ಅಧಿಕಾರ ವಹಿಸಿಕೊಂಡ ತಕ್ಷಣದಲ್ಲಿ ಹೇಳಿದ್ದಾರೆ. ಆದ್ದರಿಂದ ಈ ವ್ಯರ್ಥ ಏಕೆ?

ಶ್ರೀ ಎಂ.ವೈ. ಘೋರ್ಪಡೆ : ಇದು ನನ್ನ ಅಭಿಪ್ರಾಯ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಿಮ್ಮ ಅಭಿಪ್ರಾಯ ಹೇಳಿ. ಈ ಸರ್ಕಾರ ನಡೆಸತಕ್ಕಂಥವರು ಹೇಳಿರುವುದರಿಂದ ಅದರ ಅಗತ್ಯವೇನಿದೆ?

ಶ್ರೀ ಎಂ.ವೈ. ಘೋರ್ಪಡೆ : ಅವರು ಸಾರ್ವಭೌಮರಲ್ಲ.

ಅಧ್ಯಕ್ಷರು : ಆಯಿತು. ಶಿವರಾಮೇಗೌಡರೇ, ಅವರು ನಿಮ್ಮನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಆ ಪಕ್ಷದಲ್ಲಿರುವವರೂ ಕೂಡ ಇದರ ಬಗ್ಗೆ ಹೇಳುವುದಕ್ಕೆ ತಯಾರಾಗಿದ್ದಾರೆ.

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಘೋರ್ಪಡೆಯವ ಸರ್ಕಾರದಲ್ಲಿ ಒಂದು ಲೀಟರ್ ಹಾಲು ಮಾರಿದರೆ ನೂರು ಎಂ.ಎಲ್. ಸಾರಾಯಿ ಕೊಡಬರಲಿಲ್ಲ. ಅದನ್ನು ಅವರು ಮರೆತಿದ್ದಾರೆ.

ಅಧ್ಯಕ್ಷರು : ನೀವು ನೆನಪು ಮಾಡಿಕೊಟ್ಟರಲ್ಲಾ, ಥ್ಯಾಂಕ್ಸ್.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಅವರು ನನ್ನ ಸರ್ಕಾರದ ಪಾಲಿಸಿಯನ್ನು ಮದ್ಯಪಾನದ ಬಗ್ಗೆ ಹೇಳಲಿಲ್ಲ. ನಾನು ಹೇಳಿದ್ದುದು ಎನ್.ಟಿ. ರಾಮರಾವ್‌ರವರು ಒಂದೇ ಸಾರಿಗೆ ಪಾನನಿರೋಧವನ್ನು ತಂದಿದ್ದಾರೆ. ನೀವು ಏನು ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಒಂದೇ ಸಾರಿ ಸಂಪೂರ್ಣ ಪಾನನಿರೋಧ ಅಸಾಧ್ಯ ಈ ಜಗತ್ತಿನಲ್ಲಿ ಎಂದು ಹೇಳಿದೆ. ನಮ್ಮ ಮಾನ್ಯ ಘೋರ್ಪಡೆಯವರು ಹೇಳಿದ ಹಾಗೆ ಹಳ್ಳಿಗಾಡಿನ ಸ್ಥಿತಿ ನೋಡಿ, ಇವತ್ತು ಆ ಬಡವರ ಅನಾರೋಗ್ಯ, ನಾವು, actually we have allowed them to take poison every day slowly. ಸಾಯುತ್ತಿದ್ದಾರೆ. ಅದಕ್ಕೆ ಸರ್ಕಾರ ಏನು ತೀರ್ಮಾನ ಮಾಡಬೇಕೋ ಅದನ್ನು ನಾವು ನಮ್ಮ ಪಾಲಿಸಿ ಸ್ಟೇಟ್‌ಮೆಂಟ್‌ನಲ್ಲಿ ತರುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಒಂದು ಸ್ವಾರಸ್ಯ ಏನೆಂದರೆ ಈ ಪಾನನಿರೋಧ ಮಾಡಬೇಕು ಎಂದು ಹೇಳಿ ಪಕ್ಷಾತೀತವಾಗಿ ಮಾತನಾಡುತ್ತಾರೆ. ಪಾನನಿರೋಧ ಮಾಡಬಾರದು ಎಂದು ಹೇಳಿ ಕೂಡ ಪಕ್ಷಾತೀತವಾಗಿದೆ. ಆದರೆ ಎರಡು ಕಡೆಯಲ್ಲಿ ಪಕ್ಷಾತೀತವಾಗಿ ಮಾತನಾಡತಕ್ಕಂಥ ಜನಗಳಿದ್ದಾರೆ. ಏಕೆಂದರೆ ಪಾನದ ವಿಷಯ ಬಂದಾಗ ಪಕ್ಷಾತೀತವಾಗುತ್ತದೆ.

ಅಧ್ಯಕ್ಷರು : ಪೋಲರೈಸೇಷನ್ ಆಗಬೇಕು.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, unlicenced shops ಅಷ್ಟೇ ಅಲ್ಲ, ಹಾದಿ ಬದಿ ಇರುವ ಗೂಡಂಗಡಿಗಳಲ್ಲಿಯೂ ಕೂಡ ಸಿಗುತ್ತದೆ. ಇದರ ಬಗ್ಗೆ ಮಹಿಳೆಯರು ಸೇರಿ ಹಿಂದುಳಿದಿರತಕ್ಕಂಥವರು ಚಳುವಳಿ ಮಾಡಿದಾಗ, ಆ ಚಳುವಳಿ ಮಾಡಿದವರ ಮೇಲೆ ಸುಳ್ಳುಕೇಸ್ ಹಾಕಿ ಜೈಲಿಗೆ ಎಳೆಯುತ್ತಿದ್ದಾರೆ. ಅದನ್ನು ನಾನು

ಗೃಹಮಂತ್ರಿಗಳ ಗಮನಕ್ಕೆ ತಂದಿದ್ದೇನೆ. 307 ಕೇಸನ್ನು ಹಾಕುತ್ತಿದ್ದಾರೆ. ಎಲ್ಲರ ಮೇಲೂ ಕೂಡ ಕೇಸನ್ನು ಹಾಕಿಸುತ್ತಿದ್ದಾರೆ. ಅದನ್ನು ಸರ್ಕಾರ ಕೂಡಲೇ ಗಮನಕ್ಕೆ ತೆಗೆದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ.

ಶ್ರೀ ಎಂ.ವೈ. ಘೋರ್ಪಡೆ : ಮತ್ತೆ ಸಾರಾಯಿ ಬಗ್ಗೆ ಪುನಃ ನಾನು ಅದನ್ನೇ ಹೇಳಬೇಕಾಗುತ್ತದೆ. ಜೂನ್ ತಿಂಗಳ ಒಳಗಾಗಿ ಅದನ್ನು ಸಂಪೂರ್ಣವಾಗಿ ಅರ್ರ್ಯಾಕ್ ಮಾತ್ರ ರಾಜ್ಯದಲ್ಲಿ ನಿಲ್ಲಿಸುವಂಥ ಗಂಭೀರವಾದಂಥ ಪ್ರಯತ್ನ ಅಷ್ಟೇ ಅಲ್ಲ, ಆ ಕೆಲಸ ಮಾಡಬೇಕು ಮತ್ತೆ ಒಂದು ವೇಳೆ ಅದನ್ನು ನೀವು ಮಾಡುವುದಕ್ಕೆ ಆಗದಿದ್ದರೆ ಆಯಾ ಗ್ರಾಮಪಂಚಾಯಿತಿಯಲ್ಲಿ, ತಾಲ್ಲೂಕಿನಲ್ಲಿ, ಜಿಲ್ಲಾ ಪಂಚಾಯಿತಿಯಲ್ಲಿ ಜನರು ಆ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಆಗ ಅಲ್ಲಿ ನಿಮ್ಮ ಒತ್ತಾಯದಿಂದ ಅಂಗಡಿಗಳನ್ನು ತೆಗೆಯುವಂಥ ಪ್ರಯತ್ನ ಮಾಡಿದರೆ ಜನರು ಚಳುವಳಿ ಮಾಡಬೇಕಾಗುತ್ತದೆ. ಆ ಮಟ್ಟಕ್ಕೆ ಈ ಪ್ರಶ್ನೆಯನ್ನು ತೆಗೆದುಕೊಂಡು ಹೋಗಬೇಡಿ. ಇಷ್ಟು ಹೊತ್ತು ಟೈಮ್ ಕೊಟ್ಟಿದ್ದಕ್ಕೆ ಧನ್ಯವಾದಗಳು.

5.25 ಪಿ.ಎಂ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಘೋರ್ಪಡೆಯವರು ಅಧ್ಯಕ್ಷರ ಅಧಿಕಾರದ ವ್ಯಾಪ್ತಿ ಬಗ್ಗೆ ಮತ್ತು ಅಧಿಕಾರ ಎಷ್ಟರಮಟ್ಟಿಗೆ ಮೊದಲಿನ ಪರಿಸ್ಥಿತಿಗೂ ಮತ್ತು ಹೊಸ ಕಾನೂನು ರೀತ್ಯಾ ಅದನ್ನು ಕಿತ್ತುಕೊಳ್ಳಲಾಗಿದೆ ಎಂದು ಹೇಳಿ ವ್ಯತ್ಯಾಸವನ್ನು ಈ ಮೂಲಕ ಅದರ ಗಮನಕ್ಕೆ ತರಬಯಸುತ್ತೇನೆ. ಮತ್ತು ತಾವು ಹೇಳಿದಾಗ ಇದರ ಬಗ್ಗೆ ನಾನು ನೋಡುತ್ತಿದ್ದೆ. ತಾವು ಹೇಳಿದಿರಿ. The Adyaksha of the Zilla Panchayat shall, convene/ preside. ಕನ್ವಿನ್ precide ಎಲ್ಲಾ ಆಯಿತು (ಸಿ)ನಲ್ಲಿ

"Exercise such administrative supervision and control over the Chief Executive Officer for securing implementation of resolutions or decisions of the Zilla Panchayat or of the standing Committees which are not inconsistant with the provisions of this Act, or any general or specific direction issued undet this act;"

ಆದರೆ ಅದೇ ಹಿಂದಿನ ಕಾನೂನಿನಲ್ಲಿ ಸೆಕ್ಷನ್ 168-(ಎ) ಕೆಳಗಡೆ ನಾನು ಓದಿ ಹೇಳುತ್ತೇನೆ.

"Powers and Duties of the Adhyaksha-

The Adhyaksha shall be the executive head of the Zilla Parishad and shall perform all the duties imposed and exercise all the powers conferred on him...

ಅವನಿಗೆ ಇರುವಂತಹ ಎಕ್ಸಿಕ್ಯೂಟೀವ್ ಪವರ್ಸನ್ನು ಕಿತ್ತುಕೊಂಡು ಬರೀ ಸೂಪರ್ ವೈಸರಿ ರೆಸಲ್ಯೂಷನನ್ನು ಇಂಪ್ಲಿಮೆಂಟೇಷನ್ ಮಾಡುವ ಮಟ್ಟಕ್ಕೆ ಅಧ್ಯಕ್ಷರನ್ನು ಇಡಿಸಿದ್ದಾರೆ. ಈ ಕಾನೂನು ರೀತ್ಯಾ.

ಶ್ರೀ ಎಂ.ವೈ. ಘೋರ್ಪಡೆ : ಈ ವಿಚಾರ ಸರಿ ಇಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಅಧಿಕಾರಸ್ಥರು ಮಾಡುವಂತಹ ಕೆಲಸ ಇದೆ. ಇಲ್ಲದೇ ಹೋದರೆ ನಾವು ಇಷ್ಟು ಜನಕ್ಕೆ ಸಂಬಳ ಕೊಟ್ಟು ಇಡಬೇಕಾದದ್ದು ಇಲ್ಲ, ಮನೆಗೆ ಕಳುಹಿಸಬಹುದು. ಪ್ರಶ್ನೆ ಏನು ಎಂದರೆ ಜನ ಪ್ರತಿನಿಧಿಗಳು ಮಾಡುವ ಕೆಲಸ ಏನು? ಅಧಿಕಾರಸ್ಥರು

ಮಾಡುವ ಕೆಲಸ ಏನು? ತಮಗೆಲ್ಲಾ ಗೊತ್ತಿರುವ ಹಾಗೆ ಕಾರ್ಯಕ್ರಮ, ಗೈಡ್ ಲೈನ್ಸ್‌ನಲ್ಲಿ ಯಾವ ಕೆಲಸ ಎಲ್ಲಿ ನಡೆಯಬೇಕು. ಇದರ ಬಗ್ಗೆ ತೀರ್ಮಾನ. ಸ್ಕೂಲು ಎಲ್ಲಿ ಕಟ್ಟಬೇಕು, ರಸ್ತೆ ಎಲ್ಲಿ ಮಾಡಬೇಕು, ಹಾಸ್ಪಿಟಲ್ ಎಲ್ಲಿ ಕಟ್ಟಬೇಕು. ಈ ತೀರ್ಮಾನಗಳನ್ನು ಅಧಿಕಾರಸ್ಥರು ತೆಗೆದುಕೊಳ್ಳುವುದಕ್ಕೆ ಅವಕಾಶ ಇತ್ತು. ಇದು ಆಯಾಯ ಸಂಬಂಧಪಟ್ಟ ಎಲೆಕ್ಟೆಡ್ ಬಾಡೀಸ್‌ಗೆ ಕೊಟ್ಟಿರತಕ್ಕ ಅಧಿಕಾರ. ಇಂತಹ ಹಲವಾರು ಅಧಿಕಾರಗಳನ್ನು ಕೊಟ್ಟಿದ್ದೇವೆ. ದಯವಿಟ್ಟು ಅದನ್ನು ಜಾಸ್ತಿ ಮಾಡುತ್ತಾ ಹೋಗಿ, ವಾಪಸ್ ತೆಗೆದುಕೊಳ್ಳಬೇಡಿ. ಜನತಾದಳ ಇದ್ದಾಗ ಕೂಡ ಕೊಟ್ಟಿರತಕ್ಕ ಅಧಿಕಾರ, ಸ್ಕೀಮ್ಸ್‌ನ್ನು ವಾಪಸ್ ಪಡೆದಿದ್ದಾರೆ. ಈ ತಪ್ಪನ್ನು ದೇಶದಾದ್ಯಂತ ಎಲ್ಲರೂ ಮಾಡಿದ್ದಾರೆ. ಅದನ್ನು ತಾವು ಹೆಚ್ಚಿಸಿ. ಆದರೆ ಅವರ ರೆಸಲ್ಯೂಷನ್ ಪ್ರಕಾರ ಅಥವಾ ಆದೇಶದ ಪ್ರಕಾರ, ಅಭಿಪ್ರಾಯದ ಪ್ರಕಾರ ಆ ಕೆಲಸ ಮಾಡಲಿಕ್ಕೆ ಅಲ್ಲವೇ ನಾವು ಅಧಿಕಾರಿಗಳನ್ನು ಇಟ್ಟಿದ್ದುದು? ಅಂದರೆ ಏನು? ಆ ಟೆಕ್ನಿಕಲ್ ಗೈಡ್‌ಲೈನ್ಸ್ ಏನು ಇರುತ್ತದೆ? ಅಂದರೆ ರಸ್ತೆ ಇದೇ ರೀತಿ ಇರಬೇಕು, ಸ್ಕೂಲು ಇದೇ ರೀತಿ ಇರಬೇಕು. ಇಷ್ಟೇ ಸಿಮೆಂಟ್ ಹಾಕಬೇಕು, ಇಷ್ಟೇ ಖರ್ಚು ಆಗಬೇಕು. ಇದು ಅವರು ಮಾಡುವಂತಹ ಕೆಲಸ. ಅದರಲ್ಲಿ ಏನಾದರೂ ತಪ್ಪಾದಗೆ ಅದಕ್ಕೆ ಶಿಕ್ಷೆ ಕೊಡುವಂತಹ ಅಧಿಕಾರ ಪ್ರತಿನಿಧಿಗಳಿಗೆ ಇರಬೇಕಾಗುತ್ತದೆ. ಹಿಂದೆ ಆಯಿತು ಮಂಡಲ ಪಂಚಾಯಿತಿಯಲ್ಲಿ ಛೇರ್ಮನ್ ದುಡ್ಡು ತೆಗೆದುಕೊಂಡು ಹೋಗಿದ್ದಾನೆ, ನಮ್ಮದು ಜವಾಬ್ದಾರಿಯಲ್ಲ ಎಂದು ಸೆಕ್ರೆಟರಿಗಳು ಹೇಳಿದರು. ಏನು ಮಾಡಲಿಕ್ಕೆ ಆಯಿತು? ಏನೂ ಮಾಡಲಿಕಕೆ ಆಗಲಿಲ್ಲ, ದುಡ್ಡು ಹೊರಟೇ ಹೋಯಿತು. ಆ ರೀತಿ ಆಗಬಾರದು ಎಂದು ಹೇಳಿ, ಎಲೆಕ್ಟೆಡ್ ಬಾಡೀಸ್ ಅಧಿಕಾರ ಏನು? ಒಂದಂತೂ ಮಾಡಿದ್ದೇವೆ. ಹಿಂದೆ ನೀವು ಅಧ್ಯಕ್ಷರಿಗೆ ಮಾತ್ರ ಅಧಿಕಾರವನ್ನು ಕೊಟ್ಟಿದ್ದೀರಿ. ನಾವು ಇವತ್ತು ಚುನಾಯಿತ ಸಂಸ್ಥೆಗೆ ಅಧಿಕಾರವನ್ನು ಕೊಟ್ಟಿದ್ದೇವೆ. ಒಬ್ಬ ವ್ಯಕ್ತಿ ಅಲ್ಲ ಏಕೆಂದರೆ ಅವರು ಸಾರ್ವಭೌಮ ಆಗಬಾರದು.

ಶ್ರೀ ಜಿ.ಎಸ್. ಶಿವನಂಜಪ್ಪ : ಅಧ್ಯಕ್ಷರೇ ನಾನು ಒಂದು ನಿಮಿಷ ಮಾತನಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಅಧ್ಯಕ್ಷರು ಎಲೆಕ್ಟೆಡ್ ಬಾಡೀಸ್‌ಗೆ ಛೇರ್ಮನ್ ಆಗಿ ಕೆಲಸ ಮಾಡಬೇಕು ಅಷ್ಟೇ.

ಅಧ್ಯಕ್ಷರು : ನನಗೆ ಗೊತ್ತಿದೆ. ತಾವು ಜಿಲ್ಲಾ ಪರಿಷತ್ತಿನ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ.

ಶ್ರೀ ಜಿ.ಎಸ್. ಶಿವನಂಜಪ್ಪ : ಶಿವರಾಮೇಗೌಡರು ಮಾತನಾಡುತ್ತಾರೆ.

ಅಧ್ಯಕ್ಷರು : ಶಿವರಾಮೇಗೌಡರೂ ನಾನೂ ಸ್ನೇಹಿತರು. ಆಮೇಲೆ ಅವರಿಗೆ ಅವಕಾಶ ಕೊಡುತ್ತೇನೆ. ಶಿವರಾಮೇಗೌಡರೇ ಒಪ್ಪಿಕೊಂಡಿದ್ದಾರೆ. ಖಮರುಲ್ ಇಸ್ಲಾಂ ಅವರು ಮಾತನಾಡಲಿ ಎಂದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಮ್ಮ ಉದ್ದೇಶ ಇಷ್ಟೇ. ನೀವು ಇವತ್ತು ಅವರನ್ನು ಕರೆದಿದ್ದೀರಿ. ಅವರಿಗೆ ಅವಕಾಶ ಕೊಡಿ, ಬೇಡ ಎಂದು ಹೇಳುವುದಿಲ್ಲ. ಆದರೆ ಮುಂದೆ ಹೀಗೆ ಆಗಬಾರದು ಎಂಬ ಉದ್ದೇಶಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

+ SRI QUAMARUL ISLAM (Gulbarga) : Mr. Speaker, it gives me immense pleasure to speak on the motion of thanks to the Governor's Address. The people of Karnataka elected the Janata Dal which has got the majority under the leadership of Mr. Deve Gowda. To may friend Mr. Yediyurappa,

the people have given the Opposition position to him and his party. I congratulate both the Parties and the leaders of the parties. From the Governor's Address on the 28th the people of this state and the members of this House were having very high expectations at the time of the Governor's address but this Address, which consists of only 8 pages, has not come up to the expectations of the Members of this House.

Sir, you all know that I am coming from a region which is called 'Hyderabad-Karnataka', which was the erstwhile part of the Nizam State. Even today all the four districts of the Hyderabad-Karnataka are very backward economically, Socially and educationally. To bring these districts on par with the other regions of our State, the Hyderabad-Karnataka Development Board was already formed. This region has given many of the MLAs of the Janata Dal Party but this Address has not mentioned anything regarding the development of Hyderabad-Karnataka. Sir, you know, after the formation of this Hyderabad Karnataka Development Board, The previous Government has given about Rs. 40 crores in the year 1990 and Rs. 50 crores in the year 1991. Then Rs. 65 crore was given and again another Rs. 65 crore was given. But at the same time injustice was done when the budget was presented. The money which has to come as a share of the Hyderabad-Karnataka area in the budget, was cut off and the money was compensated later on. Now the Minister from Hyderabad-Karnataka area viz., from Gulbarga, Vaijanath Patilji, is here. He was the Minister in the Cabinet. I know that he resigned at that time for the reason that justice was not done for Hyderabad-Karnataka area. Now Sir, this Governor's Address has not mentioned anything about Hyderabad-Karnataka area. We were having high expectations.

MR. SPEAKER : So you want him to resign again?

SRI QUAMARUL ISLAM : No, Sir. I don't Want. I am not a man who wants it. I want that Sri Vaijanath Patil should work there in the Cabinet as a leader of this region and he should fight against the injustice. For that, my full support is there. In the list of backwards, we are at No. 19, 20, 18 and 17. Bellary, Bidar, Gulbarga, Raichur, Sir, you know how much of injustice is being done to us. In the meantime, our people are demanding that this work & that work should done. Now the time has come.Our expectations are very high, Sir. We cannot complete as far as Entrance Test is concerned. the standard of different Universities is different. People who are passing from Gulbarga University cannot compete with the students who are passing out from the Universities of Mysore, Mangalore, Bangalore. These

are old established Universities. Their literacy and their standard is very high. We cannot compete with others in the State. In any of the Entrance Test, our boys cannot be admitted to Engineering, Medical and other professional courses. That is why our demand is that there should be regional entrance test for the students of Hyderabad-Karnataka areas. This is not a new demand. This is already existing in the neighbouring State of Maharashtra. In this House, through you Sir, I want that in the coming budget session when it is going to be commenced, the Government should come up with a clear-cut policy on all such demands which we are mentioning here in this House, With that clear-cut policy, we expect that this Government will fulfill the promise which they have already made during the election in their election manifesto. As regards other recruitments, if you take the PSC and other Departments, even one or two applicants of our area will not be selected. We want that even in the recruitment of all categories of Class-I, Class-II, Class-III and Class-IV, posts, it should be on the regional basis. If these things are not being done our people cannot come to the Govt. service. Vaijanath Patilji, Ministers will come and go but...

(INTERRUPTIONS)

SRI QUAMARUL ISLAM : Whatever I am saying is through the speaker only. Mr. Speaker Sir, Ministers will come and go, Governments will come and go but their work will be remembered. If the Government makes only promises and they do not the work, people know how to teach them a lesson. My friends, who are sitting here in the opposition, have been elected because they have done good work to the people of their constituencies and as far as I am concerned, I am always a man representing a Party which will always be for the issues. If this Government take up a good issue and if they fulfill the demand which is the need of the people, definitely I will be with them and if the Government is only going to give promise but do not fulfill them, then I will be the first man to fight till last. Sir, here, in our area and in my constituency which is purely an urban constituency i.e., Gulbarga, which is the heart of the Hyderabad-Karnataka, people are not even till today getting water. You know, some years back water was brought from Krishna through train.

I thank the previous Government for having spend Rs. 19.5 crore towards the Bhima Scheme. Earlier, Bennethora scheme was taken up 20 years ago

and in the year 1985-86 when Sri Ramakrishna Hegdeji was the Chief Minister. Bhima Scheme was accepted and it was sanctioned and from them onwards hardly Rs.55 lakhs were spent in between 1986 to 89 but from 1989 to 93-94, Rs. 19.5 crores were spend and the I phase only was completed after spending Rs.25 crores totally on the Bhima scheme. The I phase includes 27 Km. pipe line, barrage and the filter plant. With this, the Bhima has reached Gulbarga filter plant but it has not reached the people. Still today there are 60% of the extension areas where the people of those localities are paying taxes but there is no existence of the pipeline in the extensions of the City of Gulbarga.

I wanted that the scheme has already been sanctioned i.e., the II phase, during the regime of Chief Minister Sri Veerappa Moily, should be completed. In the last budget session, approval was given by the Cabinet and the House has accepted the 2nd phase of the Bhima Scheme which consists of Rs. 22.5 Crores. I wanted that in the coming budget, the Bhima II phase scheme costing Rs. 22.5 crores should be included. It is the primary duty of the Government to give drinking water to the people. I am not asking any subsidy or anything. I am asking only that water may be given and it is my right. If they cannot give water, they have to face the situation.

MR. SPEAKER : this must be given atleast for one reason that you are talking to Mr. Vatal Nagaraj in English. Atleast for that reason it must be conceded. I think the Hon'ble Deputy Chief Minister should be making a note of this.

ಶ್ರೀ ಖಮರುಲ್ ಇಸ್ಲಾಂ : ಈ ಹಿನ್ನೆಲೆಯಲ್ಲಿ ನಾನು ಪ್ರಯತ್ನ ಮಾಡುತ್ತಿದ್ದೇನೆ. ನಮ್ಮ ಮಿತ್ರರಾದ ವಾಟಾಳ್ ನಾಗರಾಜ್‌ರವರಿಗೋಸ್ಕರ ನಾನು ಕನ್ನಡದಲ್ಲಿ ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಏನೇ ತಪ್ಪು ಆದರೂ ಚಿಂತೆಯಿಲ್ಲ, ನೀವು ಕನ್ನಡದಲ್ಲಿ ಮಾತನಾಡಿ ಎಂದು ನಾನು ಹೇಳಿದ್ದೇನೆ. ಮುಂದಿನ ಬಡ್ಜೆಟ್ ಅಧಿವೇಶನದಲ್ಲಿ ಕನ್ನಡದಲ್ಲಿ ಮಾತನಾಡುತ್ತೇನೆಂದು ಹೇಳಿದ್ದಾರೆ.

ಶ್ರೀ ಖಮರುಲ್ ಇಸ್ಲಾಂ : ನಮ್ಮ ಮಿತ್ರರು ಏನು ಹೇಳಿದರೂ ನಾನು ಅವರ ಡಿಮ್ಯಾಂಡ್ ಪೂರೈಸಲಿಕ್ಕೆ ಕನ್ನಡದಲ್ಲಿ ಮಾತನಾಡುತ್ತೇನೆ. ನಮ್ಮದು ಹೈದರಾಬಾದ್ ಕನ್ನಡ ಅಲ್ಲ, ನಾನು ಖಂಡ್ರೆಯವರ ಕನ್ನಡದಲ್ಲಿ ಮಾತನಾಡುತ್ತೇನೆ.

MR. SPEAKER : You have really managed him.

SRI. QUMARUL ISLAM : Sir, the situation in Gulbarga is difficult. The 2nd phase of the Bhima Scheme which has already been sanctioned by the

Goverment and for which already taken grant was given in the budget, has to be taken up. Suppose this scheme is not taken, what is the use of spending Rs. 25 crores? Even today people are not getting the water. The situation is very acute in the city of Gulbarga. I don't want to go much into the details. The budget session will come and I will speak in detail about the Bhima scheme at that time. What is the meaning of successful commissioning? As per the agreement, when the pipeline is laid down, 80% of the money is to be given; 10% should be given after hydraulic testing is done and the remaining 10% after successful commissioning. Here in this case the pipeline was laid down and the scheme was commissioned without hydraulic testing. The position today is that every fortnight one or two pipes are bursting and lot of expenditure is incurred on the Board. I would like to say that without Hydraulic testing, the scheme cannot be called a successful commissioning. I want that a serious note is to be taken and the Government should see that there should be hydraulic testing for the Bhima Scheme. Without the hydraulic test, this scheme cannot be called a successful scheme.

Sir, as far as the roads are concerned, Hyderabad-Karnataka Development Board funds were available. We have utilised these funds for the construction of hthe roads. We had taken up some of the roads. but the unfortunate thing is that on the roads which have taken up with these funds, we have spent about Rs. 13-14 lakhs but there is no money in the coming year in the Corporation because those were the Corporation roads which have been taken with these funds by PWD. There is no fund with the Corporation to maintain these roads. Whatever money has become waste because spent, that road has again damaged and there is no maintenance. I want that a policy decision has to be taken particularly for the Hyderabad-Karnataka region tha big roads which have been taken up under the Hyderabad-Karnataka Development Board, those roads which are there under the Corporation, some of them should be handed over to PWD so that the money which has been spent for the development of those roads should get maintainance every year. Otherwise, there will be no use of taking roads under Hydrabad-Karnataka Development Board which cannot have maintenance in future. That is also one of the important points which I wanted to highlight here.

Sir, you know our Home Minister is also here. Through you I want to draw the attention of the Home Minister. I believe that the TADA Act is the

blackest law am al ne ack s which has come for a period of 10 y in the Parliament and which is going to end on 1st April. Unfortunately, Sir, in Karnataka many people have been arrested under the TADA without any reason. Even though there is no fit case for TADA, The police people are giving threat to arrest under TADA. Now recent amendments have come. It seems that TADA case cannot be booked by an officer less than the police Superintendent. In the earlier cases, TADA cases were booked by the officers below the rank of S.P. There are persons from Bangalore. I know many persons from Bidar from Bagalkot and from Gulbarga, have been detailed under TADA. Many persons I know. Those are not fir cases for arrest under TADA. So many persons have been arrested under TADA. During the time of 6th December incident, cases were booked against many innocent persons. Now the new Government has come. Even in these elections with political vengenace the Parties have given complaints against the workers of the other parties. At this juncture, so many case have been booked in the police stations. I request through you, Sir, that this Government should review all these cases of detention under TADA and also 6th December cases and those who found innocent, orders should be passed to drop those cases and those who are guilty or against whom there is a prime facio case, under TADA those cases should be continued TADA.

MR. SPEAKER : This si only in Gulbarga or all over the State?

SRI QUAMARUL ISLAM : Throughout the state. This as a general policy, should be done.

SRI H.N. NANJE GOWDA : Let not the Hon'ble member give an impression that there are persons in this August House who can argue for persons who are arrested under TADA. It is not a fact what the Hon'ble Member is revealing. If there are specific cases, let him say. There cannot be such cases. May be there may be cases under some other sections but not under TADA. If specific cases are there, please bring it to the notice of the Government.

MR. SPEAKER : Probably the affected people have not ap ac d h They have approached you. Please go ahead.

SMT. PRAMII NE RGI they have dread on S er C t.

MR SPEAKER : The ... r kn... it better. She is a practicing advocate.

SRI QUAMARUL ISLAM : I know that, but the Government can review. It was there before the Supreme Court and the Supreme Court verdict has already come. 90% of the cases have not been charge-sheeted and the cases which have been chargesheeted, even one or two cases have not been proved and that is why the amendment was made that the Superintendent of Police has to make the Chargesheet.

Now the Government have thought for the women reservation and all. Here the previous Government has taken a policy decision that there will be women police station in almost all the cities having Corporations like Bangalore, Mangalore the Police station has started; in Hubli-Dharwad the women police station has started but again Sir, why it has not started in Gulbarga? May I know the reasons for this stop-motherly attitude? When we talk about Hyderabad-Karnataka, always we are last. Now I want that women police station should be started immediately in the city of Gulbarga.

5.55 ಪಿ.ಎಂ.

SRI QUAMARUL ISLAM : In the City of Gulbarga

ಶ್ರೀಮತಿ ಪ್ರಮೀಳಾ ನೇಸರ್ಗಿ : ಬಹುಶಃ ಅಲ್ಲಿ ಹೆಂಗಸರು ಜಾಸ್ತಿ ಇದ್ದಾರೆ, ಆದರೆ ಅವರು ಹೊರಗಡೆ ಬರುವುದಿಲ್ಲ, ಹೆಂಗಸರ ಪೊಲೀಸ್ ಸ್ಟೇಷನ್ ಏಕೆ?

SRI QUAMARUL ISLAM : Sir, in this Governor's Address, it is mentioned that

" My Government is committed to bringing about reservation of 30% of the total number of sets in both the Houses for women. Based on the Resolution to be passed in both the Houses, my Government would persuade the Government of India to make the necessary amendments to the Representation of people Act in this behalf."

My submission in this regard, Sir, is that the bali is now in the Government's Court and the Cabinet has give full powers to the Hon'ble Chief Minister for nominations to the Upper House. Out of the total strength now, 30% women are not there in that House. When there is five seats vacant and when the Cabinet has already given powers, let the resolution be passed. In this House there are only six women from that side and only one from Opposition side. I want that all the nominations for five seats in the Council should go to women of different regions of this State. This is the well-beginning. I hope that this request of mine in this House will be considered by the Hon'ble Chief Minister as the Governor has stated that the Government is go... to pass a resolution in both the House for 30% representation for women and they will have to ammend the peole's Representation Act. Now the bal... is in the Court of the Government, it is my humble request..

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ಶೇ. 30 ರಷ್ಟು ಒಪ್ಪಿರುವುದು. ಈಗ ಇವರು ಶೇ. 100ರಷ್ಟು ಕೇಳುತ್ತಿದ್ದಾರೆ. ಹಾಗೆ ಮಾಡಿದರೆ ಇವರು ಇಲ್ಲದ ಹಾಗೆ ಆಗಿಬಿಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಪರಿಸ್ಥಿತಿ ಏನಾಯಿತು ಎಂದರೆ ಮಾನ್ಯ ಜಯಕುಮಾರ್‌ರವರು ನೀಲಿ ಬಟ್ಟೆಯನ್ನು ಹಾಕಿಕೊಂಡು ಬಂದಿದ್ದಾರೆ. ಅವರ ಕಣ್ಣಿಗೆ ಸೀರೆ ಕಂಡಹಾಗೆ ಕಾಣಿಸಿತು. ಅವರನ್ನು ಮೆಡಂ ಎಂದು ಹೇಳಿದರು, ತಾವು ಗಮನಿಸಲಿಲ್ಲ, ಎಂದು ಕಾಣುತ್ತದೆ. ತಾವು ಗಮನಿಸಿದ್ದರೆ ತಾವು ಅದರ ಬಗ್ಗೆ ಬಹಳ ವ್ಯಾಖ್ಯಾನ ಮಾಡುತ್ತಿದ್ದೀರಿ. ನಾನು ಬಹಳ ಎಚ್ಚರಿಕೆಯಿಂದ ಗಮನಿಸಿಸುತ್ತಿದ್ದೇನೆ. ಅವರು ನಮ್ಮ ನಂಜನಗೂಡಿನ ಶಾಸಕರು ಅವರು ಪುರುಷರು ಮಹಿಳೆಯಲ್ಲ.

SRI QUAMARUL ISLAM : This is my humble request and suggestion. I hope that this Government will consider my suggestion; Another request is that regarding compulsory wearing of helmet. This has to be withdrawn immediately. We are coming from a region where the temperature is 45 degrees. After wearing helmet, the temperature at the head is about 50 degrees.

MR. SPEAKER : Keeping the head itself is a problem there.

SRI QUAMARUL ISLAM : Compulsory helmet is not there in Andhra Pradesh and Uttar Pradesh. I have gone through some of the articles on this point. When Dr. Chenna Reddy was the Chief Minister, they have removed the ban. It is not good for the health also. I have seen in papers some articles on this. If I find time I will give them to out Hon'ble Home Minister. I want that the compulsory wearing of helmet, atleast if not in Bangalore and other areas, should be scrapped for the regions of Gulbarga, Bellary and Raichur. It should not be made compulsory in then places.

SRI SIDDARAIAH : There are also articles that helments should be made compulsory.

SRI QUMARUL ISLAM : If you go through the statistics, you will know how many people have safeguarded their life on wearing helment. Please keep that statistics before taking a decision. One more point. You know ban is there already in A.P. In the border talukas like Gulbarga, Sedam, Yadgir, Chincholi, smuggling will start and the previous Government has already sanctioned Rs. 50 lakhs for the border talukas. Rs 35 lakhs each has already been released and it has been implemented. Rs. 15 lakhs has not been released. It goes to police Departmement. In places like Merian and other places, police Chowki - they are not having even doors. In Merian, Kenchavaram where there are naxalite activities, this is the situation. After the ban lot of smuggling has started. I request that the remaining Rs. 15 lakhs must be released immediately in the interest of the border talukas and in the interest of stopping the smuggling from A.P.

My friend and the Hon'ble Opposition Leader, Mr. Yediyurappa spoke very nicely yesterday. He talked about minorities also. He was pained about specific programme is not given in the Governor's address for minorities. At the same time, he tried his best to confuse the House saying that the place of worship in Hubli, which is Idgah was the kittur Chennamma Maidan. even though in Court petition it has been accepted as Idgah,

(INTERRUPTIONS)

I have not disturbed anybody and I also do not want disturbance. Sir, Mr. Yediyurappa has also expressed his heart-felt condolences at the killing of five innocent people, by police firing. 5 innocent boys were killed in Deshpande Nagar and we demanded judicial enquiry at that time. But Sir, why these boys were killed? At that time, we insisted that the terms of reference to judicial enquiry should include about the instigators. Sir, we are not abovoe law. Constitution is supreme. Law is supreme. Instigators may be anybody. May be any political party. May be a Member of any House or may not be a member of the House, but he has no right.

SRI H.N.NANJE GOWDA : The Government can also be an instigator.

SRI QIAMARUL ISLAM : Yes, but out police has not played an important role. When I was mentioning regarding TADA; Iam against that Act. At that time also I have mentioned in this House, that under TADA many innocent people have been arrested but in those casess instigators were not arrested. We can talk here in this House but we must know what signals goes to the people from this House. This Government wanted that there should not be any issues in future. We all have got respect for the Nation. Every citizen of this country has got respect for the nation and the national flag. There are not two opinions regarding that. But at the same time, there are traditions and there are customs. I have not seen in my life that the national flag in hoisted on any Mandir, on any Masjid on any Gurudwara. I have not seen that from August 15, 1947.

(Mr. Deputy Speaker in the chair)

These are sacred places of worship. God is God. We cannot confine God for India or any other country. Shiva Mandir, whether one is a citizen of India or England, it is a Shiva Mandir for him. For a muslim, whether he is in India or any other place, it is a Masjid. There are no traditions of hoisting national flag on placces of worship. Today they are now 40 in number: we have to work with them. They are an my friends. We have to work for the development of the State. Why not? We can have a discussion

but when there is no tradition, why should we start and try to create controversy?

ಮಾನ್ಯ ಸದಸ್ಯರು : ಅಲ್ಲಿ ಮೈದಾನದಲ್ಲಿ ರಾಷ್ಟ್ರಧ್ವಜಕ್ಕೆ ಅಗೌರವವಾಗಿದೆ. ಅಪಮಾನವಾಗಿದೆ. ನಾವೇನೂ ಹೊಸ ಸಂಪ್ರದಾಯ ಹಾಕುತ್ತಿಲ್ಲ. ಆದರೆ ಆ ಮೈದಾನದಲ್ಲಿ ಈ ಸರ್ಕಾರದಿಂದ ರಾಷ್ಟ್ರಧ್ವಜಕ್ಕೆ ಅಪಮಾನವಾಗಿದೆ. ಅದರ ಸಲುವಾಗಿ ಒಂದು ಸಲ ಅಲ್ಲಿ ಗೌರವಯುತವಾಗಿ ರಾಷ್ಟ್ರಧ್ವಜಾರೋಹಣ ಮಾಡಬೇಕೆಂಬ ಬೇಡಿಕೆ ಇದೆಯೇ ಹೊರತು ಅಲ್ಲಿ ಅದನ್ನು ಸಂಪ್ರದಾಯವಾಗಿ ಮುಂದುವರಿಸಿಕೊಂಡು ಹೋಗುವಂಥದ್ದು ನಮ್ಮ ಅಪೇಕ್ಷೆ ಇಲ್ಲ. ಅಲ್ಲಿ ಯಾವುದೇ ಒಂದು ದೇವಸ್ಥಾನದಲ್ಲಿ ಪ್ರಾರ್ಥನಾ ಮಂದಿರ ಇಲ್ಲ, ಯಾವುದೇ ಮಸೀದಿ ಇಲ್ಲ.ಆ ಮೈದಾನದಲ್ಲಿ ಎಲ್ಲಾ ಪಕ್ಷಗಳ ಧ್ವಜಗಳು ಹಾರಿವೆ. ವಿಶ್ವ ಹಿಂದೂ ಪರಿಷತ್ ಜನತಾ ದಳ, ಕಮ್ಯುನಿಸ್ಟ್ ಪಕ್ಷ ಹೀಗೆ ಎಲ್ಲಾ ಪಕ್ಷಗಳ ಧ್ವಜಗಳನ್ನು ಅಲ್ಲಿ ಹಾರಿಸುತ್ತಿದ್ದಾರೆ. ಎಲ್ಲಾ ಸಾರ್ವಜನಿಕ ಸಭೆಗಳು ಅಲ್ಲಿ ನಡೆಯುತ್ತಿವೆ.

SRI QUAMARUL ISLAM : I am not saying about respect for the national flag. Generally I am making this statement. My request is if this controvesy if it is continued by any programme by an political party or person or group, what will happen? Naturally nobody whether Muslim or Hindu hoisted flag on a place of will tolerate worship. It is a question of law. When a case is pending in the Supreme Court, it is a matter of prejudice.

ಒಬ್ಬ ಮಾನ್ಯ ಸದಸ್ಯರು : ಸುಪ್ರೀಂ ಕೋರ್ಟಿನಲ್ಲಿ ಸ್ಪೆಷಲ್ ರಿಟ್ ಪಿಟಿಷನ್ ಅಡ್ಮಿಷನ್ನಿಗೆ ಇದೆ. ಅಲ್ಲ ಇನ್ನು ಯಾವುದೇ ಕೇಸುಗಳು ಪೆಂಡಿಂಗ್ ಇಲ್ಲ. ಮೂರು ಕೋರ್ಟುಗಳಲ್ಲಿ ನಿರ್ಣಯವಾಗಿದೆ, ಇದು ಸಾರ್ವಜನಿಕ ಮೈದಾನ ಎಂದು ಅಂತಿಮ ನಿರ್ಣಯವಾಗಿರುತ್ತದೆ. ದಯವಿಟ್ಟು ಮಾನ್ಯ ಸದಸ್ಯರು ಸಭೆಗೆ ತಪ್ಪು ಮಾಹಿತಿ ಕೊಡಬಾರದೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ. ಅದರ ಬಗ್ಗೆ ಹಿನ್ನೆಲೆಯನ್ನು ತಿಳಿದುಕೊಳ್ಳಬೇಕು.

SRI QUAMARUL ISLAM : I am just making a humble request to my BJP friends. They have a definite programme; It is there in their election manifesto and speeches. Sir, we have already requested the Government that they should handle the situation with an iron hand but if there is a failure of the Government, we are not going to keep quiet. We can protect our mosque also. We can also train out volunteers. We do not want that situation to come.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರಲ್ಲಿ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ನಮ್ಮ ಸರ್ಕಾರ ಎಲ್ಲರಿಗೂ ಒಪ್ಪುವ ರೀತಿಯಲ್ಲಿ ರಾಜ್ಯದಲ್ಲಿ ಸೌಹಾರ್ದತೆ ಮತ್ತು ಶಾಂತಿ ಕಾಪಾಡುವ ದೃಷ್ಟಿಯಿಂದ ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ ಈ ಸಮಸ್ಯೆಗೆ ಒಂದು ಪರಿಹಾರ ಕಂಡು ಹಿಡಿಯುವ ಪ್ರಯತ್ನ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಭಾವನೆಗಳನ್ನು ಉದ್ರೇಕವಾಗುವ ರೀತಿಯಲ್ಲಿ ಯಾರೂ ಸಹಿತ ಈ ವಿಷಯದಲ್ಲಿ ವ್ಯಕ್ತ ಮಾತನಾತಡದೇ ಇರುವುದನ್ನು ಒಳ್ಳೆಯದೆಂದು ನನ್ನ ಅಭಿಪ್ರಾಯವನ್ನು ನಾನು ತಮ್ಮ ಮುಂದಿಡುತ್ತಿದ್ದೇನೆ.

SRI QUAMARUL ISLAM : Mr. Speaker Sir, I want to tell you that I do not want this controversy to be continued. No one should make this issue a presting issue. It is not an issue of any political party or no-political party. As far as national flag and the respect for the same is concerned, every body has got respect for the national flag. When there is no tradition and no custom, right from 15th Aug, 1947 that national flag is to be hoisted on the place of worship, then I think all the citizens who are having faith in the Constitution, will not tolerate.

ಶ್ರೀ ಹೆಚ್.ಎನ್. ನಂಜೇಗೌಡ : ಅಲ್ಲಿ ಅವರು ಈ ಕೆಲಸ ಮಾಡಿದ್ದಾರೆ. ಪಾಕಿಸ್ತಾನದ ರಾಷ್ಟ್ರಧ್ವಜ ಹಾರಾಡುವುದು ಪತ್ರಿಕೆಯಲ್ಲಿ ಬಂದಿದೆ. ಉದಾಹರಣೆಗೆ ಸೋಮವಾರ ಪೇಟೆಯಲ್ಲಿ ಹಾರಾಡಿದೆ.

ಶ್ರೀ ಎಂ. ಶ್ರೀನಿವಾಸ್ : ಮಸೀದಿಗಳಲ್ಲ ಅವರ ಫ್ಲಾಗ್ ಹಾರಿಸುತ್ತಿಲ್ಲವೇ? ನಾವು ಹಿಂದೂಗಳಾಗಲಿ, ಕ್ರಿಶ್ಚಿಯನ್‌ರಾಗಲಿ ನೀವು ಏತಕ್ಕೆ ಫ್ಲಾಗ್ ಹಾರಿಸುತ್ತೀರೆಂದು ಕೇಳಿದ್ದೇವೆಯೇ? ನೀವು ಏತಕ್ಕೆ ಅಷ್ಟೊಂದು ಜೋರಾಗಿ ಮಾತನಾಡುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್ : ಈ ರೀತಿ ಮಾತನಾಡುವುದಕ್ಕೆ ದಯವಿಟ್ಟು ಅನುಮತಿ ಕೊಡಬಾರದು. ಅವರು ಮಸೀದಿ ಬಗ್ಗೆ ಮಾತನಾಡುವುದು ಬೇಡ, ಇವರು ದೇವಸ್ಥಾನದ ಬಗ್ಗೆ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಕಂಡುಹಿಡಿಯುತ್ತದೆ. ಮಾನ್ಯ ಸದಸ್ಯರು ಅದರ ಬಗ್ಗೆ ಉದ್ರೇಕಪಟ್ಟುಕೊಳ್ಳುವ ಅಗತ್ಯ ಇಲ್ಲ.

SRI QUAMARUL ISLAM : Iam not becoming emotional. I am just requesting, because we have got the past history. You know one of the Chief Ministers of U.P has been sentenced by the Court. No doubt he is emotinal; his feelings were there. But there was a contempt of Court case. I do not want member of this House, the respected Members of this House violate the law or instigate. The History will remain.

(INTERRUPTIONS)

ಉಪಾಧ್ಯಕ್ಷರು : ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು. ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ, ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಖಮರುಲ್ ಇಸ್ಲಾಂ ಅವರಿಗೆ ಒಂದು ಸೂಚನೆ, ಈಗಾಗಲೇ ಸರ್ಕಾರದ ಕಡೆಯಿಂದ ಇದರ ಬಗ್ಗೆ ಮನವಿ ಸಲ್ಲಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡತಕ್ಕ ಅವಶ್ಯಕತೆ ಇಲ್ಲ, ತಾವು ತಮ್ಮ ಭಾಷಣವನ್ನು ಸೀಮಿತಗೊಳಿಸಬೇಕು. ಈ ವಿಷಯವನ್ನು ಮುಂದುವರಿಸಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಶ್ರೀನಿವಾಸ್ : ಗೃಹ ಮಂತ್ರಿಗಳು ಹೇಳಿದ್ದಾರೆ. ಪುನಃ ಅದನ್ನೇ ಮಾತನಾಡುವುದು ಸರಿಯಲ್ಲ.

SRI QUAMARUL ISLAM : Mr. Speaker Sir, I do not want to go into detail, because the Hon'ble Deputy Chief Minister and also the Home Minister have assured this regard and we have got full faith in them that nothing will happen on 26th January and everything will go peaceful. Sir, peace is very much primary for us we want peace in the State as well as in the country.

Our State has to flourish and we should not make any such issue as prestige in the name of national flag or any other flag. That is why I am just not mentioning any personal name or anything. I do not want to hurt feelings of anybody and I request all friends that in this atmosphere we should work together. See how beautifully or Hon. Leader of Opposition was talking about minorities. I was very much happy when he was mentioning that they have become 40. If they talk of minorities like that, a situation may come that they may go that side. There fore must take minorities along with them. But they are not taking. You should take into confidence the people belinging to religious and linguistic minorities with this words. I thank you very much for giving me this oppostity to speak and

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಸನ್ಮಾನ್ಯ ಉಪಾಧ್ಯಕ್ಷರೇ, ರಾಜ್ಯಪಾಲರು ಮಾಡಿರತಕ್ಕ ಭಾಷಣಕ್ಕೆ ನನ್ನ ವಿರೋಧವನ್ನು ವ್ಯಕ್ತಮಾಡಿ ರಾಜ್ಯಪಾಲರ ಭಾಷಣದಲ್ಲಿ ಜನರ ಕಲ್ಯಾಣಕ್ಕಾಗಲೀ, ರಾಜ್ಯದ ಅಭ್ಯುದಯಕ್ಕಾಗಲೀ ಯಾವುದೇ ತರಹದ ರಚನಾತ್ಮಕವಾಗಿರತಕ್ಕ ಸಂಕ್ಷಿಪ್ತವಾಗಿರತಕ್ಕ ಅಂಶ ಇಲ್ಲ ಎಂದು ಹೇಳಿ, ಇದೊಂದು ಹಳೇ ಶೀಸೆಗೆ ಹೊಸ ಮದ್ಯ ಹಾಕಿದ ರೀತಿ ಈ ಭಾಷಣ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಅನುಭವವೇ?

ಶ್ರೀ ಎಲ್.ಆರ್. ಶಿವರಾಮೇಗೌಡ : ಅನುಭವ ಅಲ್ಲ ಇರುವ ಅರ್ಥವನ್ನು ಹೇಳುತ್ತಿದ್ದೇನೆ ಸ್ವಾಮಿ. ಸ್ವಾಮಿ, ರಾಜ್ಯದ ಅಭ್ಯುದಯ ಅಥವಾ ರಾಜ್ಯದ ಅಭಿವೃದ್ಧಿ ವಿಚಾರದಲ್ಲಿ ನಾವು ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ರಾಜಕೀಯ ಚಿಂತನೆ ಮಾಡತಕ್ಕದ್ದು ಬಹಳ ಅಗತ್ಯ. ಕಳೆದ ಐದು ವರ್ಷದಲ್ಲಿ ಇಲ್ಲಿ ಕೂತಿದ್ದವರು ಅಲ್ಲಿ ಕೂತಿದ್ದಾರೆ. ಬಹಳ ಬದಲಾವಣೆಯನ್ನು ಈ ಒಂದು ಸದನದಲ್ಲಿ ನಾವು ನೋಡುತ್ತಿದ್ದೇವೆ. ಆದರೆ 24 ಇದ್ದವರು 116 ಆಗಿ, 4 ಇದ್ದವರು 40 ಆಗಿ, 177 ಇದ್ದವರು ನಾವು 13 ಆಗಿದ್ದೇವೆ. ನಾವು ಯಾವುದೇ ತರಹದ ಒಂದು ಪಕ್ಷದ ಬಾವುಟ ಯಾವುದೇ ಚಿಹ್ನೆ ಇಲ್ಲದೆಯೇ ಸ್ವಶಕ್ತಿಯಿಂದ ಈ ಸದನಕ್ಕೆ ಬಂದಿರತಕ್ಕ ಸದಸ್ಯರುಗಳು. ನೀವು ಮೆಚ್ಚಬೇಕು ವಾಟಾಳ್ ನಾಗರಾಜ್ ಅವರೇ

ಶ್ರೀ ವಾಟಾಳ್ ನಾಗರಾಜ್ : ಅಂದರೆ ಗೊತ್ತಿಲ್ಲದೆ ಓಟು ಹಾಕಿದ್ದಾರೆ. ಬಹಳ ಹೋರಾಟ ಮಾಡಿದರು ಕಾಂಗ್ರೆಸ್ ಟಿಕೆಟ್‌ಗೋಸ್ಕರ. ಕಾಂಗ್ರೆಸ್ಸಿಗೆ ಅರ್ಜಿ ಹಾಕಿದ್ದರು. ಟಿಕೆಟ್ ಕೊಡಲಿಲ್ಲ, ಗುರುತು ಇಲ್ಲದೆ ನಿಂತರು.

ಶ್ರೀ ಎಲ್.ಆರ್. ಶಿವರಾಮೇಗೌಡ : ನನ್ನ ಸ್ನೇಹಿತರಿಗೆ ಹೇಳುತ್ತೇನೆ. ನಾವು ಕಾಂಗ್ರೆಸ್ ಟಿಕೆಟ್‌ಗೆ ಅರ್ಜಿ ಹಾಕಲಿಲ್ಲ ಎಂಬ ಮಾತನ್ನು ಹೇಳಲಿಲ್ಲ. ಒಬ್ಬ ಶಾಸನಸಭೆ ಸದಸ್ಯನಾಗಿ ಕೆಲಸ ಮಾಡಬೇಕಾದರೆ ಯಾವುದೇ ಒಂದು ಪಕ್ಷ ಬೇಕಾಗುತ್ತದೆ. ಸರ್ಕಾರ ರಚನೆಯಾದರೆ ಆ ಸರ್ಕಾರದಿಂದ ಹೆಚ್ಚು ಕೆಲಸಗಳನ್ನು ಈ ಕ್ಷೇತ್ರಕ್ಕೆ ಮಾಡಬೇಕು ಎಂದು ದೃಷ್ಟಿಯಿಂದ ಒಂದು ಪಕ್ಷ, ಒಂದು ಸರ್ಕಾರ ಅಗತ್ಯ. ಆದರೆ ನಮಗೆ ಟಿಕೆಟ್ ಕೊಡದೇ ಇದ್ದರೂ ಸಹ ಗೆ... ಬಂದಿದ್ದೇವಲ್ಲಾ. ...ಮ್ಮವರು

ಟಿಕೆಟ್ ತೆಗೆದುಕೊಂಡವರು ಎಷ್ಟು ಜನರು ಬಂದರು ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು.

ಶ್ರೀ ರಾಮಲಿಂಗಾರೆಡ್ಡಿ : ಪಕ್ಷೇತರರಾಗಿದ್ದ 5 ವರ್ಷದೊಳಗೆ ನಮ್ಮ ಸರ್ಕಾರದಲ್ಲಿ ಏನೇನು ಸವಲತ್ತುಗಳು ಬೇಕೋ ಅದನೆಲ್ಲಾ ಮಾಡಿಕೊಂಡಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇವತ್ತ ಜನತಾ ದಳದವರು ಕಣ್ಣು ತೆರೆಯಬೇಕಾದ....

ಉಪಾಧ್ಯಕ್ಷರು : ಒಬ್ಬ ಸದಸ್ಯರು ಮಾತನಾಡತಕ್ಕ ಸಂದರ್ಭದಲ್ಲಿ ಯಾರೂ ಮಾತನಾಡತಕ್ಕದ್ದಲ್ಲ. ದಯವಿಟ್ಟು ತಾವು ಕುಳಿತುಕೊಳ್ಳಿ. ಶಿವರಾಮೇಗೌಡರೇ ತಾವು ಮಾತನಾಡಿ.

ಶ್ರೀ ರಾಮಲಿಂಗಾರೆಡ್ಡಿ : ಅವರನ್ನು ಕೇಳಿಬಿಟ್ಟೇ ಮಾತನಾಡುತ್ತೇನೆ.

ಉಪಾಧ್ಯಕ್ಷರು : ಅವರು ಈಲ್ಡ್ ಆದರೆ ಮಾತನಾಡಿ.

ಶ್ರೀ ರಾಮಲಿಂಗಾ ರೆಡ್ಡಿ : ಅವರು ಪಕ್ಷೇತರರಾಗಿದ್ದರೂ 5 ವರ್ಷ ನಮ್ಮ ಪಕ್ಷದ ಸಹಸದಸ್ಯರಾಗಿ ಅವರ ಕ್ಷೇತ್ರಕ್ಕೆ ಏನೇನು ಅನುಕೂಲಗಳು ಬೇಕೋ ಅದನ್ನೆಲ್ಲಾ ಮಾಡಿಸಿಕೊಂಡಿದ್ದಾರೆ. ಅದಕ್ಕೇ ಅವರು ಗೆದ್ದುಬಂದಿರುವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಮನೆಯ ಪ್ರತಿಯೊಬ್ಬ ಸದಸ್ಯರಿಗೂ ಹಕ್ಕಿದೆ ಎಂಬುದನ್ನು ಮರೆಯಬಾರದು ರಾಮಲಿಂಗಾರೆಡ್ಡಿಯವರೆ ಈ ಸದನದ ಸದಸ್ಯರಾಗಿರತಕ್ಕ ಪ್ರತಿಯೊಬ್ಬರಿಗೂ ಸಹ ಈ ರಾಜ್ಯ ಸರ್ಕಾರದಿಂದ ಬರತಕ್ಕ ಸವಲತ್ತುಗಳನ್ನು ಪಡೆಯತಕ್ಕ ಹಕ್ಕಿದೆ. ಆ ಹಕ್ಕಿನ ಪ್ರಕಾರ ನನ್ನ ಕ್ಷೇತ್ರಕ್ಕೆ ಕೆಲಸ ಮಾಡಿಸಿರ್ದೇನೆಯೇ ಹೊರತು ಯಾವುದೇ ಮುಲಾಜಿಗೆ ಮಾಡಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಆದರೆ ಒಂದು ನೆನೆಸಿಕೊಳ್ಳಬೇಕು ಕಾಂಗ್ರೆಸ್ಸಿನವರು. ನಮ್ಮಿಂದ ಸಹಾಯ ಪಡೆದುಕೊಂಡರಲ್ಲಾ ಅದನ್ನು ಪಡೆದೂ ಕೈ ಕೊಟ್ಟರಲ್ಲ ನಮಗ ಅದನ್ನು ನೆನೆಸಿಕೊಳ್ಳಬೇಕು ನೀವು. ನಾವು ಅದನ್ನು ಮರೆತಿಲ್ಲ. ಇವತ್ತು ನೀವು ಕರೆದರೂ ಬರುವುದಿಲ್ಲ. ಅದಕ್ಕೋಸ್ಕರ ಅರ್ಥ ಮಾಡಿಕೊಳ್ಳಬೇಕು. ತಾವು ರಾಜಕೀಯ ತುಲನೆ ಮಾಡಬೇಕಾಗುತ್ತದೆ. ಇವತ್ತು ಒಂದು ಶೋಚನೀಯವಾದ ಸಂಗತಿ ಎಂದರೆ 45 ವರ್ಷಗಳಿಂದ ಈ ರಾಷ್ಟ್ರದಲ್ಲಿ ಅಧಿಕಾರವನ್ನು ಮಾಡತಕ್ಕ ಒಂದು ಪಕ್ಷ ಹೀನಾಯವಾಗಿ ಸೋಲನ್ನು ಅನುಭವಿಸಬೇಕಾದರೆ ಏನು ಕಾರಣ ಎಂಬ ಬಗ್ಗೆ ಚರ್ಚೆಯಾಗಬೇಕು. ಏಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ನಾವು ಚರ್ಚೆ ಮಾಡುವ ಸಂದರ್ಭದಲ್ಲಿ ಇವತ್ತು ನೀವೂ ಸಹಿತ ಹೊಸದಾಗಿ ಅಧಿಕಾರಕ್ಕೆ ಬಂದಿರುವವರು ತಪ್ಪು ಮಾಡಿದರೆ ಇದೇ ಶಿಕ್ಷೆಯಾಗುತ್ತದೆ. ಈಗಾಗಲೇ ಆಗಿದೆ. ಅದು ಆಗಬಾರದು ಎಂಬುದಕ್ಕೆ ಹೇಳಇದೆ. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಆ ಪಕ್ಷದಲ್ಲಿ ನಾನೂ ಒಬ್ಬ ಸಹಸದಸ್ಯನಾಗಿದ್ದೆ. ಬಾಯಿ ಬಿಟ್ಟು ಮಾತನಾಡುವುದಕ್ಕೆ ಆಗದೆ ಇರತಕ್ಕ ಸಂದರ್ಭದಲ್ಲಿ ಇವರ ಕಚ್ಚಾಟ ನೋಡಲಾರದೆ ಜನ ಇವತ್ತು ತೀರ್ಪು ಕೊಟ್ಟಿದ್ದಾರೆಯೇ ಹೊರತು, ಆ ತೀರ್ಪಿಗೆ ನೀವು ಬೆನ್ನು ತಟ್ಟಿಕೊಳ್ಳಬೇಕಾದ ಅಗತ್ಯ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಅವರು ಮಾತನಾಡಬೇಕಾಗಿರುವುದು ರಾಜ್ಯಪಾಲರ ಭಾಷಣದ ಮೇಲೆ. ದಯಮಾಡಿ ಅವರಿಗೆ ಎಚ್ಚರಿಕೆ ಕೊಡಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕುಳಿತುಕೊಂಡಿಲ್ಲ. ನಾನು ಕುಳಿತುಕೊಂಡರೆ ಅವರು ಮಾತನಾಡಬಹುದು. ದಯಮಾಡಿ ನನ್ನ ಮಿತ್ರರಲ್ಲಿ

ಕೇಳುವುದು ಏನೆಂದರೆ, ನಾನು ಕುಳಿತುಕೊಂಡರೆ ಮಾತನಾಡಿ. ಇಲ್ಲದೇ ಹೋದರೆ, ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಮಾತನಾಡಲಿ. ನನಗೆ ತೊಂದರೆ ಕೊಡಬೇಡಿ. ನನಗೆ ಕೊಟ್ಟಿರುವ ಸಮಯದಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬೇಕಾಗುತ್ತದೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಿಮ್ಮ ಹಾಗೆ ಅವರೂ ಸೋಲು ಕಾಣಬಾರದು.

ಉಪಾಧ್ಯಕ್ಷರು : ನೀವು ಮಾತನಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈ ಒಂದು ಸರ್ಕಾರಕ್ಕೆ 5 ವರ್ಷಗಳ ಕಾಲಕ್ಕೆ ಜನ ಬೆಂಬಲಕೊಟ್ಟು ಆಶೀರ್ವಾದ ಕೊಟ್ಟು ಕಳುಹಿಸಿದ್ದಾರೆ. ಜನರ ಕಲ್ಯಾಣವನ್ನು 5ವರ್ಷಗಳ ಕಾಲ ಸರಿಯಾಗಿ ಅವರು ಮಾಡಲಿ. ತಿರುಗಿ ಕಿತ್ತಾಡಿತಕ್ಕಂತಹ ಪರಿಸ್ಥಿತಿಗೆ ಬರಬೇಡಿ ಎಂದು ಅವರಿಗೆ ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಆದರೆ ನೀವು ಏಕೆ ಹೀಗೆ ಆಡುತ್ತಿದ್ದೀರಿ. "ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ" ಎಂದು ನಮ್ಮ ಕಡೆ ಜನ ಹೇಳುತ್ತಾರೆ. ನಾವೂ ನಿಮ್ಮ ಜೊತೆ ಇದ್ದವರೇ.

ಶ್ರೀ ಟಿ.ಬಿ. ಜಯಚಂದ್ರ : ಜಗಳ ಮಾಡುವುದಾದರೆ ಅವರ ಜೊತೆಯಲ್ಲಿಯೇ ಹೋಗಿ ಕುಳಿತುಕೊಳ್ಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಎಲ್ಲಿಗೆ ಹೋಗಬೇಕೆಂಬುದನ್ನು ನಮ್ಮ ಒಕ್ಕೂಟದಲ್ಲಿ ತೀರ್ಮಾನ ಮಾಡುತ್ತೇವೆ. ನೀವು ಏಕೆ ಆತುರ ಮಾಡುತ್ತಿದ್ದೀರಿ. ಇವತ್ತು ಅವರಿಗೆ ಏತಕ್ಕೆ ಇಷ್ಟೊಂದು ಹೀನಾಯ ಸೋಲು ಆಯಿತು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಜನತಾ ದಳ ಸರ್ಕಾರ, ಜನತೆಗೆ ಅಧಿಕಾರವನ್ನು, ಅವರ ಅಭಿವೃದ್ಧಿಗೆ ನೇರವಾಗಿ ಕೆಲಸ ಮಾಡಬೇಕೆಂದ ಈ ಸಂದರ್ಭದಲ್ಲಿ ಹೇಳುವುದುಕ್ಕೆ ಇಷ್ಟಪಡುತ್ತೇನೆ. ಆದರೆ ಒಂದು ಪ್ರಾರಂಭದಲ್ಲೇ ನಿಮ್ಮಲ್ಲೇ ಬಹಳ ವ್ಯತ್ಯಾಸಗಳು ನಡೆದಿವೆ. ಇವತ್ತು ನಮ್ಮ ಸನ್ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾಗುತ್ತಾರೆ ಎನ್ನುವ ಸಂದರ್ಭದಲ್ಲಿ ನಾವೆಲ್ಲರೂ ಸಹಿತ ಬಹಳ ಸಂತೋಷಪಟ್ಟವರಲ್ಲಿ ನಾನೂ ಒಬ್ಬ. ಏಕೆಂದರೆ ಇದುವರೆಗೂ ಈ ಮನೆಗೆ ಪ್ರವೇಶ ಮಾಡಿದ ಮುಖ್ಯಮಂತ್ರಿಗಳ ಪೈಕಿ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಸೂಟು-ಬೂಟುಧಾರಿಗಳೇ. ಆದರೆ ಸೂಟು-ಬೂಟು, ಅದರ ರುಚಿನೇ ಗೊತ್ತಿಲ್ಲದ ರಾಗಿ ಮುದ್ದೆ, ಕೀರೆ ಸೊಪ್ಪಿನ ಒಬ್ಬ ಗ್ರಾಮೀಣ ಪ್ರದೇಶದ ಮಣ್ಣಿನ ಮಗ ಇವತ್ತು ಮುಖ್ಯ ಮಂತ್ರಿ ಆದರಲ್ಲಾ ಎನ್ನುವುದು ಒಂದೇ ಒಂದು ಸಂತೋಷ; ಅವರು ಯಾವುದೇ ಪಕ್ಷಕ್ಕೆ ಸೇರಿರಲಿ. ನಾನು ಈ ಸಂದರ್ಭದಲ್ಲಿ ಹೇಳುವುದಾದರೂ ಇಷ್ಟೆ. ಚಿಕ್ಕದಾದ ಚೊಕ್ಕವಾದ ಸಂಪುಟವನ್ನು ರಚನೆ ಮಾಡುತ್ತಾರೆ ಎಂದು ತಿಳಿದುಕೊಂಡಿದ್ದೆವು. ಆದರೆ ಇವರು ಏನು ಮಾಡಿದರು? ಜಂಬೋ ಜೆಟ್ ಏರ್ ಬಸ್ಸು ಅಲ್ಲ. ಹೋಗಲಿ ಜಂಬೋ ಜೆಟ್ ಮಾಡಿದ ಮೇಲೆ ಆ ಪಕ್ಷದಲ್ಲಿ ಏನಾದರೂ ಸಮಾಧಾನ ಇದೆಯೇ? ಅದೂ ಇಲ್ಲ. ಈವತ್ತು ಅತೃಪ್ತಿ ಎದ್ದು ಕಾಣುತ್ತದೆ. ಪತ್ರಿಕೆಗಳಲ್ಲಿ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾಜಿ ರೆವಿನ್ಯೂ ಸಚಿವರು ನನ್ನ ಪಕ್ಕದಲ್ಲೇ ಇದ್ದಾರೆ. ಇವರು ಈ ಸರ್ಕಾರ ಇಂತಹ ಸರ್ಕಾರ ಎಂದೆಲ್ಲಾ ಗುಣಗಾನ ಮಾಡುತ್ತಿದ್ದಾರೆ. ಗುಣಗಾನ ಮಾಡಲಿ. ಆದರೆ ನಮ್ಮ ಹತ್ತಿರವೂ ಗುಣಗಾನ ಮಾಡಿ ಏನೇನೋ ಮಾಡಿಸಿಕೊಂಡು ಬಿಟ್ಟರು ಅವರ ಕ್ಷೇತ್ರಕ್ಕೆ. ಅದೇ ಟೋಪಿಯನ್ನು ಇವರಿಗೂ ಹಾಕುತ್ತಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಮೊದಲೇ ಸ್ಪಷ್ಟ ಮಾಡಿದ್ದೇನೆ. ನಾನು ಒಂದು ತಾಲ್ಲೂಕಿನ ಶಾಸಕನಾದ ಮೇಲೆ ಈ ಮನೆಯ ಒಬ್ಬ ಸದಸ್ಯನಾದ

ಮೇಲೆ ಯಾರಿಗೆ ಗುಣಗಾನ ಮಾಡತಕ್ಕಂತಹದ್ದು, ಅವರು ಒಳ್ಳೆಯವರಿದ್ದರೆ ಗುಣಗಾನ ಮಾಡುತ್ತೇನೆ. ಅವರು ಈವತ್ತು ಚಿಕ್ಕ ಸಂಪುಟ ಮಾಡಲಿಲ್ಲ ಎಂದು ನೇರವಾಗಿ ಹೇಳುತ್ತಿದ್ದೇನೆ. ಅದರ ಪಕ್ಷದಲ್ಲಿ ಅತೃಪ್ತಿ ಇದೆ ಎಂದು ನೇರವಾಗಿ ಹೇಳುತ್ತಿದ್ದೇನೆ. ನೀವು ಇದು ಗುಣಗಾನ ಅಲ್ಲ. ಗುಣಗಾನ ಮಾಡಿದ್ದೀರಿ ಎಂಬುದನ್ನು ನಾನೂ ನಿಮ್ಮ ಜೊತೆಯಲ್ಲಿದ್ದುಕೊಂಡು ನೋಡಿಲ್ಲವೇ ಸ್ವಾಮಿ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳಿದ್ದೇನೆ. ಅದರಲ್ಲೇನೂ ಹಿಂದು ಮುಂದು ಇಲ್ಲ. ಇವರ ತರಹ ಕಾಂಗ್ರೆಸ್‌ನವರನ್ನು ಗುಣಗಾನ ಮಾಡುವ ಪ್ರಮೇಯ ಬಂದಿಲ್ಲ. ಈಗ ಅವರ ಕ್ಷೇತ್ರಕ್ಕೆ ಏನೇನು ಕೆಲಸಗಳನ್ನು ಕಾಂಗ್ರೆಸ್ ಸರ್ಕಾರದಿಂದ ಮಾಡಿಸಿಕೊಂಡಿದ್ದಾರೆ ಎಂಬುದನ್ನು ಲಿಸ್ಟ್ ಮಾಡೋಣ. ಮಾಜಿ ರೆವಿನ್ಯೂ ಸಚಿವರು ಇಲ್ಲೇ ಇದ್ದಾರೆ. ಅವರ ಇಲಾಖೆಯೊಬ್ಬರದನ್ನೇ ಮಾಡೋಣ. ಆಮೇಲೆ ಶ್ರೀ ರಾಮಲಿಂಗರೆಡ್ಡಿಯವರದ್ದು. ಮಿಕ್ಕ ಸಚಿವರು ಮಾಡಿಕೊಟ್ಟಿರುವ ಕೆಲಸಗಳ ಬಗ್ಗೆ ನೋಡೋಣ. ಆಮೇಲೆ ಶ್ರೀಮಾನ್ ನಾಗೇಗೌಡರು ಏನೇನು ಮಾಡಿಕೊಟ್ಟಿದ್ದಾರೆ ಎಂಬುದರ ಬಗ್ಗೆ ಸಮಗ್ರವಾಗಿ ತನಿಖೆ ನಡೆದು ಹೋಗಿಬಿಡಲಿ. ಸದನದ ಸಮಿತಿಯ ಮಾಡಿ. ನಾನು ಅಲ್ಲಿಗೆ ಬಂದು ಸಾಕ್ಷಿ ಹೇಳುವುದಕ್ಕೆ ತಯಾರಿದ್ದೇನೆ. ಅವರು ಅತ್ಯಂಥ ಪರಮಮಿತ್ರರಲ್ಲಿ ಒಬ್ಬರು. ಏಕೆಂದರೆ ನನಗೆ ಬಹಳ ನೋವಾಗಿದೆ; ಬಹಳ ಹಿಂದೆ ಹೊರಟು ಹೋಗಿಬಿಟ್ಟರಲ್ಲಾ ಎಂದು ನನಗೆ ನೋವಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮುಂದಕ್ಕೆ ಬರುತ್ತೇವೆ, ಸ್ವಲ್ಪ ತಡೆಯಿರಿ.

(ಗೊಂದಲ)

ಸನ್ಮಾನ್ಯ ಸಭಾಧ್ಯಕ್ಷರೆ, ನನ್ನ ಮಿತ್ರರಿಗೆ ಒಂದು ಕಿವಿ ಮಾತನ್ನು ಹೇಳುವಂಥಾದ್ದು ಇದೆ. ನಾಗಮಂಗಲದಲ್ಲಿ ಜೀವನ ಮಾಡಲಿಕ್ಕಾಗದೆ, ಬೆಂಗಳೂರಿನಲ್ಲಿರತಕ್ಕ ಪ್ರತಿಷ್ಠಿತ ಪ್ರತಿಯೊಂದು ಹೋಟೆಲ್‌ನಲ್ಲಿ ಇವತ್ತು ಲೋಟ ತೊಳೆಯತಕ್ಕಂತಹವರು ನಾಗಮಂಗಲದವರು. ಅವರ ಅಭಿವೃದ್ಧಿಗೋಸ್ಕರ, ಕೆಲಸ ಮಾಡಬೇಕಾದುದು ಯಾವುದೇ ಸರ್ಕಾರ ಇರಲಿ, ಆ ಸರ್ಕಾರದ ಹೊಣೆ, ನನ್ನ ಒಬ್ಬನ ವ್ಯಯಕ್ತಿಕವಾದ ಹೊಣೆಯೇನಲ್ಲ. ನಾನು ಯಾವುದೇ ವೈಯಕ್ತಿಕವಾಗಿ ಕೆಲಸ ಮಾಡಿಸಿಕೊಂಡಿಲ್ಲ. ನಾನು ಮಾಡಿಸಿಕೊಂಡಿದ್ದರೆ, ನನ್ನ ತಾಲ್ಲೂಕಿಗೆ; ಈಗಲೂ ಕೇಳುತ್ತೇನೆ. ಅವರು ಮಾಡಬೇಕು. ಅದು ಅವರ ಕರ್ತವ್ಯ.

6.25 ಪಿ.ಎಂ.

ಆದುದರಿಂದ ಈಗ ಮಂಡ್ಯ ಜಿಲ್ಲೆಗೆ ಹಿಂದಿನ ಮುಖ್ಯಮಂತ್ರಿಗಳು ಮಾಡಿರುವಂತಹ ಅನ್ಯಾಯ ಯಾವ ಕಾಲದಲ್ಲೂ ಆಗಿರಲಿಲ್ಲ. ಏಕೆ ಹೇಳುತ್ತಿದ್ದೇನೆಂದರೆ, ದೇವೇಗೌಡರು ಮುಖ್ಯಮಂತ್ರಿ ಆಗುತ್ತಾರೆಂದು, ದೇವೇಗೌಡರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಈ ರಾಜ್ಯದ ಒಬ್ಬ ಉಪಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ಮುಂದೆ ಮುಖ್ಯಮಂತ್ರಿಗಳು ಆಗುತ್ತಾರೆಂದು, ದೇವೇಗೌಡರು ಮಂಡ್ಯ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ ಈ ರಾಜ್ಯದ ಒಬ್ಬ ಉಪಮುಖ್ಯಮಂತ್ರಿಯಾಗಿ ಈ ರಾಜ್ಯಕ್ಕೆ ಮುಂದೆ ಮುಖ್ಯಮಂತ್ರಿಗಳು ಆಗುತ್ತಾರೆ ಎನ್ನುತಕ್ಕಂಥ ಮಾದೇಗೌಡರ ಮುಖಂಡತ್ವವನ್ನು ಮೂಲೆಗೆ ಕೂರಿಸಿ ಇವತ್ತು ದೇವೇಗೌಡರಿಗೆ ಫಲ ಕೊಡಿಸಿದ್ದಕ್ಕೆ ಸ್ವಾಮಿ ಒಂದು ಮಂತ್ರಿ ಬೇಡವೇ ನಮ್ಮ ಯೋಗ್ಯತೆಗೆ, ಮಂಡ್ಯಾ ಜಿಲ್ಲೆಗೆ. ಅದೂ ಅರ್ಧ ಮಂತ್ರಿ ಕೊಟ್ಟು ನಮ್ಮ ಮರ್ಯಾದೆ ಕಳೆದಿದ್ದಾರೆ. ಆದ್ದರಿಂದ ನಾನು ಈ ಸದನದ ಮೂಲಕ ವಿನಂತಿ ಮಾಡುತ್ತೇನೆ. ನೀವು ಒಂದು....

ಶ್ರೀ ವಾಟಾಳ್ ನಾಗರಾಜ್ : ಮಂಡ್ಯ ಜಿಲ್ಲೆಯ ಜಯರಾಮ ಅವರು ಸಚಿವಸಂಪುಟದ ದೊಡ್ಡ ಸಚಿವರು. ಅದರಲ್ಲಿ ಏನೂ ಎರಡನೆಯ ಅಭಿಪ್ರಾಯವೇ ಇಲ್ಲ. ಅವರು ಸಚಿವ ಸಂಪುಟದ ದರ್ಜೆ ಸಚಿವರು. ಅದರಲ್ಲಿ ಏನೂ ಅನುಮಾನ ಇಲ್ಲ. ಬೇಕಾದರೆ ಇನ್ನೂ ನಾಲ್ಕು ಜನ ಮಂತ್ರಿಗಳನ್ನು ನೀವು ಕೇಳಿಕೊಳ್ಳಿ. ಆದರೆ ಆ ವಿಚಾರ ಬೇರೆ. ಆದರೆ ನಮಗೆ ಅರ್ಧ ಮಂತ್ರಿ ಕೊಟ್ಟರು ಎಂದು ಹೇಳಿದರೆ, ಅರ್ಧ ಎಂದು ಹೇಳಿದರೆ ಏನು ಅರ್ಥ?

ಶ್ರೀ ಬಸವರಾಜ ರಾಯರೆಡ್ಡಿ : ಮಿನಿಸ್ಟರ್ ಆಫ್ ಸ್ಟೇಟ್ ಎಂದರೆ ಅರ್ಧ ಮಂತ್ರಿಗಳೇ ಹೇಗೆ ಎಂದು ಸ್ವಲ್ಪ ಗೊತ್ತಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ಅರ್ಧ ಮಂತ್ರಿ ಎಂದು ಹೇಳಿದರೆ ನನಗೂ ಅನುಮಾನ ಬಂದಿತ್ತು. ನಮ್ಮ ಸ್ನೇಹಿತರನ್ನು ಕೇಳಿದೆ. ಅವರು ಸಚಿವಸಂಪುಟ ದರ್ಜೆಯ ಸಚಿವರು. ಆದ್ದರಿಂದ ಕೊಟ್ಟಿದ್ದಾರೆ. ಶಿವರಾಮೇಗೌಡರೇ, ಇನ್ನೂ 4 ಬೇಕು ಎಂದು ಬೇಕಾದರೆ ಕೇಳಿ. ಅವರು ಕೊಟ್ಟರೆ ತೆಗೆದುಕೊಳ್ಳಿ. ನಮ್ಮದು ಏನೂ ಅಭ್ಯಂತರ ಇಲ್ಲ.

ಶ್ರೀ ರಮಾನಾಥ ರೈ : ಆ ಇಲಾಖೆ ಆಗ ರಾಜ್ಯ ಸಚಿವ ಖಾತೆಯಲ್ಲಿ ಇತ್ತು. ಹೇಗೋ ಕ್ಯಾಬಿನೆಟ್ಟಾಗಿ ಪರಿವರ್ತನೆ ಮಾಡಿದರು. ಅದರ ಲೆಕ್ಕಾಚಾರಕ್ಕೋ ಏನೋ ಅರ್ಧ ಎಂದು ಹೇಳಿದರು. ಅದರಲ್ಲಿ ತಪ್ಪು ಏನೂ ಇಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಂಡ್ಯ ಜಿಲ್ಲೆ ಹಿಂದೆ ಬಹಳ ಹೆಸರುವಾಸಿಯಾಗಿರತಕ್ಕಂತಹ ಜಿಲ್ಲೆ. ಮಂಡ್ಯಾದಿಂದ ಹಿಡಿದು ಇಂಡಿಯಾವರೆಗೂ ಹೆಸರು ಮಾಡಿರತಕ್ಕ ಜಿಲ್ಲೆ ನಮ್ಮದು.

ಶ್ರೀ ವಾಟಾಳ್ ನಾಗರಾಜ್ : ಅದು ಹೇಗೆ?

ಶ್ರೀ ಎಲ್.ಆರ್. ಶಿವರಾಮೇಗೌಡ : ಅದನ್ನು ಡೆಲ್ಲಿಯಲ್ಲಿ ಹೋಗಿ ಕೇಳಿ. ಇಲ್ಲಿ ಏಕೆ ಕೇಳುತ್ತೀರಿ? ಏಕೆ ನಾನು ಹೇಳುತ್ತಿದ್ದೇನೆ ಎಂದರೆ, ಅಂತಹ ಒಂದು ಮುತ್ಸದ್ದಿ ರಾಜಕಾರಣ ಇದ್ದಂಥ ಕೆ.ವಿ. ಶಂಕರೇಗೌಡರು, ಹೆಚ್.ಕೆ. ವೀರಣ್ಣಗೌಡರು ಇದ್ದಂತಹ ಒಂದು ಜಿಲ್ಲೆಗೆ, ಕಳೆದ ಸಾರಿ ಉಪಮುಖ್ಯಮಂತ್ರಿಗಳು, ಮಂತ್ರಿಗಳು, ಮೂರು ಸ್ಥಾನಗಳನ್ನು ಹೊಂದಿದ್ದಂತಹ ನಮ್ಮ ಜಿಲ್ಲೆಗೆ ಕೇವಲ ಗಣಿ ಮತ್ತು ಭೂವಿಜ್ಞಾನವನ್ನು ಕೊಟ್ಟಿದ್ದೀರಿ. ಈಗ ನೀವು ಅದನ್ನು ಸ್ಟೇಟ್ ಮಿನಿಸ್ಟರ್ ಅಥವಾ ಕ್ಯಾಬಿನೆಟ್ ಮಿನಿಸ್ಟರ್ ಮಾಡಿದ್ದೀರಿ. ಅದು ನಮಗೆ ಸರಿಯಿಲ್ಲ, ನಮಗೆ ಮುಂದೆ ಕುಳಿತಿದ್ದೀರಲ್ಲಾ ದಿಗ್ಗಜಿಗರುಗಳು ಆ ಯಾವುದಾದರೂ ಖಾತೆಯನ್ನ್ ಕೊಟ್ಟು ನಮ್ಮ ಮಂಡ್ಯ ಜಿಲ್ಲೆಯವರನ್ನು ತೃಪ್ತಿ ಪಡಿಸಬಹುದಾಗಿತ್ತು ಎನ್ನುವ ಮಾತನ್ನು ತಮಗೆ ತಿಳಿಸುತ್ತಿದ್ದೇನೆ. ಬಹುಶಃ ತಮಗೆ ಬಹಳ ಸಹಾಯವಾಗುತ್ತದೆ ಶಿವಕುಮಾರ್‌ರವರೇ. ತಾವು ಏನೂ ನಮಗೆ ವ್ಯಕ್ತ ಮಾಡುತ್ತಾ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಪರ ಮಾತನಾಡಿದರೆ ಯಾರೂ ಮಂತ್ರಿಗಳು ಆಗುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅದೇನೂ ತೊಂದರೆ ಇಲ್ಲ. ನಮ್ಮ ಪರ ವಹಿಸಿದವರೇ ಯಾವಾಗಲೂ ಮಂತ್ರಿಗಳಾಗುತ್ತಾರೆ ಎಂಬುದನ್ನು ತಿಳಿದುಕೊಳ್ಳಿ. ಈ ಸದನದಲ್ಲಿ ಆ ಅವಕಾಶ ಬಂದೇ ಬರುತ್ತದೆ, ನೀವ ಆ ಮಾತು ಹೇಳಬೇಕಾಗುತ್ತದೆ ಜ್ಞಾಪಕದಲ್ಲಿ ಇಟ್ಟುಕೊಳ್ಳಿ. ಇವತ್ತು ಸರ್ಕಾರ ರಚನೆ ಆಗಿದೆ. ಸರ್ಕಾರ ರಚನೆಯಾದ ಮೇಲೆ ಬಹಳಷ್ಟು ಜನ ಗೆಳೆಯರು ಈ ರಾಜ್ಯದಲ್ಲಿ ನಡೆದಿರತಕ್ಕ ದಾಂಧಲೆಗಳ ಬಗ್ಗೆ, ಕೊಲೆಗಳ ಬಗ್ಗೆ ಬಹಳಷ್ಟು ಚರ್ಚೆ ಮಾಡಿದರು.

ಇವತ್ತು ಚುನಾವಣೆಗಳು ನಡೆಯತಕ್ಕಂತಹ ಸಂದರ್ಭಗಳಲ್ಲಿ ಕೊಲೆಗಳು ಆಗತಕ್ಕಂಥಹದ್ದು ದಾಂಧಲೆಗಳು ಆಗತಕ್ಕದ್ದನ್ನು ನಾವು ಬಹಳ ದಿವಸದಿಂದ ನೋಡಿದ್ದೇವೆ. ಸನ್ನಿವೇಶಗಳು ಅಂತಹ ಸಂದರ್ಭದಲ್ಲಿ ಬರುತ್ತದೆ, ಆಗುತ್ತದೆ. ಆದರೆ ಚುನಾವಣೆ ನಡೆದ ಮೇಲೆ ಸರ್ಕಾರ ಹೊಸದಾಗಿ ರಚನೆ ಆದಮೇಲೆ ಇವತ್ತು ದಾಂಧಲೆಗಳು ನಡೆಯತಕ್ಕದ್ದು ನೋಡಿದರೆ ಬಹುಶಃ ಪ್ರಪ್ರಥಮವಾಗಿ ನೀವು ಹೆಜ್ಜೆ ತಪ್ಪುತ್ತಾ ಇದ್ದೀರಿ, ಇದಕ್ಕೆ ಬಿಗಿ ಹಾಕಬೇಕು ಎನ್ನತಕ್ಕದ್ದನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಇಚ್ಚೆಪಡುತ್ತೇನೆ. ವಿಧಾನಸೌಧದಲ್ಲಿ ಮುಖ್ಯ ಮಂತ್ರಿಗಳು ಪ್ರಮಾಣವಚನವನ್ನು ಮಾಡತಕ್ಕ ಸಂದರ್ಭದಲ್ಲಿ ನಡೆದಿರತಕ್ಕ ದಾಂದಲೆ ಬಗ್ಗೆ ಕೂಡಾ ಮುಖ್ಯಮಂತ್ರಿಗಳು ಮತ್ತು ಗೃಹಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರವನ್ನು ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನೂ ಕೂಡಾ ತಮ್ಮ ಮೂಲಕ ಒತ್ತಾಯ ಮಾಡುತ್ತೇವೆ. ಅವರು ಯಾರೇ ಇರಲಿ. ಕೆಲವು ಸಂದರ್ಭದಲ್ಲಿ ಮಂಡ್ಯದವರು ಬಂದು ಗಲಾಟೆ ಮಾಡಿದರು ಎನ್ನತಕ್ಕಂತಹ ವಿಚಾರವನ್ನು ನಮಗೆ ಬಂದು ಕೇಳಿದ್ದಾರೆ. ಕೆಲವು ಕಡೆ ಹಾಸನದವರು ಬಂದು ಗಲಾಟೆ ಮಾಡಿದರು ಎನ್ನತಕ್ಕಂತಹ ಮಾತನ್ನು ಕೇಳುತ್ತಿದ್ದಾರೆ. ಯಾರು ಮಾಡಿದರು ಎಂಬುದು ಸಾಬೀತು ಆಗಬೇಕು. ಸರ್ಕಾರ ರಚನೆ ಆಗಿ 25 ದಿವಸಗಳು ಉರುಳಿದರೂ ಮುಖ್ಯಮಂತ್ರಿಗಳು ಪ್ರಮಾಣವಚನ ಸ್ವೀಕಾರ ಮಾಡಿ ಹೆಚ್ಚು ಕಡಿಮೆ 20 ದಿವಸ ಆಯಿತು. ಇಷ್ಟು ದಿವಸ ಆಗಿದ್ದರೂ ಸಹಿತ ಈ ರಾಜ್ಯದ ಪೋಲೀಸ್ ಮಹಾ ನಿರ್ದೇಶಕರಿಗೆ, ಪೋಲೀಸ್ ಕಮೀಷನರ್‌ರಿಗೆ ಅದನ್ನು ತನಿಖೆ ಮಾಡಲಿಕ್ಕೆ ಹೇಳಿದ್ದೇನೆ ಎನ್ನುವ ಮಾತನ್ನು ಹೇಳಿದರು.

ಆದರೆ ಬೆಂಗಳೂರು ನಗರದಲ್ಲೇ ನಡೆದಿರತಕ್ಕ ಈ ಘಟನೆ ಬಗ್ಗೆ ಇಷ್ಟು ದಿವಸಗಳಲ್ಲಿ ವರದಿ ಸಲ್ಲಿಸದೇ ಇರತಕ್ಕ ಅಗತ್ಯ ಇರಲಿಲ್ಲ. ಇದನ್ನು ಯಾವಾಗಲೋ ಜನತೆಗೆ ಇದು ಯಾರು ಮಾಡದ್ದಾರೆ ಎನ್ನತಕ್ಕದ್ದರ ಬಗ್ಗೆ ಸಂಶಯ ಬರದ ರೀತಿಯಲ್ಲಿ ತಿಳಿಸುವಂತಹ ಅವಕಾಶ ಮಾಡಬಹುದಿತ್ತು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ನಮ್ಮ ತಾಲ್ಲೂಕಿನಲ್ಲಿ ಯಾವುದೇ ಬಹಳಷ್ಟು ದೊಡ್ಡ ಅಹಿತಕರ ಘಟನೆ ನಡೆಯದೇ ಇದ್ದರೂ ಸಹ ತಮ್ಮ ಪಕ್ಷದ ಕಾರ್ಯಕರ್ತರುಗಳು ಎಲ್ಲಾ ಒಂದು ಕಛೇರಿಗಳಿಗೆ ಹೋಗಿ ಶಾಸಕರು ಯಾವುದೇ ಪಕ್ಷದವರು ಆಗಿರಲಿ, ಸರ್ಕಾರ ನಮ್ಮದು ಎಂದು ಹೇಳುತ್ತಿದ್ದಾರೆ. ನಾನು ಹೇಳುತ್ತಿರುವುದು ಈ ಸರ್ಕಾರದ ಮುಂಚೂಣಿಯಲ್ಲಿ ಇರತಕ್ಕವರು ಹೇಳಿಕಳುಹಿಸಿ ಮಾಡುತ್ತಿದ್ದಾರೆ ಎನ್ನತಕ್ಕ ತಪ್ಪು ಮಾತನ್ನು ನಾನು ಹೇಳುವುದಕ್ಕೆ ಸಿದ್ಧ ಇಲ್ಲ. ಆದರೆ ಕಾರ್ಯಕರ್ತರು ಇವತ್ತು ಆ ರೀತಿ ಮೆರೆಯುತ್ತಿದ್ದಾರೆ ನಮ್ಮದು ಸರ್ಕಾರ. ನಮ್ಮವರು ಮುಖ್ಯಮಂತ್ರಿಗಳು ಇದ್ದಾರೆ. ಜೆ.ಹೆಚ್. ಪಟೇಲ್ ಪಟೇಲರಿಂದ ಬೇಕಾದರೆ ಲೆಟರ್ ಬರೆಸಿಕೊಂಡು ಕೊಡುತ್ತೇವೆ ಹೆದರಬೇಡಿ ಎಂದು ಹೇಳಿ ಎಲ್ಲರಿಗೂ ಸಹಿತ ಈ ದಿನ ಅಧಿಕಾರಿಗಳಿಗೆ ಕಿರುಕುಳ ಕೊಡುತ್ತಿದ್ದಾರೆ. ಕಳೆದ ವಾರ ತಾಲ್ಲೂಕು ಪಂಚಾಯತಿಗೆ ಮುತ್ತಿಗೆ ಹಾಕಿ 200 ಜನ ಜನತಾದಳದ ಕಾರ್ಯಕರ್ತರು, ನಾವು ಯಾರಿಂದ ಬೇಕಾದರೂ ಪತ್ರ ತಂದು ನಿಮಗೆ ರಕ್ಷಣೆ ಕೊಡುತ್ತೇವೆ, ನೀವು ಹೆದರಬೇಕಾಗಿಲ್ಲ, ನೀವು ಎಂಎಲ್‌ಎಗಳ ಮಾತು ಕೇಳಬೇಕಾಗಿಲ್ಲ ಎನ್ನತಕ್ಕ ಮಾತನ್ನು ಇವತ್ತು ಬೆದರಿಕೆಯ ಮಾತುಗಳನ್ನು ಆಡುತ್ತಿದ್ದಾರೆ. ನಾನು ನಿಮ್ಮ ಹಿತದೃಷ್ಟಿಯಿಂದ ಹೇಳುತ್ತೇನೆ. ಸರ್ಕಾರ ಯಾರದ್ದೇ ಇರಲಿ, ಶಾಸಕ ಯಾರೇ ಇರಲಿ ತಪ್ಪು ಮಾಡಿದರೆ ತಪ್ಪೇ. ಸರಿ ಮಾಡಿದರೆ ಸರಿ ಎನ್ನತಕ್ಕ ಧೋರಣೆ ಅವರಲ್ಲಿ ಬರಬೇಕು.

ಅದಕ್ಕೆ ತಾವು ಕಡಿವಾಣ ಹಾಕಬೇಕು. ಕಾರ್ಯಕರ್ತರಿಗೆ ತಾವು ಹೇಳಬೇಕು ಎನ್ನತಕ್ಕ ಮಾತು ಹೇಳುತ್ತೇನೆ. ಈ ಪ್ರವೃತ್ತಿ ಒಳ್ಳೆಯದು ಅಲ್ಲ, ಒಳ್ಳೆಯ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ತಾವು ಹೇಳಬೇಕು. ನಾವು ತಪ್ಪು ಮಾಡಿದರೂ ತಪ್ಪು

ಮಾಡಿದ್ದೀರಿ ಎಂದು ಹೇಳಿ, ನಾವು ಬೇಡ ಎನ್ನುವ ಮಾತನ್ನು ಹೇಳುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇವತ್ತು ರಾಜ್ಯಪಾಲರ ಭಾಷಣದಲ್ಲಿ ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೊರಗಡೆ ಪತ್ರಕರ್ತರ ಜೊತೆ ಮಾತನಾಡುತ್ತಾ ಒಂದು ಮಾತನ್ನು ಹೇಳಿದ್ದಾರೆ. ವೀರಪ್ಪಮೊಯ್ಲಿಯವರ ಸರ್ಕಾರ ಮಹಿಳೆಯರಿಗೆ ಹೆಚ್ಚು ಅವಕಾಶವನ್ನು ಕೊಟ್ಟಿತ್ತು. ನಮ್ಮ ಸರ್ಕಾರ ಶಾಸನಸಭೆ ಮತ್ತು ಪರಿಷತ್ತಿನಲ್ಲಿ ಎರಡರಲ್ಲೂ ಸಹಿತ 30 ಪರ್ಸೆಂಟ ಮಹಿಳೆಯರಿಗೆ ಅವಕಾಶ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಸಂತೋಷ., ಇಲ್ಲಿ 6 ಜನ ಮಹಿಳೆಯರು ಗೆದ್ದಿದ್ದಾರೆ. ಆದರೆ ಅವರಲ್ಲಿ ಇಬ್ಬರಿಗೇ ಕೊಟ್ಟು ಇಲ್ಲೇ ಕೊಟ್ಟಿದ್ದೀರಿ ಟೋಪಿ. ನೀವು ಕೊಡತಕ್ಕ 30 ಪರ್ಸೆಂಟ್ ಎಲ್ಲಿ ಎನ್ನತಕ್ಕದ್ದನ್ನು ನಾವು ಯೋಚನೆ ನೋಡಬೇಕಾಗಿದೆ. 6 ರಲ್ಲಿ 2 ಅಲ್ಲ, 30 ಪರ್ಸೆಂಟ್ ಕೊಡುತ್ತೇವೆ ಎಂಬುದನ್ನು ತೋರಿಸಬೇಕಾಗಿತ್ತು.

ಶ್ರೀ ಬಿ. ರಮಾನಾಥ ರೈ : 6 ರಲ್ಲಿ ಇಬ್ಬರಿಗೆ ಎಂದರೆ 30 ಪರ್ಸೆಂಟ್ ಆಯಿತಲ್ಲವೇ?

ಶ್ರೀ ಎಲ್.ಆರ್. ಶಿವರಾಮೇಗೌಡ : ಒಂದು ಹೇಳುತ್ತೇನೆ. ತಾವು ಇಲ್ಲಿ ರಾಜಕೀಯ ಭಾಷಣವನ್ನು ಮಾಡಬೇಡಿ. ಇದರಲ್ಲಿ ಯಾವುದೇ ವೈಯುಕ್ತಿಕವಾದ ಪ್ರಶ್ನೆ ಇಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಂದೆ ಏನಾದರೂ ಮಂತ್ರಿ ಮಂಡಲವನ್ನು ಪುನರ್ ರಚಿಸಬೇಕಾಗಿ ಬಂದರೆ ದಯವಿಟ್ಟು ಮಂಡ್ಯ ಜಿಲ್ಲೆಗೆ, ಹೆಣ್ಣು ಮಕ್ಕಳಿಗೆ ಹೇಗೆ ಪ್ರತಿನಿಧಿತ್ವ ಕೊಡಬೇಕು ಎಂದು ನಮ್ಮ ಶಿವರಾಮೇಗೌಡರ ಸಲಹೆಯನ್ನು ತೆಗೆದುಕೊಂಡು ತಾವು ರಚನೆ ಮಾಡಿದರೆ ಬಹಳ ಒಳ್ಳೆಯದಾಗುತ್ತದೆ.

ಉಪಾಧ್ಯಕ್ಷರು : ಶಿವರಾಮೇಗೌಡರೇ, ತಾವು ಸ್ವಲ್ಪ ಬೇಗ ಮುಗಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮತ್ತೆ ಸಂಪುಟ ರಚನೆ ಮಾಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಈಗ ಇರತಕ್ಕ ಅತೃಪ್ತಿ ಹಾಗೂ 30 ಪರ್ಸೆಂಟ್ ಮಹಿಳೆಯರಿಗೆ ಕೊಡತಕ್ಕ ಸಂದರ್ಭದಲ್ಲಿ ಇನ್ನೂ ಇಬ್ಬರು ಮೂವರು ಮಹಿಳೆಯರಿಗೆ ಅವಕಾಶ ಮಾಡಿಕೊಡಬೇಕು ಎಂದು ಈ ರಾಜ್ಯದ ಮಹಿಳೆಯರ ಪರವಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಳ್ಳುತ್ತಾ ಒಂದು ಮಾತನ್ನು ಹೇಳಿದರು. ಅವರು ಹೇಳಿರತಕ್ಕದ್ದು ಆಡಳಿತ ದೃಷ್ಟಿಯಿಂದ ಸರಿ ಇರಬಹುದು. ಅದನ್ನು ಇಲ್ಲ ಎಂದು ನಾನು ಹೇಳುವುದಿಲ್ಲ. ಇವತ್ತು ಹೊಸ ಹೊಸ ಪ್ರಾಜೆಕ್ಟ್‌ಗಳು ಬರಬೇಕಾದರೆ ಹಣಕಾಸಿನ ಮುಗ್ಗಟ್ಟಿನಿಂದ ಹೇಳಿರಬಹುದು. ಇವತ್ತು ವಿದ್ಯುಚ್ಛಕ್ತಿ ಮೇಲೆ ಕರಭಾರ ಹಾಕುತ್ತೇವೆಂದು ಹೇಳಿದ್ದಾರೆ. ನಾನು ಕೇಳುತ್ತೇನೆ ಸ್ವಾಮಿ, ಹಿಂದೆ ಜನತಾ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಇಡೀ ರಾಜ್ಯದಲ್ಲಿ ವಿದ್ಯುತ್‌ನ್ನು ಷಟ್ ಡೌನ್ ಮಾಡುತ್ತಿದ್ದರು. ಎಂದರೆ ಹೆಚ್ಚು ವಿದ್ಯುತ್ ಉತ್ಪಾದನೆ ಇಲ್ಲದೇ ಇರತಕ್ಕ ಸಂದರ್ಭದಲ್ಲಿ ಕರೆಂಟನ್ನು ಮೀಟ್ ಮಾಡಬೇಕಾಗಿದ್ದರೆ ಎಷ್ಟು ಉಪಯೋಗಿಸಿಕೊಳ್ಳಬೇಕೋ ಅಷ್ಟನ್ನು ಉಪಯೋಗಿಸಿಕೊಳ್ಳಲು ಬೇಕಾಗಿದ್ದಾಗ ಅರ್ಧ ಕರೆಂಟ್ ಬೇರೆ ಕಡೆ ಕೊಟ್ಟು, ಇನ್ನು ಅರ್ಧ ಬೇರೆ ಕಡೆ ಕೊಡುವ ವ್ಯವಸ್ಥೆ ಮಾಡಿ ಅದನ್ನು ಷಟ್‌ಡೌನ್ ಮಾಡುತ್ತಿದ್ದರು. ನಾನು ಶಾಸಕನಾಗಿ ಬಂದ ಮೇಲೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹಲವಾರು ಬಾರಿ ಹೇಳಿದ್ದೇವೆ. ಎಲ್ಲಾ ಸಭೆಗಳಲ್ಲಿ ಚರ್ಚೆ ಮಾಡಿದ್ದೇವೆ; ಶಟ್‌ಡೌನ್ ಸಿಸ್ಟಮ್ ತೆಗೆದರು. ಶಟ್‌ಡೌನ್ ಸಿಸ್ಟಮ್ ತೆಗೆದ ಮೇಲೆ ಇವತ್ತು ಯಾವುದೇ ಹಳ್ಳಿಯ ರೈತ ಒಂದು ಬೋರ್‌ವೆಲ್‌ನ್ನು ಸಮರ್ಪಕವಾಗಿ ಓಡಿಸತಕ್ಕ ದಿನಗಳನ್ನು ನಾವು ನೋಡಿಲ್ಲ. ತಮಗೆ

ಗೊತ್ತಿದೆ. ತಾವು ಹಳ್ಳಿಗಾಡಿನಿಂದ ಬಂದಿರತಕ್ಕವರು. ಒಂದು ಬೋರ್‌ವೆಲ್ ಮೋಟರ್ ಒಂದು ಸಾರಿ ಸುಟ್ಟರೆ ಒಬ್ಬ ಮನುಷ್ಯನಿಗೆ ಕ್ಯಾನ್ಸರ್ ಕಾಯಿಲೆ ಬಂದರೆ ಆ ಮನುಷ್ಯನ ದೇಹ ಹೇಗೆ ಆಗುತ್ತದೋ ಒಂದು ಮೋಟರ್‌ನ್ನು ರೀವೈಂಡ್ ತಂದು ಅವನು ಬೋರ್‌ವೆಲ್‌ನಿಂದ ನೀರು ಎತ್ತಿದರೆ ಇವತ್ತು ಆ ಬೋರ್‌ವೆಲ್ ತಿಂಗಳಿಗೆ ಒಂದು ಸಾರಿ ಕಡೇ ಪಕ್ಷ ಸುಡತಕ್ಕಂಥ ಪ್ರವೃತ್ತಿ ಇಡೀ ಗ್ರಾಮಾಂತರ ಪ್ರದೇಶದಲ್ಲಿ ಇದೆ. ಇವತ್ತು ನಾವು ಇಲ್ಲಿ ಭಾಷಣ ಮಾಡುತ್ತೇವೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳು ಹೆಚ್ಚಬೇಕು, ಗುಡಿ ಕೈಗಾರಿಕೆಗಳು ಬರಬೇಕು ಎಂದು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದೀರಿ.

ನಾನು ಕೇಳುತ್ತೇನೆ, ಯಾವುದೇ ಒಂದು ಕೈಗಾರಿಕೆ ನಡೆಯಬೇಕಾದರೆ, ಮುನ್ನೂರಕ್ಕಿಂತ ವೋಲ್ಟೇಜ್ ಕಡಿಮೆ ಇದ್ದರೆ, ಆ ಕೈಗಾರಿಕೆಯನ್ನು ನಡೆಸುವುದಕ್ಕಾಗುವುದಿಲ್ಲ. ಇವತ್ತು ಯಾವ ಗ್ರಾಮಾಂತರ ಪ್ರದೇಶದಲ್ಲೂ ಕೂಡ 150ಕ್ಕೆ ಮೇಲೆ ವೋಲ್ಟೇಜ್ ಬರುತ್ತಾ ಇಲ್ಲ. ನಾನು ವಿನಂತಿ ಮಾಡುತ್ತೇನೆ. ನೀವು ಷಟ್ ಡೌನ್ಸಿಸ್ಟಂ ಮತ್ತೆ ಪ್ರಾರಂಭ ಮಾಡಿ. ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ನಾನೂ ಸಹಿತ ಸ್ವತಃ ಕೈಗಾರಿಕೋದ್ಯಮಿ. ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕೈಗಾರಿಕೋದ್ಯಮಿಗಳು ಎಷ್ಟು ಕಷ್ಟ ಅನುಭವಿಸುತ್ತಿದ್ದಾರೆಂಬುದು ನಮಗೆ ಅರ್ಥವಾಗುತ್ತದೆ. ನಾನು ಬಜೆಟ್ ಮೇಲೆ ಭಾಷಣ ಮಾಡತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದೇನೆ. ಕೈಗಾರಿಕೆ ಮಾಡಿದರೆ ಏನಾಗುತ್ತದೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆ ಮಾಡಿದವರ ಪರಿಸ್ಥಿತಿ ಮತ್ತು ಅದರ ಸ್ಥಿತಿಗತಿಗಳೇನಾಗಿದೆ ಎಂಬ ವಿಚಾರದಲ್ಲಿ ಸರ್ಕಾರದ ಗಮನ ಸೆಳೆದು, ಸಾಕಷ್ಟು ಬೆಳಕನ್ನು ಚೆಲ್ಲಿದ್ದೇನೆ. ಆದರೂ ಸಹಿತ ಪರಿಪೂರ್ಣವಾಗಿ ಯಾವ ಸಲಹೆಯೂ ಕೂಡ ಅಸ್ತಿತ್ವಕ್ಕೆ ಬರಲಿಲ್ಲ. ನಾನು ಕೇಳುವುದು ಇಷ್ಟೆ. ಹಿರಿಯ ಮುತ್ಸದ್ದಿ, ರಾಜಕಾರಣಿಯಾಗಿ ಮಾನ್ಯ ಜೆ.ಹೆಚ್. ಪಟೇಲರು ಈ ಖಾತೆಯನ್ನು ಹೊಂದಿರುವುದು ನಮಗೆಲ್ಲರಿಗೂ ಸಹಿತ ಸಂತೋಷದ ವಿಚಾರ. ಹಿಂದೆ ನಮ್ಮ ಸರ್ಕಾರ ಇದ್ದಾಗ, ವಿದ್ಯುಚ್ಛಕ್ತಿಗೆ ಏನು ಅವಕಾಶ ಕೊಡಬೇಕಾಗಿತ್ತೋ ಅದನ್ನು ಸರಿಯಾಗಿ ಕೊಡಲಿಲ್ಲ. ಯಾರು ಕೇಳಿದರೂ ವಿದ್ಯುಚ್ಛಕ್ತಿ ಕೊಟ್ಟರೇ ಹೊರತು, ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ಗೋಜಿಗೆ ಹೋಗಲಿಲ್ಲ.

ಇವತ್ತು ಕಾಂಗ್ರೆಸ್ ಸರ್ಕಾರ ಬಂದಮೇಲೆ, ಇದೇ ಸದನದಲ್ಲಿ ದೊಡ್ಡ ಗಲಾಟೆ ಮಾಡಿ, ಹೊರ ರಾಷ್ಟ್ರದಿಂದ ಈ ರಾಜ್ಯಕ್ಕೆ ಬಂದು, ಬಂಡವಾಳ ಹೂಡಿ, ಹೊಸ ವಿದ್ಯುಚ್ಛಕ್ತಿ ಉತ್ಪಾದನಾ ಘಟಕಗಳನ್ನು ಪ್ರಾರಂಭ ಮಾಡಿದ್ದಾರೆ. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, ಹೊರದೇಶಗಳಿಗೆ ಹೋಗಿ, ಹೊರ ರಾಜ್ಯದವರನ್ನು ಭೇಟಿ ಮಾಡಿ, ಅವರನ್ನು ಕರೆದುಕೊಂಡು ಬಂದು, ಈ ರಾಜ್ಯಕ್ಕೆ ಹೊಸದಾಗಿ ವಿದ್ಯುಚ್ಛಕ್ತಿ ತಯಾರು ಮಾಡತಕ್ಕ ಪ್ರಯತ್ನ ಮಾಡಿದಂಥ ಕೀರ್ತಿ ಮಾನ್ಯ ಬಂಗಾರಪ್ಪನವರಿಗೆ ಸೇರಬೇಕು. ಇವತ್ತು ಬಹಳಷ್ಟು ಪ್ರಾಜೆಕ್ಟ್‌ಗಳು ನಮ್ಮ ಕೈಯಲ್ಲಿವೆ. ಯಲಹಂಕ ಹೈಡ್ರೋ ಪ್ರಾಜೆಕ್ಟ್ ಆಗಲೀ, ರಾಯಚೂರು ಥರ್ಮಲ್ ಯೂನಿಟ್ ಆಗಲೀ, ನಮ್ಮ ರಾಜ್ಯದಲ್ಲಿ ಪ್ರಾರಂಭವಾಗಿರತಕ್ಕ ಯಾವುದೇ ಪ್ರಾಜೆಕ್ಟ್ ಆದರೂ ಸಹಿತ, ಹೆಚ್ಚು ಒತ್ತನ್ನು ಕೊಟ್ಟು, ತಯಾರು ಮಾಡತಕ್ಕ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ನೀರಾವರಿ ಪಂಪ್‌ಸೆಟ್ಟುಗಳು ಸರಿಯಾಗಿ ನಡೆಯುತ್ತಿಲ್ಲ. ರೈತನ ಉದ್ಧಾರ ಆಗಬೇಕಾದರೆ, ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ತಾವೇನು ವಿದ್ಯುತ್ದರ ಹಾಕುತ್ತೀರಿ ಎಂದು ಹೇಳುತ್ತೀರಿ. ಅದನ್ನು ನೀವು ಸರಿಯಾಗಿ ಕರಂಟ್ ಕೊಟ್ಟಮೇಲೆ ಯೋಚನೆ ಮಾಡಿ. ಸರಿಯಾಗಿ ಕರಂಟ್ ಕೊಡದೇ, ರೈತರ ಮೇಲೆ ಭಾರ ಹಾಕುವುದು ಉಚಿತವಲ್ಲ ಎನ್ನುವ

ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಪಡುತ್ತೇನೆ ಮತ್ತೆ, ಅಕ್ಕಿಯನ್ನು ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ.

ನಿಜ, ಗ್ರಾಮಾಂತರ ಪ್ರದೇಶದಲ್ಲಿರತಕ್ಕವರಿಗೆ ಅಕ್ಕಿಯನ್ನು ಕೊಡತಕ್ಕ ಮಾತು, ನಮ್ಮೆಲ್ಲರಿಗೂ ಸಮಾಧಾನಕರವಾದ ವಿಚಾರ. ಆದರೆ, ಅಕ್ಕಿಯನ್ನು ಯಾರಿಂದ ಕೊಡುತ್ತೀರಿ, ಯಾವ ಮೂಲದಿಂದ ಕೊಡುತ್ತೀರಿ. ನಮ್ಮಲ್ಲಿರತಕ್ಕ ನ್ಯಾಯಬೆಲೆ ಅಂಗಡಿಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆಯೇ ಇಲ್ಲವೇ ಎನ್ನುವುದನ್ನು ಚಿಂತನೆ ಮಾಡಬೇಕಾಗಿದೆ. ಇವತ್ತು ಬೆಳಿಗ್ಗೆಯೂ ಸಹಿತ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಹಸಿರು ಕಾರ್ಡುಗಳು ಯಾರಿಗೆ ತಲುಪಬೇಕಾಗಿತ್ತೋ ಅವರಿಗೆ ತಲುಪಿಲ್ಲ. ಇವತ್ತು ಕೇಸರಿ ಕಾರ್ಡುಗಳು ತಲುಪಬೇಕಾದವರಿಗೆ, ಹಸಿರು ಕಾರ್ಡುಗಳು ತಲುಪಿದೆ. ಹಸಿರು ಕಾರ್ಡನವರು, ಕೇಸರಿ ಕಾರ್ಡ್ ತೆಗೆದುಕೊಂಡಿದ್ದಾರೆ. ಇದನ್ನು ಸಮಗ್ರವಾಗಿ ಚಿಂತನೆ ಮಾಡಬೇಕು. ಈ ನ್ಯಾಯಬೆಲೆ ಅಂಗಡಿಗಳು ಓಬಿರಾಯನ ಕಾಲದಲ್ಲಿ ಕೊಟ್ಟಂಥ ನ್ಯಾಯಬೆಲೆ ಅಂಗಡಿಗಳು. ನನ್ನ ತಾಲ್ಲೂಕಿನಲ್ಲಿ ದೇವಲಾಪುರ ಎಂಬತಕ್ಕಂಥ ಒಂದು ಗ್ರಾಮ. ಇದರಿಂದಾಚೆಗೆ ಕುದುಬದಾಳು ಎನ್ನತಕ್ಕಂಥ ಗ್ರಾಮ 14 ಕಿಲೋಮೀಟರ್ ಇದೆ. ಅಲ್ಲಿಂದ ಶೆಟ್ಟಿಹಳ್ಳಿ ಎಂಬುದು 9 ಕಿಲೋಮೀಟರ್ ಇದೆ. ಇಲ್ಲಿ ಒಂದು ನ್ಯಾಯಬೆಲೆ ಅಂಗಡಿ ಕೊಟ್ಟಿದ್ದಾರೆ. 9 ಕಿಲೋಮೀಟರ್ ಸುತ್ತಮುತ್ತಲಿರುವ ಜನರು ಬಂದು, ಈ ನ್ಯಾಯಬೆಲೆ ಅಂಗಡಿಯಲ್ಲಿ ನೀವು ಕೊಡತಕ್ಕ ಅಕ್ಕಿಯನ್ನು ತೆಗೆದುಕೊಳ್ಳಬೇಕು ಅಥವಾ ದಿನನಿತ್ಯದ ವಸ್ತುಗಳನ್ನು ಆ ಅಂಗಡಿಯಿಂದ ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಹಾಗೂ ಒತ್ತಾಯ ಮಾಡುತ್ತೇನೆ.

ನ್ಯಾಯ ಬೆಲೆ ಅಂಗಡಿಗಳನ್ನು ಕೇವಲ 2-3 ಕಿಲೋಮೀಟರ್ ದೂರದಲ್ಲಿ, ರೈತರಿಗೆ, ಫಲಾನುಭವಿಗಳಿಗೆ ಸಿಗತಕ್ಕ ವ್ಯವಸ್ಥೆ ಮಾಡಬೇಕು. ನಮ್ಮ ನ್ಯಾಯಬೆಲೆ ಅಂಗಡಿಗಳ ಕತೆ, ಒಂದು ಕಡೆ ಸಾಲಕ್ಕೆ ಕಾರ್ಡು ಕೊಟ್ಟು, ನ್ಯಾಯಬೆಲೆ ಅಂಗಡಿಗಳನ್ನು ನಡೆಸುತ್ತಿದ್ದಾರೆ. ಅವರು ಕಾಳಸಂತೆ ವ್ಯಾಪಾರ ಮಾಡುವುದಕ್ಕೆ ಅವಕಾಶ ಇದೆ. 150 ಕಾರ್ಡುಗಳಿಗೆ ಒಂದು ನ್ಯಾಯಬೆಲೆ ಅಂಗಡಿ ಕೊಟ್ಟಿದ್ದೀರಿ. 80 ಕಾರ್ಡುಗಳಿಗೆ ಒಂದು ನ್ಯಾಯಬೆಲೆ ಅಂಗಡಿಯನ್ನು ಕೊಟ್ಟಿದ್ದೀರಿ. ಇದನ್ನು ಕೊನೆಯಪಕ್ಷ ಇನ್ನೂರು ಕಾರ್ಡುಗಳಿಗೆ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟು, ಸರಿಸಮ ಮಾಡಿ, ಎಲ್ಲರಿಗೂ ಸಹಿತ ದಿನನಿತ್ಯದ ಬಳಕೆ ವಸ್ತುಗಳು ಸಿಗುವ ರೀತಿ ಮಾಡಬೇಕು. ಇದನ್ನು ಸಾಕಷ್ಟು ಬಾರಿ ಚರ್ಚೆ ಮಾಡಿ, ಕಾರ್ಯಗತ ಮಾಡುವುದರಲ್ಲಿ ಅವರ ಪರಿಸ್ಥಿತಿ ಮತ್ತು ನಮ್ಮ ಪರಿಸ್ಥಿತಿ ಈ ರೀತಿಯಾಗಿದೆ. ದಯಮಾಡಿ, ಈ ವಿಷಯವನ್ನು ಈ ಸರ್ಕಾರ ಕೈಗೆತ್ತಿಕೊಂಡು, ಸರಿಯಾದ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಾನು ಗ್ರಾಮಾಂತರ ಪ್ರದೇಶದಲ್ಲಿದ್ದವನು, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ಮುಖ್ಯಮಂತ್ರಿಗಳಾಗಿರುವುದರಿಂದ, ಹೆಚ್ಚು ಒತ್ತನ್ನು ಗ್ರಾಮಾಂತರ ಪ್ರದೇಶಕ್ಕೆ, ರಾಜ್ಯಪಾಲರ ಭಾಷಣದಲ್ಲಿ ಕೊಡಬೇಕಾಗಿತ್ತು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ. ಇವತ್ತು ರಸ್ತೆ ವಿಷಯಕ್ಕೆ ಸಂಬಂಧಪಟ್ಟಂತೆ, ಎಷ್ಟೋ ಕುಗ್ರಾಮಗಳಿಗೆ, ಮತ್ತು ಹಳ್ಳಿಗಳಿಗೆ ಹೋಗಬೇಕಾದರೆ, ಸಂಪರ್ಕ ಇರುವುದಿಲ್ಲ. ನಾನು ಕೇಳುತ್ತೇನೆ, ಇಷ್ಟೊಂದು ಮುಂದುವರಿದಿರತಕ್ಕ ಜಗತ್ತಿನಲ್ಲಿ ಕನಿಷ್ಟವಾಗಿರತಕ್ಕ ರಸ್ತೆ ಸೌಲಭ್ಯಗಳಿಲ್ಲ. ಇವತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೆಲವು ಹಳ್ಳಿಗಳಲ್ಲಿ ಮದುವೆ ಮಾಡಿಕೊಳ್ಳುವುದಕ್ಕೆ ಹೆಣ್ಣುಗಳನ್ನು ಕೊಡುವುದಿಲ್ಲ.

ನಿಮ್ಮ ಊರಿಗೆ ಬರುವುದಕ್ಕೆ ರಸ್ತೆ ಇಲ್ಲ ಆದ್ದರಿಂದ ಕೊಡುವುದಿಲ್ಲವೆಂದು ಹೇಳತಕ್ಕಂಥ ಪರಿಸ್ಥಿತಿ ಹಳ್ಳಿಗಳಲ್ಲಿ ಇದೆ. ನೀವು ಯೋಚನೆ ಮಾಡಬೇಕಾಗಿದೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಒಂದು ಊರಿಗೆ ಎಲ್ಲಾ ರಸ್ತೆಗಳನ್ನು ಮಾಡುವುದು ಬೇಡ. ಪ್ರತಿ ಗ್ರಾಮಕ್ಕೆ ಕನಿಷ್ಟ ಪಕ್ಷ, ಒಂದು ಜಲ್ಲಿ ರಸ್ತೆಯನ್ನಾದರೂ ಸಹಿತ

ವ್ಯವಸ್ಥೆ ಮಾಡಬೇಕು. ಈ ಕೆಲಸವನ್ನು ಇದುವರೆಗೂ ಸಹಿತ ಮಾಡಲಿಲ್ಲ. ಈಗಲಾದರೂ ತಾವು, ಕೊನೇಪಕ್ಷ ಒಂದು ಗ್ರಾಮಕ್ಕೆ ಒಂದು ಜಲ್ಲಿ ರಸ್ತೆಯನ್ನು ಮಾಡತಕ್ಕ ಕಾರ್ಯಕ್ರಮವನ್ನು ಈ ವರ್ಷದ ಬಜೆಟ್ನಲ್ಲಿ ಸೇರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವತ್ತು ಬಹಳಷ್ಟು ರಸ್ತೆ ಪಕ್ಕದಲ್ಲಿ ಜಲ್ಲಿಗಳನ್ನು ಶೇಖರಿಸಿದ್ದಾರೆ. ಆ ಜಲ್ಲಿಗಳನ್ನು ಗ್ರಾಮಾಂತರದವರು ತುಂಬಿಕೊಂಡು ಹೋಗುತ್ತಿದ್ದಾರೆ. ಆ ಜಲ್ಲಿಯನ್ನು ರಸ್ತೆಗೆ ಹರಡಿಸಿ ಎಂದು ಇಂಜಿನಿಯರುಗಳಿಗೆ ಹೇಳಿದರೆ, ಅವರು ರೋಲರ್ಗಳಿಲ್ಲ, ಸ್ಪಿಲ್ ಓವರ್ ಆಗಿದೆ, ಹಣ ಇಲ್ಲವೆಂದು ಹೇಳುತ್ತಾರೆ. ನಾನು ಕೇಳುತ್ತಿರುವುದು, ಹೊಸ ಸರ್ಕಾರ ಬಂದಿದೆ. ನಾಳೆಯೇ ಎಲ್ಲಾ ರಸ್ತೆಗಳನ್ನೂ ಮಾಡಿಸಿ ಎಂದು ಹೇಳುವುದಿಲ್ಲ. ಯಾವ ಕೆಲಸ ಸ್ಪಿಲ್ ಓವರ್ ಆಗಿ, ಹಣಕಾಸಿನ ಮುಗ್ಗಟ್ಟಿನಿಂದ ನಿಂತಿದೆ, ಅದು ರಸ್ತೆಯಾಗಿರಬಹುದು, ಕುಡಿಯುವ ನೀರಿನ ವಿಚಾರವಾಗಿರಬಹುದು, ಡ್ರೈನೇಜ್ ವಿಚಾರವಾಗಿರಬಹುದು, ನೀರಾವರಿಯಾಗಿರಬಹುದು ಅಥವಾ ಸೇತುವೆಯಾಗಿರಬಹುದು. ನೀವು ಇದಕ್ಕೆ ಹೆಚ್ಚು ಒತ್ತು ಕೊಟ್ಟು, ರಾಜ್ಯದಲ್ಲಿ ಎಷ್ಟು ಸ್ಪಿಲ್‌ಓವರ್ ವರ್ಕ್ ಈ ವರ್ಷದ ಬಜೆಟ್ಬುಕ್ನಲ್ಲಿ, ಪ್ಲಾನ್ ಬುಕ್ನಲ್ಲಿ ಎಷ್ಟು ಸೇರಿವೆ ಎನ್ನುವುದನ್ನು ತರಿಸಿ, ಶೀಘ್ರವಾಗಿ ಹಣ ಬಿಡುಗಡೆ ಮಾಡಿ, ಮಾರ್ಚಿಯೊಳಗೆ ಕೆಲಸ ಮಾಡಿಸಿದರೆ, ಒಳ್ಳೆಯದಾಗುತ್ತದೆ.

ಇದರಿಂದ ಹೊಸ ಸರ್ಕಾರ ಬಂತು, ಕೆಲಸಗಳು ಚೆನ್ನಾಗಿ ನಡೆಯುತ್ತಿವೆ ಎಂದು ಹೇಳತಕ್ಕಂಥ ಕೀರ್ತಿ ತಮಗೇ ಬರಲಿ ಎನ್ನುವುದನ್ನು ಜನತೆಯ ದೃಷ್ಟಿಯಿಂದ ಕೇಳುತ್ತಿದ್ದೇನೆ. ಕುಡಿಯುವ ನೀರಿನ ವ್ಯವಸ್ಥೆ. ನಮ್ಮ ಮುಂದೆ ನಜೀರ್ಸಾಬ್ರವರು ಇಲ್ಲ. ಅವರು ಯಾವುದೇ ಪಕ್ಷಕ್ಕೆ ಸೇರಿರಲಿ, ಅವರು ತೋಡಿಸಿದ ಬೋರ್ವೆಲ್ಗಳು ಒಣಗಿ ಹೋಗಿವೆ. ನಜೀರ್ಸಾಬ್ರವರ ಕಾಲದಲ್ಲಿ ಕೊರೆದಂಥ ಬೋರ್ವೆಲ್ಗಳು ಇವತ್ತು ಬತ್ತಿಹೋಗಿವೆ. ದಯಮಾಡಿ, ಸರ್ಕಾರಕ್ಕೆ ಒಂದು ವಿನಂತಿ ಮಾಡುತ್ತೇನೆ. ನೀವು ಬೋರ್ವೆಲ್ ಕೊರೆಸುವುದರಿಂದ ಪ್ರಯೋಜನವಿಲ್ಲ. ಉದಾಹರಣೆಗೆ, ನನ್ನ ತಾಲ್ಲೂಕಿನಲ್ಲಿ 508 ಗ್ರಾಮಗಳಿಗೆ ಒಂದೊಂದು ಊರಿನಲ್ಲಿ 10 ಬೋರ್ವೆಲ್ಗಳನ್ನು ಹಾಕಿದರೂ ಸಹಿತ, ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇವತ್ತು ಒಂದು ಬೋರ್ವೆಲ್ಗೆ ಕನಿಷ್ಠ ಪಕ್ಷ 33 ಸಾವಿರ ರೂಪಾಯಿಗಳ ವೆಚ್ಚ ಬರುತ್ತದೆ. ಈ ರೀತಿ ಬೋರ್ವೆಲ್ಹಾಕುವ ಬದಲು, 2-3 ಊರುಗಳನ್ನು ಸೇರಿಸಿ, ಮಿನಿ ವಾಟರ್ ಸ್ಕೀಮ್ ಅಳವಡಿಸಿದರೆ, ಆ ಊರುಗಳಿಗೆ ಖಾಯಂ ನೀರನ್ನು ಕೊಟ್ಟ ಹಾಗೆ ಆಗುತ್ತದೆ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಇಲ್ಲಿಯೇ ಕುಳಿತಿದ್ದಾರೆ. ದಯಮಾಡಿ, ಈ ಬೋರ್ವೆಲ್ ವ್ಯವಸ್ಥೆ ಮಾಡುವ ಬದಲು, ಈ ವಿಚಾರದಲ್ಲಿ ಎಲ್ಲಾ ಶಾಸಕರ ಜೊತೆ ಚರ್ಚೆ ಮಾಡಿ, ಈ ಬೋರ್ವೆಲ್ ವ್ಯವಸ್ಥೆಯನ್ನು ಕೈಬಿಟ್ಟು, ಕುಡಿಯುವ ನೀರಿಗೆ ಮಿನಿ ವಾಟರ್ ಸ್ಕೀಮ್ ಅಳವಡಿಸತಕ್ಕ ವ್ಯವಸ್ಥೆಯನ್ನು ಮಾಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಹೊಸ ಸರ್ಕಾರ ಬಂದಮೇಲೆ ಒಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಇಲಾಖೆ ವತಿಯಿಂದ ಮಾಡತಕ್ಕ ಕಾಮಗಾರಿಗಳನ್ನು ನಾವು ಮಾಡುವುದಿಲ್ಲ ಎನ್ನುವುದನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಕೆಲವು ಅಧಿಕಾರಿಗಳು ಕೊಟ್ಟಿರತಕ್ಕ ಸುತ್ತೋಲೆಗಳನ್ನೂ ನೋಡಿದ್ದೇವೆ. ಈ ವಿಷಯವಾಗಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಇದರಲ್ಲಿ ಯಾರ ಕೈವಾಡ ಇದೆಯೆಂದು ನನಗೆ ಗೊತ್ತಿಲ್ಲ. ನನ್ನ ಪಕ್ಷದ ಕ್ಷೇತ್ರ ಯಡಿಯೂರಿನಲ್ಲಿ ಈ ಆಜ್ಞೆ ಹೊರಟ ಹಿಂದೆಯೇ, ಹಳೆಯ ತಾರೀಖು ಹಾಕಿ, ಎಲ್ಲಾ ಕೆಲಸವನ್ನು ಹಂಚಿರತಕ್ಕ ಚಿತ್ರವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಗುತ್ತಿಗೆ ಆಧಾರದಮೇಲೆ ಕೊಡತಕ್ಕ ಕಾಂಟ್ರಾಕ್ಟನ್ನು, ಡಿಪಾರ್ಟ್‌ಮೆಂಟ್ನವರು, ತೆಗೆದುಕೊಳ್ಳಬಾರದೆಂದು ಏನು ತೀರ್ಮಾನ ಮಾಡಿದ್ದಾರೆ. ಇದು ನಿಜಕ್ಕೂ ಸಹಿತ ಮೆಚ್ಚತಕ್ಕಂಥ ತೀರ್ಮಾನ

ನನಗೆ ಗೊತ್ತಿದೆ. ಸರ್ಕಾರ ಯಾವ ಕಾರಣಕ್ಕೋ ಈ ಒತ್ತಾಯಕ್ಕೆ ಬೀಳಲೇಬೇಕಾಗಿದೆ. ಪರಿಸ್ಥಿತಿ ಆ ರೀತಿ ಇದೆ. ಈ ವಿಚಾರದಲ್ಲಿ ನೀವು ಚಾಲೆಂಜ್ ತೆಗೆದುಕೊಳ್ಳಬೇಕಾಗಿದೆ.

ನಮ್ಮ ಎಲ್ಲಾ ಕಂಟ್ರಾಕ್ಟರ್ಸ್ ಮತ್ತು ಅಧಿಕಾರಿಗಳು, ಎಲ್ಲಿ ಅಧಿಕಾರದ ವಾಸನೆ ಹಿಡಿಯುತ್ತೇದೆ, ಆ ಕಡೆಗೇ ಹೋಗುತ್ತಾರೆ. ಈಗ ನಮ್ಮ ಕಡೆಗೆ ಯಾರೂ ಇಲ್ಲ, ಎಲ್ಲಾ ನಿಮ್ಮ ಕಡೆಗೆ ಬಂದಿದ್ದಾರೆ. ವಿಧಾನ ಸೌಧದ ಎಲ್ಲಾ ಮೆಟ್ಟಿಲುಗಳಲ್ಲಿ, ಎಲ್ಲಾ ಮಂತ್ರಿಗಳ ರೂಮುಗಳಲ್ಲಿ ಓಡಾಡುತ್ತಿದ್ದಾರೆ. ಈ ಗುತ್ತಿಗೆಯನ್ನು ತಪ್ಪಿಸಬೇಕು. ಮೊದಲಿನಂತೆ, ಇಲಾಖೆ ಮೂಲಕ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಹೋರಾಟ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರಕ್ಕೆ ಎಚ್ಚರಿಕೆಯ ಮಾತನ್ನು ಹೇಳುತ್ತಿದ್ದೇನೆ. ದಯಮಾಡಿ, ತಾವು ಇದಕ್ಕೆ ಮಣಿಯಬಾರದು. ಜನತೆಯ ದೃಷ್ಟಿಯಿಂದ ನೀವು ತೆಗೆದುಕೊಂಡಿರತಕ್ಕ ನಿರ್ಧಾರ ಶ್ಲಾಘನೀಯವಾದುದು. ಹಣ ಪೋಲಾಗುವುದಿಲ್ಲ. ನೀವು ಕೆಲಸ ಕೊಟ್ಟರೆ ಅಕೌಂಟೆಬಿಲಿಟಿ ಕೂಡ ಸಿಕ್ಕುವುದಿಲ್ಲ. ಇವತ್ತು, ಒಬ್ಬ ಎಸ್.., ಎಕ್ಸಿಕ್ಯುಟಿವ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಹೋಗಿ ಒಂದು ಕೆಲಸ ನೋಡಿಕೊಂಡು ಬಂದರೆ, ಆ ಕೆಲಸಕ್ಕೆ 4 ಪಟ್ಟು ರೇಟ್ ಕೊಟ್ಟಿರತಕ್ಕಂತಾದ್ದನ್ನು ನಾವು ನೋಡಿದ್ದೇವೆ.

ಹೇಳುವವರು ಇಲ್ಲ, ಕೇಳುವವರು ಇಲ್ಲ, ಅವರು ಮಾಡಿದ್ದೇ ಲೆಕ್ಕ ಈ ಪರಿಸ್ಥಿತಿ ಆಗಿದೆ. ಯಡಿಯೂರು ಮತ್ತು ನಾಗಮಂಗಲದಲ್ಲಿ ಸರ್ಕಾರ ಏನು ಸುತ್ತೋಲೆಯ ಮೂಲಕ ಆಜ್ಞೆ ಮಾಡಿದೆ. ಅದರ ಹಿಂದಕ್ಕೆ ಹಳೆಯ ಡೇಟ್ ಹಾಕಿ ಕೆಲಸ ಮಾಡಿರತಕ್ಕಂಥಾದ್ದರ ಬಗ್ಗೆ ತನಿಖೆ ಮಾಡಬೇಕು. ಇದರ ಬಗ್ಗೆ ಸಂಕ್ಷಿಪ್ತವಾಗಿ ಯಾರು ಉತ್ತರ ಕೊಡುತ್ತಾರೋ ಅವರು ಕೊಡಬೇಕು ಎಂದು ನಾನು ಒತ್ತಾಯ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಯಾವುದೇ ಕಾರಣಕ್ಕೂ ಸಹ ತಾವು ಏನು ಟೆಂಡರ್ ಕರೆಯತಕ್ಕಂಥಾದ್ದನ್ನು ಮಾಡಿದ್ದೀರಿ ಅದನ್ನೇ ಮುಂದುವರಿಸಬೇಕು ಈ ಇಲಾಖಾವತಿಯಿಂದ ತೆಗೆದುಕೊಳ್ಳತಕ್ಕಂಥ ಕೆಲಸವನ್ನು ಮಾಡಕೂಡದು ಎಂದು ನಾನು ನಿಮ್ಮಲ್ಲಿ ಒತ್ತಾಯ ಮಾಡಿ, ಇದು ನಮ್ಮೆಲ್ಲರ ಪರವಾದ ಒತ್ತಾಯ ನಮ್ಮ ಒಕ್ಕೂಟದ ಪರವಾದ ಒತ್ತಾಯ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಯಾವ ಒಕ್ಕೂಟ?

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಇದೇನು ನನಗೆ ಅರ್ಥವಾಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ರಷ್ಯಾದೇಶದಲ್ಲಿರುವ ಒಕ್ಕೂಟಗಳೇ ಒಡೆದು ಹೋಗುತ್ತಿರುವಾಗ ನಿಮ್ಮ ಒಕ್ಕೂಟ ಯಾವುದು.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ವಾಟಾಳ್ ನಾಗರಾಜ್ರವರು ಒಬ್ಬರು ಇದ್ದೇ ಈ ರೀತಿ ಹೇಳುತ್ತೀರಿ. ನಾವು 11 ಜನ ಲೆಕ್ಕಕ್ಕೆ ಇಲ್ಲವೇ? ಸ್ವಾಮಿ, ನಮಗೂ ನಿಮ್ಮ ಹಾಗೆ ಜನ ಓಟು ಕೊಟ್ಟಿದ್ದಾರೆ. ಸ್ವಾಮಿ, ತಾವು ಒಬ್ಬ ಹಿರಿಯ ಸದಸ್ಯರು. ತಾವು ಕನ್ನಡದ ಬಗ್ಗೆ ಅಭಿಮಾನವುಳ್ಳವರೆಂದು ಏನು ಮಾತನಾಡಿದರೂ ಬಿಟ್ಟುಬಿಡುತ್ತೇವೆ. ಯಾರಿಗೂ ಸಹ ಒಕ್ಕೂಟದ ಬಗ್ಗೆ ಹಗುರವಾಗಿ ಮಾತನಾಡುವ ಹಕ್ಕು ಇಲ್ಲ. ಸರ್ಕಾರ ನಡೆಸುವವರು ಆಗಲಿ ಕಾಂಗ್ರೆಸ್ಸ್ನವರು ಆಗಲಿ ಬಿ.ಜೆ.ಪಿ. ಯವರು ಆಗಲಿ ಇವತ್ತು ನಮ್ಮನ್ನು ತಾವು ಕೇಳತಕ್ಕಂಥ ಕಾಲ ಬಂದೇ ಬರುತ್ತದೆ. ಆಗ ನಾವು ನಿಮಗೆ ಈಲ್ಡ್ ಆಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು ಶಿವನಂಜಪ್ಪನವರ ಹತ್ತಿರ ಮಾತನಾಡುವಾಗ ಇವರನ್ನು ಇಟ್ಟುಕೊಂಡು ಇವರ ಜೊತೆ ಹೆಣಾಗಾಡುವುದೇ ನನಗೆ ಬಹಳ ದೊಡ್ಡ ಸಮಸ್ಯೆ ಆಗಿಬಿಟ್ಟಿದೆ ಎಂದು ಹೇಳಿದರು.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಹೇಳಿದ್ದುದು ನನಗೆ ಅರ್ಥವಾಗಲಿಲ್ಲ. ರಾಮಲಿಂಗಾರೆಡ್ಡಿಯವರು ನನ್ನ ಆತ್ಮೀಯ ಸ್ನೇಹಿತರು. ನಾನು ಅವರುಗಳ ಸ್ವಕಂಠಸ್ಥರು. ಅವರು ಸ್ವಲ್ಪ ಚೆನ್ನಾಗಿ ಮಾತನಾಡುತ್ತಾರೆ. ನಾನು ಅದನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ಆದರೆ ನೀವು ನಿಮ್ಮ ಪಕ್ಷ ಮಾಡಿದಂತಹ ಪಿತೂರಿಗೆ ನೀವು ಕೊಟ್ಟಂತಹ ಕಿರುಕುಳಕ್ಕೆ ನಿಮಗೆ ಕೊಟ್ಟಿರತಕ್ಕಂಥ ಶಾಸ್ತಿಯೇ ಸಾಕು, ನಮಗೆ ಕೊಟ್ಟಿರತಕ್ಕಂಥ ಪುರಸ್ಕಾರವೇ ಸಾಕ್ಷಿ. ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ನೀವು. ತಮ್ಮ ಸರ್ಕಾರ ಇದ್ದಾಗ ನಷ್ಟದಲ್ಲಿ ನಡೆಯತಕ್ಕಂಥ ಕೈಗಾರಿಕೆಗಳ ಬಗ್ಗೆ ಒಂದು ಚಿಂತನೆ ಮಾಡಿದ್ದಿರಿ. ಇಲ್ಲಿ ಚಿಂತನೆ ಮಾಡತಕ್ಕಂಥ 224 ಜನ ಸದಸ್ಯರು ಪೈಕಿ ಈ ರಾಜ್ಯದ ಕೈಗಾರಿಕೆಗಳನ್ನು ಮಾರಟ ಮಾಡಬಾರದು ಎನ್ನತಕ್ಕಂಥವರು ಕೆಲವರು ಇದ್ದಾರೆ. ಮಾಡದೇ ಹೋದರೆ ಏನಾಗುತ್ತದೆ ಎಂದು ಚಿಂತನೆ ಮಾಡತಕ್ಕಂಥವರು ಕೆಲವರು ಇದ್ದಾರೆ. ಆದರೆ ಈಗ ಮಾಡಲೇಬೇಕಾದಂತಹ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಕೈಗಾರಿಕಾ ಸಚಿವರು ಇಲ್ಲ. ಇವತ್ತು ಈ ರಾಜ್ಯದ ಬೊಕ್ಕಸದ ಹಣವನ್ನು ಬಿಳಿ ಆನೆಗಳಾಗಿ ತಿನ್ನುತ್ತಾ ಇರತಕ್ಕಂಥ ಏನು ಇವತ್ತು ಪಬ್ಲಿಕ್ ಅಂಡರ್ ಟೇಕಿಂಗ್ಸ್ನಲ್ಲಿ ನಡೆಯುತ್ತಾ ಇರತಕ್ಕಂಥ ಕೈಗಾರಿಕೆಗಳು ಇದ್ದಾವೆ ಇವತ್ತು ಇವುಗಳನ್ನು ಮುಚ್ಚದೇ ಹೋದರೆ ಏನು ಬಡರೈತನ ತೆರಿಗೆಯಿಂದ ವಸೂಲಿ ಮಾಡುತ್ತಿರುವಂತಹ ಹಣದಲ್ಲಿ ಅರ್ಧ ಭಾಗದಷ್ಟು ನಷ್ಟದಲ್ಲಿ ನಡೆಯುತ್ತಾ ಇರತಕ್ಕಂಥ ಕೈಗಾರಿಕೆಗಳಿಗೆ ಕೈಗಾರಿಕೆಗಳಿಗೆ ಕೊಡಬೇಕಾಗುತ್ತದೆ. ಉದಾಹರಣೆಗೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್. ಮೈಸೂರು ಸ್ಯಾಂಡಲ್ ಸೋಪ್ ಸ್ವಾಮಿ ಅದು ಇಡೀ ಪ್ರಪಂಚಕ್ಕೆ ಪ್ರಸಿದ್ಧಿಯಾಗಿರತಕ್ಕಂಥ ಸೋಪು, ಅದು ರೋಗಗ್ರಸ್ತವಾಗಿ ಸುಮಾರು ನೂರು ಕೋಟಿ ರೂಪಾಯಿಗಳ ನಷ್ಟದಲ್ಲಿ ನಡೆಯುತ್ತಾ ಇದೆ.

ನೂರು ಕೋಟಿ ರೂಪಾಯಿಗಳ ನಷ್ಟದಲ್ಲಿನಡೆಯುತ್ತಾ ಇರತಕ್ಕಂಥ ಒಂದು ಕೈಗಾರಿಕೆಯನ್ನು ತಾವು ಇಟ್ಟುಕೊಂಡರೆ ಪ್ರಯೋಜನವಾಗುವುದಿಲ್ಲ. ನಾನು ಒಂದು ಸಲಹೆಯನ್ನು ಸರ್ಕಾರಕ್ಕೆ ಕೊಡಲು ಇಚ್ಛಿಪಡುತ್ತೇನೆ ಯಾವ ಕೈಗಾರಿಕೆ ನಷ್ಟದಲ್ಲಿ ಇದೆ ಅದನ್ನು ಮಾರಿ ಎಲ್ಲಿ ಕೈಗಾರಿಕೆಗಳನ್ನು ಮಾಡಲು ಅವಕಾಶ ಇದೆಯೋ ಅಲ್ಲಿ ಕೈಗಾರಿಕೆಯನ್ನು ಮಾಡಿ. ಏಕೆಂದರೆ ಮಂಡ್ಯದಲ್ಲಿ ಕಬ್ಬು ಹೇರಳವಾಗಿ ಬೆಳೆದು ತಮಿಳುನಾಡಿಗೆ ಕಳುಹಿಸಿಕೊಡುತ್ತಿದ್ದೇವೆ. ಮಂಡ್ಯದಲ್ಲಿ ಇನ್ನೂ 3-4 ಶುಗರ್ ಫ್ಯಾಕ್ಟರಿಗಳನ್ನು ಮಾಡಬಹುದು. ಯಾವುದೇ ಒಂದು ಕೈಗಾರಿಕೆ ಆಗಲಿ ಟೆಕ್ನಾಲಜಿ ಹೊಸದಾದಂತೆ ಮಾರ್ಕೆಟ್ ಹೊಸದಾದಂತೆ ಕೆಲವು ಕೈಗಾರಿಕೆಗಳು ನಡೆಯುತ್ತವೆ, ಕೆಲವು ಕೈಗಾರಿಕೆಗಳು ನಡೆಯುವುದಿಲ್ಲ. ನಡೆಯುತಕ್ಕಂಥ ಕೈಗಾರಿಕೆಗಳ ಕಡೆ ಗಮನ ಕೊಡಿ, ನಷ್ಟದಲ್ಲಿ ನಡೆಯುವಂತಹ ಕೈಗಾರಿಕೆಗಳನ್ನು ಮುಚ್ಚುವುದಕ್ಕೆ ಕ್ರಮ ತೆಗೆದುಕೊಳ್ಳಿ. ಇವತ್ತು ನಿಮ್ಮ ಗಂಧದ ಎಣ್ಣೆ ಕೈಗಾರಿಕೆ ಶಿವಮೊಗ್ಗದಲ್ಲಿರತಕ್ಕಂಥಾದ್ದು ಮೈಸೂರಿನಲ್ಲಿರತಕ್ಕಂಥಾದ್ದು ತಾವು ನೋಡಬಹುದು ಅಲ್ಲಿನ ನೌಕರರು ಹೇಳಿಕೆಯನ್ನು ಕೊಡುತ್ತಾ ಇರುತ್ತಾರೆ. ಸ್ವಾಮಿ 3 ವರ್ಷಗಳು ಆಗಿದೆ. ಆ ಕೈಗಾರಿಕೆ ಮುಚ್ಚಿ, ಮುಚ್ಚಿ ಸರ್ಕಾರ ಆ ನೌಕರರಿಗೆ ಪುಕ್ಕಸಟ್ಟೆ ಸಂಬಳ ಕೊಡತಕ್ಕಂಥಾದ್ದು. ಬಡವನಿಂದ ವಸೂಲಿ ಮಾಡಿದಂತಹ ರೆವಿನ್ಯೂನಲ್ಲಿ ನಷ್ಟದಲ್ಲಿ ನಡೆಯುವಂತಹ ಕೈಗಾರಿಕೆಗಳನ್ನು ನಡೆಸತಕ್ಕಂಥಾದ್ದರಲ್ಲಿ ಅರ್ಥವಿಲ್ಲ.

ಆದ್ದರಿಂದ ಆ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ಇದರಿಂದ ಸರ್ಕಾರಕ್ಕೆ ಹೆಚ್ಚು ಆದಾಯ ಬರುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ನಾನು ಇನ್ನೂ ಬಹಳಷ್ಟು ಮಾತನಾಡಬೇಕೆಂದು ಇದ್ದೆ, ತಾವು ಬೆಲ್ ಮಾಡುವುದನ್ನು

ನೋಡಿ ಇನ್ನು ಅರ್ಧ ಗಂಟೆಯಲ್ಲಿ ಮುಗಿಸುತ್ತೇನೆ. ಇವತ್ತು ಹಳ್ಳಿಗಾಡಿನಲ್ಲಿ ಬಸ್ಸುಗಳು ಇಲ್ಲ, ಇವತ್ತು ಕಾಲ ಬದಲಾವಣೆ ಆಗಿದೆ. ಸುಮಾರು 5-10 ಕಿಲೋಮೀಟರ್ಗಳಿಂದ ನಡೆದುಕೊಂಡು ಬರುತ್ತಿದ್ದಂತಹ ಜನರನ್ನು ನಾವು ನೋಡಿದ್ದೇವೆ. ಈಗಿನ ಜನ 2 ಕಿಲೋಮೀಟರ್ ಕೂಡ ನಡೆಯುವುದಕ್ಕೆ ರೆಡಿ ಇಲ್ಲ, ಗ್ರಾಮಾಂತರ ಪ್ರದೇಶಗಳಲ್ಲಿ ಕೊಟ್ಟಿರುವ ಕೆ.ಎಸ್.ಆರ್.ಟಿ.ಸಿ. ಬಸ್ಸುಗಳಿಂದ ನೀವು ಯಾವ ಕಾರಣಕ್ಕೂ ಒಳ್ಳೆಯ ಹೆಸರನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ ಇಲ್ಲ. ಇವತ್ತು ನಿಮ್ಮ ಹತ್ತಿರ ಇರತಕ್ಕಂಥ ಬಸ್ಸುಗಳು ಎಷ್ಟು? ಬಸ್ಸುಗಳು ಎಷ್ಟು ಬೇಕು ಎನ್ನುವ ಪಟ್ಟಿಯನ್ನು ನೋಡಿದರೆ ಏನೇನು ಸಾಲದು. ನೀವು 3-4 ಸಾವಿರ ಬಸ್ಸುಗಳನ್ನು ತೆಗೆದುಕೊಂಡು ಗ್ರಾಮಾಂತರ ಪ್ರದೇಶಕ್ಕೆ ಕೊಡುವುದಕ್ಕೂ ಸಾಧ್ಯವಾಗುವುದಿಲ್ಲ. ನಾನು ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ.

ಯಾವುದಾದರೂ ಒಂದೊಂದು ಜಿಲ್ಲೆಯನ್ನು ನೀವು ಪ್ರೈವೆಟೈಸ್ ಮಾಡಿ, ಆಗ ಪೈಪೋಟಿ ಕ್ರಿಯೇಟ್ ಆಗುತ್ತದೆ. ಆಗ ಹಳ್ಳಿಗಳಲ್ಲಿ ಹೆಚ್ಚು ಬಸ್ಸುಗಳು ಓಡುತ್ತವೆ. ನೀವು ಖಾಸಗಿ ಬಸ್ಸುಗಳನ್ನು ಬೆಂಗಳೂರು ಮಂಗಳೂರು ಹೆದ್ದಾರಿಗಳಲ್ಲಿ ಓಡಿಸಿದರೆ ಜನರಿಗೆ ತೃಪ್ತಿಯಾಗುವುದಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕಂಥ ಬಸ್ಸುಗಳನ್ನು ನೋಡಬೇಕು. ನಮ್ಮ ಕಡೆ ಜನ ಬಸ್ಸಿನ ಟಾಪ್ ಮೇಲೆ ಕೂತು ಪ್ರಯಾಣ ಮಾಡುತ್ತಾರೆ. ಯಾವುದೇ ಬಸ್ಸು ನೀವು ತೆಗೆದುಕೊಳ್ಳಿ ಬಸ್ಸಿನ ಒಳಗಡೆ ಎಷ್ಟು ಜನ ಕುಳಿತಿರುತ್ತಾರೋ ಬಸ್ಸಿನ ಮೇಲೆ ಕೂಡ ಅಷ್ಟು ಜನ ಕುಳಿತಿರುತ್ತಾರೆ. ಆದ್ದರಿಂದ ತಾವು ಇದರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಬೇಕು. ಒಂದು ಹೊಸ ವ್ಯವಸ್ಥೆಯನ್ನು ಮಾಡಿ ತಾಲ್ಲೂಕು ಮಟ್ಟದಲ್ಲಿ ಮಿನಿ ಬಸ್ಸುಗಳನ್ನು ಲೋಕಲ್ ಆಗಿ ಓಡಲಿಕ್ಕೆ ಅವಕಾಶ ಮಾಡಿ ಕೊಡಿ. ಕಾಂಗ್ರೆಸ್ಸ್ ಸರ್ಕಾರವೇ ಬಹಳಷ್ಟು ಮ್ಯಾಕ್ಸಿ ಕ್ಯಾಬ್ಗೆ ಕೊಟ್ಟಿದೆ. ಬೆಂಗಳೂರು ಮೈಸೂರು, ಬೆಂಗಳೂರು, ಮಂಗಳೂರು ಹೆದ್ದಾರಿಗಳಲ್ಲಿ ಓಡಿಸುವುದಕ್ಕೆ ಕೊಟ್ಟಿದ್ದೀರಿ. ಗ್ರಾಮಾಂತರ ಪ್ರದೇಶದಲ್ಲಿ ಓಡಿಸುವುದಕ್ಕೆ ಪರ್ಮಿಟ್ ಇಷ್ಯೂ ಆಗಬೇಕು.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಶಿವರಾಮೇಗೌಡರೇ ಬಸ್ಸಿನ ಮೇಲೆ ಜನ ಕೂಡುತ್ತಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ ಅಲ್ಲವೇ. ಅದರಲ್ಲಿ ಕಾರಣ ಇದೆ, ಸೆಕೆಗೋಸ್ಕರ.

ಶ್ರೀ ಎಲ್.ಆರ್. ಶಿವರಾಮೇಗೌಡ : ಬಹುಶಃ ಅವರ ಏರಿಯ ಎಲ್ಲಾ ಮಲೆನಾಡು ಏರಿಯಾ ಆದ್ದರಿಂದ ಗಾಳಿ ಕಡಿಮೆ. ಜನ ಸೆಕೆಗೋಸ್ಕರ ಕೂರಬಹುದೋ ಏನೋ ನನಗೆ ಗೊತ್ತಿಲ್ಲ.

ಆದರೆ ನಮ್ಮ ಕಡೆ ಬಸ್ಸಿನಲ್ಲಿ ಜಾಗ ಇಲ್ಲದೆ ಕೂರುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದಕ್ಕೆ ಒಂದು ಹೊಸ ಚಿಂತನೆ ಮಾಡಬೇಕು. ನೀವು ಈ ಬಗ್ಗೆ ಚಿಂತನೆ ಮಾಡಿದರೆ ಮಾತ್ರ ಜನ ಏನೋ ಪರವಾಗಿಲ್ಲ ಕಣಯ್ಯ ಜನತಾ ದಳದವರು ಏನೋ ಮಾಡಿದರು ಎಂದು ಹೇಳುತ್ತಾರೆ ಇಲ್ಲದಿದ್ದರೆ ಇವರು ಕಿತ್ತಾಟದಲ್ಲಿ ಬಂದುಬಿಟ್ಟರು ಕಣಯ್ಯ ಎಂದು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಇನ್ನು ಆಸ್ಪತ್ರೆಗಳ ಬಗ್ಗೆ ಸ್ವಾಮಿ, ನಾನು ನನ್ನ ಗುರುಗಳಾಗಿರತಕ್ಕಂಥ ನಾಗೇಗೌಡರನ್ನು ಹೊಗಳುವುದಕ್ಕೆ ಹೇಳುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಯಾವ ಆಸ್ಪತ್ರೆಗಳು?

ಶ್ರೀ ಎಲ್.ಆರ್. ಶಿವರಾಮೇಗೌಡ : ದನದ ಆಸ್ಪತ್ರೆಗಳು. ಆಸ್ಪತ್ರೆ ನಾಗೇಗೌಡರು ಅಂದರೆ ಯಾರೂ ಮನುಷ್ಯರ ಆಸ್ಪತ್ರೆ ಎಂದು ತಿಳಿದುಕೊಳ್ಳುವುದಿಲ್ಲ ದನದ ಆಸ್ಪತ್ರೆ ಎಂದು ಜನ ತಿಳಿದುಕೊಳ್ಳುತ್ತಾರೆ. ಏಕೆಂದರೆ ಸತ್ತು ಹೋದಂತಹ ಒಂದು ಇಲಾಖೆಗೆ

ಜೀವ ಕೊಟ್ಟಂತಹವರು ಎನ್ನುವುದು ಎಲ್ಲರಿಗೂ ತಿಳಿದಿದೆ. ಆದ್ದರಿಂದಲೇ ದನದ ಆಸ್ಪತ್ರೆ ಎಂದು ಹೇಳಿದ್ದು. ಇವತ್ತು ದನದ ಆಸ್ಪತ್ರೆಗಳನ್ನು ಸಾಕಷ್ಟು ಕೊಟ್ಟಿದ್ದಾರೆ. ಇನ್ನೂ ಬಹಳಷ್ಟು ಕೊಡಬೇಕು. ದನದ ಆಸ್ಪತ್ರೆಗಳನ್ನು ಕೊಟ್ಟಿದ್ದಾರೆ ಆದರೆ ಸರಿಯಾದ ಕೊಠಡಿಗಳು ಇಲ್ಲ. ಕಟ್ಟಡಗಳು ಇಲ್ಲ, ಒಂದು ವರ್ಷಕ್ಕೆ ಇಷ್ಟು ಕಟ್ಟಡಗಳನ್ನು ಸರ್ಕಾರ ಕಟ್ಟುತ್ತೇವೆ ಎಂದು ಹೇಳಬೇಕು. ಅದೇ ಪ್ರಕಾರ ಇವತ್ತು ಮನುಷ್ಯರ ಆಸ್ಪತ್ರೆಗಳ ಸ್ಥಿತಿ ಏನಾಗಿದೆ? ಎಷ್ಟೋ ಆಸ್ಪತ್ರೆಗಳಲ್ಲಿ ಕಾಂಪೌಂಡರ್ಸ್ ಇಲ್ಲ. ಎಷ್ಟೋ ಆಸ್ಪತ್ರೆಗಳಲ್ಲಿ ದುರ್ವಾಸನೆ ಹೊಡೆಯುತ್ತಿದೆ. ಡಾಕ್ಟರ್ಸ್ ಇರಲಿ, ಜವಾನರುಗಳೂ ಇಲ್ಲ. ಇವತ್ತು ನಮ್ಮ ನಾಗಮಂಗಲ ಚಿಣ್ಣೆ ಎನ್ನತಕ್ಕಂಥ ಒಂದು ಗ್ರಾಮದಲ್ಲಿ ಕಡಬಳ್ಳಿ ಎನ್ನತಕ್ಕಂಥ ಒಂದು ಗ್ರಾಮದಲ್ಲಿ ಡಾಕ್ಟರ್ಗಳೆಲ್ಲಾ ಎಂ.ಡಿ ಮೇಲ್ದರ್ಜೆಗೆ ಹೋದ ಮೇಲೆ ಈವತ್ತು ಅಲ್ಲಿ ಡಾಕ್ಟರ್ಗಳನ್ನೇ ನೇಮಕ ಮಾಡಲಿಕ್ಕೆ ಆಗಲಿಲ್ಲ.

ಸನ್ಮಾನ್ಯ ಮಲಕರೆಡ್ಡಿಯವರು ಇದ್ದಾಗ ಒಂದುಹೊಸ ತೀರ್ಮಾನವನ್ನು ಮಾಡಿದ್ದರು. ಕಂಟ್ರಾಕ್ಟ್ ಮೇಲೆ ಆಯಾಯಾ ಜಿಲ್ಲೆಯ ಡಾಕ್ಟರಸ್ನು ತೆಗೆದುಕೊಳ್ಳಬೇಕು ಎಂದು ಹೇಳಿ. ಅದ್ದರಿಂದ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುತ್ತೇನೆ. ಸರ್ಕಾರವು ಶೀಘ್ರವಾಗಿ ಡಾಕ್ಟರ್ಗಳನ್ನು ನೇಮಿಸಿಕೊಂಡು ಗ್ರಾಮಾಂತರ ಪ್ರದೇಶಕ್ಕೆ ವೈದ್ಯಕೀಯ ಸೌಲಭ್ಯಗಳು ಸಿಗುವಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಇವತ್ತು ಪ್ರೈಮರಿ ಸ್ಕೂಲಿನಿಂದ ಹಿಡಿದು ಜೂನಿಯರ್ ಕಾಲೇಜ್ನವರೆಗೂ ಹೇಗಿದೆ ಪರಿಸ್ಥಿತಿ? ನಾಗಮಂಗಲ ತಾಲ್ಲೂಕಿನಲ್ಲಿ ಗೋದಾವಿ ಎಂಬ ಗ್ರಾಮದಲ್ಲಿರತಕ್ಕ ಜೂನಿಯರ್ ಕಾಲೇಜ್ನಲ್ಲಿ 4 ವರ್ಷಗಳಿಂದ ಒಬ್ಬ ಗಣಿತದ ಲೆಕ್ಚರ್ ಇಲ್ಲ, ಕೇಳಿದರೆ ರಿಕ್ರೂಟ್ಮೆಂಟ್ ಆದ ಕೂಡಲೇ ಹಾಕುತ್ತೇವೆಂದು ಹೇಳುತ್ತಾರೆ. ರಿಕ್ರೂಟ್ಮೆಂಟ್ ಆಗುವಷ್ಟರಲ್ಲಿ ಆ ಸರ್ಕಾರ ಹೋಗುತ್ತದೆ, ಇಲ್ಲವೇ ಮುಖ್ಯಮಂತ್ರಿಗಳು ಹೋಗುತ್ತಾರೆ. ಇದರಿಂದ ಇವತ್ತು ಟೀಚರ್ಗಳನ್ನು ತೆಗೆದುಕೊಳ್ಳಲು ಆಗುತ್ತಿಲ್ಲ, ಉಪಾಧ್ಯಾಯರು ಇಲ್ಲದೆ ಸಾಕಷ್ಟು ಹಳ್ಳಿಗಳಲ್ಲಿ ಮಕ್ಕಳು ವಿದ್ಯಾಭ್ಯಾಸ ಮಾಡಲು ಸಾಧ್ಯವಾಗುತ್ತಿಲ್ಲ. ಇವತ್ತು ಬೆಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡಿದಂತಹ ಮಕ್ಕಳು ಅಂದರೆ ಸೋಫಿಯಾದಲ್ಲಿ ಬಿಷಪ್ ಕಾಟನ್ ಸ್ಕೂಲ್ನಲ್ಲಿ, ಪೂರ್ಣಪ್ರಜ್ಞಾ ಸ್ಕೂಲ್ನಲ್ಲಿ ವ್ಯಾಸಂಗ ಮಾಡಿದಂತಹ ಮಕ್ಕಳ ಜೊತೆಯಲ್ಲಿ ಗ್ರಾಮಾಂತರ ಪ್ರದೇಶದ ಮಕ್ಕಳ ಪೈಪೋಟಿ ಮಾಡಬೇಕಾಗಿದೆ. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇಬ್ಬರೂ ಗ್ರಾಮಾಂತರ ಪ್ರದೇಶದಿಂದ ಬಂದವರು. ಈ ಗ್ರಾಮಾಂತರ ಪ್ರದೇಶದ ಬಗ್ಗೆ ಹೆಚ್ಚು ಕಾಳಜಿಯನ್ನು ವಹಿಸಬೇಕು. ನಗರಕ್ಕೆ ಸೀಮಿತ ಮಾಡಿದರೂ ಚಿಂತೆ ಇಲ್ಲ.

ಆದ್ದರಿಂದ ಗ್ರಾಮಾಂತರ ಪ್ರದೇಶಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಸಹಕಾರ ಸಂಘಗಳ ಬಗ್ಗೆ ಕೊನೆಯದಾಗಿ ತಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ನಮ್ಮ ಕೊ-ಆಪರೇಟಿವ್ ಆಕ್ಟನ್ ಪ್ರಕಾರ ನಮ್ಮ ರಾಜ್ಯದಲ್ಲಿರತಕ್ಕ ಯಾವುದೋ ಒಂದು ಕುಗ್ರಾಮದಲ್ಲಿರತಕ್ಕಂಥ ಒಂದು ಸೊಸೈಟಿ ಅದು ಹಾಲಿನ ಸೊಸೈಟಿಯಾಗಿರಬಹುದು, ವ್ಯವಸಾಯ ಸೇವಾ ಸಹಕಾರ ಸಂಘವೇ ಆಗಿರಬಹುದು, ಆ ಸೊಸೈಟಿಗಳು ಒಂದು ವರ್ಷ ಚುನಾವಣೆಯನ್ನು ಸರಿಯಾದ ಕಾಲದಲ್ಲಿ ಮಾಡಲಿಲ್ಲ ಅಂದರೆ, ಆ ಸೊಸೈಟಿಯನ್ನು ಸುಪರ್ಸೀಡ್ ಮಾಡಿ ಅಲ್ಲಿ ಅಡ್ಮಿನಿಸ್ಟ್ರೇಟರ್ನ್ನು ಹಾಕತಕ್ಕಂಥ ಒಂದು ಪರಿಪಾಠವು ಈ ರಾಜ್ಯದಲ್ಲಿ ನಡೆಯುತ್ತಿದೆ. ನಾನು ಕೇಳಿಕೊಳ್ಳುವುದೇನೆಂದರೆ ಈ ರಾಜ್ಯದಲ್ಲಿ ಸುಮಾರು 80 ಲಕ್ಷ ಜನಸಂಖ್ಯೆ ಇರತಕ್ಕಂಥ ಒಂದು ಒಕ್ಕಲಿಗರ ಸಂಘ ಎನ್ನುವುದು ಬೆಂಗಳೂರಿನಲ್ಲಿಂದು ತಲೆ ಎತ್ತಿದೆ. ಆದರೆ ಅಲ್ಲಿ ಚುನಾವಣೆ ನಡೆದು ನಾಲ್ಕೂವರೆ ವರ್ಷಗಳಾದುವು. ಸುಮಾರು 45 ಸಾವಿರ ಜನ ಸದಸ್ಯರ ಸಂಖ್ಯೆಂದುನ್ನು ಪಡೆದಿರತಕ್ಕಂಥ ಒಕ್ಕಲಿಗರ ಸಂಘದಲ್ಲಿ ಚುನಾವಣೆ ನಡೆಸಿಲ್ಲ, ಅಲ್ಲಿ ಸದಸ್ಯತ್ವವನ್ನು ಪಡೆಯಲು ಜನರು ಕಾತುರರಾಗಿದ್ದಾರೆ.

ಆದರೆ ಅಲ್ಲಿರತಕ್ಕಂಥ ಆಡಳಿತ ಮಂಡಳಿಯವರು ಯಾವ ಕಾಲಕ್ಕೂ ಅವರಿಗೆ ಮೆಂಬರ್‌ಶಿಪ್ ಕೊಡುತ್ತಾ ಇಲ್ಲ. ಇವೊತ್ತು ಅಲ್ಲಿ 1 ಲಕ್ಷ 54 ಸಾವಿರ ಜನರು ಅಲ್ಲಿ ಸದಸ್ಯರಾಗಲು ತಯಾರಾಗಿದ್ದಾರೆ. ಈಗ ಇಲ್ಲಿ ಮುಖ್ಯಮಂತ್ರಿಯವರು ಇಲ್ಲ, ಉಪಮುಖ್ಯಮಂತ್ರಿಯವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು. ಏತಕ್ಕೆಂದರೆ ಇದು 80 ಲಕ್ಷ ಜನರ ಭವಿಷ್ಯದ ಪ್ರಶ್ನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಚುನಾವಣೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಏಪ್ರಿಲ್, ಮೇ, ಜೂನ್‌ನಲ್ಲಿ ಎಲ್ಲಾ ಚುನಾವಣೆಗಳನ್ನು ಮುಗಿಸುತ್ತೇವೆ. ಪ್ರತಿಯೊಂದು ಸಹಕಾರ ಸಂಘದಲ್ಲಿ ಯಾರು ಮೆಂಬರ್ ಆಗಲು ಬರುತ್ತಾರೋ ಅವರೆಲ್ಲರನ್ನೂ ಮೆಂಬರ್ ಮಾಡಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕೇಳುತ್ತಿರುವುದು ನಮ್ಮ ಬೆಂಗಳೂರು ನಗರದಲ್ಲಿರತಕ್ಕಂಥ ಒಕ್ಕಲಿಗರ ಸಂಘದ ವಿಚಾರ. ಇವೊತ್ತು ಒಕ್ಕಲಿಗರ ಸಂಘದಲ್ಲಿ ಹಗಲು ದರೋಡೆಯು ನಡೆಯುತ್ತಾ ಇದೆ. ಸರಕಾರವು ಕಣ್ಣುಮುಚ್ಚಿಕೊಂಡು ಕುಳಿತಿದೆ. ಸುಮಾರು 1 ಲಕ್ಷ 54 ಸಾವಿರ ಜನರು ಇವೊತ್ತು ನಾವು ಮೆಂಬರ್ ಆಗುತ್ತೇವೆ, ನಾವು ನಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತೇವೆ ಅಂದರೆ ಐದು ವರ್ಷಗಳಿಂದ ಅಲ್ಲಿ ಮೆಂಬರ್‌ಶಿಪ್ ಕೊಟ್ಟಿಲ್ಲ. ಚುನಾವಣೆ ಮಾಡಬೇಕೆಂದು ಮಾಡಿದ್ದಾರೆ, ಹಳೆಯ ಬೋರ್ಡ್‌ನವರು ತಮಗೆ ಬೇಕಾದಂಥ ಜನರನ್ನು ಮಾತ್ರ ಮೆಂಬರ್‌ಶಿಪ್ ಮಾಡಿಸಿಕೊಂಡಿದ್ದಾರೆ. ಅವರ ಫೋಟೋ ಇಲ್ಲಿ ತಂದು ಕೊಟ್ಟು ಗೋಲ್ಮಾಲ್ ಮಾಡುತ್ತಾ ಇದ್ದಾರೆ. ಹಗಲು ದರೋಡೆ ನಡೆಯುವುದನ್ನು ಎಲ್ಲಿಯಾದರೂ ನೀವು ನೋಡಬೇಕೆಂದು ಇಚ್ಛೆಪಟ್ಟರೆ ಒಕ್ಕಲಿಗರ ಸಂಘಕ್ಕೆ ಬರಬೇಕು. ಇದರ ಬಗ್ಗೆ ಒಂದು ಸಿಓಡಿ ತನಿಖೆಯನ್ನು ಮಾಡಿಸಿ. ಇವೊತ್ತು ಕೋಟ್ಯಾಂತರ ರೂಪಾಯಿಗಳಷ್ಟು ಒಕ್ಕಲಿಗರ ಸಂಘದಿಂದ ಲಾಸ್ ಆಗುತ್ತಾ ಇದೆ.

1991ನೇ ಇಸವಿಯಲ್ಲಿ 3 ಕೋಟಿ 90 ಲಕ್ಷ ರೂಪಾಯಿಗಳಷ್ಟು ಒಕ್ಕಲಿಗರ ಸಂಘದ ವರಮಾನ ಇದ್ದರೆ, 1993ರಲ್ಲಿ 8 ಕೋಟಿ ರೂಪಾಯಿಗಳ ವರಮಾನವನ್ನು ಅಲ್ಲಿ ನೋಡುತ್ತಾ ಇದ್ದೇವೆ. ಹೀಗೆ ನಾಲ್ಕು ಕೋಟಿ ರೂಪಾಯಿಗಳು ಒಂದೇ ವರ್ಷದಲ್ಲಿ ವರಮಾನ ಬರಬೇಕಾಗಿದ್ದರೆ, ಎಷ್ಟು ಹಣ ಪೋಲು ಆಗುತ್ತಿತ್ತು ಎಂಬುದನ್ನು ತಾವುಗಳು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲಿ ಚುನಾವಣೆಯನ್ನು ಮಾಡಿದರೂ ಕೂಡ ಅವರ ಕೈಗೆ ಆಡಳಿತವು ಸಿಗಬೇಕು, ಇದು ಬೇರೆಯವರ ಕೈಗೆ ಹೋಗಬಾರದು, ಮೆಂಬರ್‌ಶಿಪ್ ಕೊಟ್ಟರೆ ಅಲ್ಲಿಗೆ ಬೇರೆಯವರು ಬರುತ್ತಾರೆ, ಆಗ ನಮ್ಮ ಹಿಡಿತ ಹೋಗುತ್ತದೆ ಎನ್ನುವ ಕಾರಣದಿಂದ ಬೇರೆಯವರಿಗೆ ಕೊಡುತ್ತಿಲ್ಲ. ತಾವು ಅವರ ವಿಚಾರವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಮಾನ್ಯ ಗೃಹಮಂತ್ರಿಯವರು ಗಮನ ಕೊಡಬೇಕು, ಪ್ರತಿಯೊಂದು ಸಣ್ಣ ಮೀಟಿಂಗ್ ನಡೆದರೂ ಕೂಡ ಅಲ್ಲಿ ಹತ್ತು ಪೋಲೀಸ್ ವ್ಯಾನ್ ನಿಲ್ಲಿಸಿಕೊಂಡು ಮಾಡಬೇಕಾಗಿದೆ. ಇದರಿಂದಾಗಿ ಇಡೀ ನಮ್ಮ ಸಮುದಾಯ ತಲೆತಗ್ಗಿಸಬೇಕಾಗಿ ಬಂದಿದೆ. ತಾವು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಒಂದು ಡಿಸಿಸಿ ಬ್ಯಾಂಕ್ ಒಂದು ಮಿಲ್ಕ್‌ಯೂನಿಯನ್, ಅಥವಾ ಒಂದು ಕೋಆಪರೇಟಿವ್ ಸೊಸೈಟಿಯೋ, ಯಾವುದೋ ಒಂದು ಸಕ್ಕರೆ ಕಾರ್ಖಾನೆಯವರು ಭ್ರಷ್ಟಾಚಾರ ಮಾಡಿದರೆ, ತೀವ್ರವಾಗಿ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ. ನಾನು ತಮ್ಮ ಮೂಲಕ ಒತ್ತಾಯ ಮಾಡುವುದೇನೆಂದರೆ ಇವೊತ್ತು ಒಕ್ಕಲಿಗರ ಸಂಘದಲ್ಲಿ ನಡೆಯುತ್ತಾ ಇರತಕ್ಕಂಥ ಹಗಲು ದರೋಡೆಯನ್ನು ತಾವು ನಿಲ್ಲಿಸಬೇಕು, ಸರಕಾರದವರು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನೂ ಸೂಪರ್‌ಸೀಡ್ ಮಾಡಿ, ಅಡ್ಮಿನಿಸ್ಟ್ರೇಟರನ್ನು ಹಾಕಿ ಅಲ್ಲಿ ಇದುವರೆಗೆ ಏನು ಅನ್ಯಾಯ ನಡೆದಿದೆ ಅದನ್ನು

ತನಿಖೆ ಮಾಡಿಸಬೇಕು. ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ದಯಮಾಡಿ ತಮ್ಮ ಉಪಮುಖ್ಯಮಂತ್ರಿಯವರು ಈ ಬಗ್ಗೆ ತಮ್ಮ ಸರಿಯಾದ ನಿಲುವನ್ನು ಪ್ರಕಟಣೆ ಮಾಡಬೇಕು. ನಾವು ಕೂಡ 40 ಜನ ಶಾಸಕರು ಇಲ್ಲಿದ್ದೇವೆ. ಇವೊತ್ತು ಒಬ್ಬ ಬಡವನಿಗೆ ಒಂದು ಎಂ.ಡಿ. ಸೀಟ್ನು ಪಡೆಯಬೇಕೆಂದರೆ ಅಲ್ಲಿನ ಕ್ಯಾಪಿಟೇಷನ್ ಶುಲ್ಕದ ಹಾವಳಿಯನ್ನು ನೋಡಬೇಕು, ಅಲ್ಲಿ ಬೀದಿ ವ್ಯಾಪಾರ ಮಾಡಿದ ಹಾಗೆ ಮಾಡುತ್ತಿದ್ದಾರೆ. ಒಂದು ಎಂ.ಡಿ. ಸೀಟ್ ಒಂದು ಮೆಡಿಕಲ್ ಸೀಟು ತೆಗೆದುಕೊಳ್ಳಬೇಕೆಂದರೆ 30 ಲಕ್ಷ ರೂಪಾಯಿಗಳ ವರೆಗೆ ಅಲ್ಲಿ ವ್ಯಾಪಾರ ನಡೆಯುತ್ತದೆ. ಒಬ್ಬೊಬ್ಬ ಸದಸ್ಯನಿಗೆ 15 ಲಕ್ಷ ರೂಪಾಯಿಗಳನ್ನು ಕೊಡಬೇಕು. ಹೀಗೆ ಒಬ್ಬ ಸದಸ್ಯ 15 ಲಕ್ಷ ರೂಪಾಯಿಗಳ ದರೋಡೆ ಮಾಡುತ್ತಾನೆ.

6.55 ಪಿ.ಎಂ

ಇವತ್ತು 3,000 ಜನ ನೌಕರರಿದ್ದಾರೆ. ನೀವೇನಾದರೂ ಸರ್ಕಾರ ಕ್ರಮ ತೆಗೆದುಕೊಳ್ಳದೆ ಬಿಟ್ಟಿದ್ದೇ ಆದರೆ ಕೇವಲ 6 ತಿಂಗಳಲ್ಲಿ ಬಿಲ್ಡಿಂಗ್ಗಳನ್ನು ಕೂಡ ಮೆಂಬರ್ಗಳೇ ಬರೆಯಿಸಿಕೊಂಡು ಬಿಡುತ್ತಾರೆ. ಇದರಿಂದ ಅಲ್ಲಿರುವ ನೌಕರರುಗಳು ಬೀದಿಪಾಲಾಗುತ್ತಾರೆ. ಆದ್ದರಿಂದ ನಾನು ಸನ್ಮಾನ್ಯ ಗೆಳೆಯರಾದ ನಾರಾಯಣ್ರವರು ಹಾಗೂ ಮುದ್ದಹನುಮೇಗೌಡರು ಕಾಲ್ ಅಟನ್ಷನ್ ಈಗಾಗಲೇ ಕಳುಹಿಸಿದ್ದೇವೆ. ಅದರ ಬಗ್ಗೆ ಸಂಕ್ಷಿಪ್ತವಾಗಿ ಚರ್ಚೆ ಮಾಡಬೇಕಾಗಿದೆ. ಸರ್ಕಾರ ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕಾಗಿದೆ. ಯಾರು ತಪ್ಪಿತಸ್ಥರಿದ್ದಾರೆ ಭ್ರಷ್ಟರಿದ್ದಾರೆ ಅವರನ್ನು ಸರ್ಕಾರ ಬಲಿಹಾಕಬೇಕಾಗಿದೆ ಎಂದು ಸರ್ಕಾರದ ಗಮನ ಸೆಳೆಯಲು ನಾವು ಕಳಿಸಿದ್ದೆವು, ಅದು ಇವತ್ತು ಬರಬೇಕಾಗಿತ್ತು, ಬರಲಿಲ್ಲ, ಆದ್ದರಿಂದ ನಾನು ಈ ರಾಜ್ಯಪಾಲರ ಭಾಷಣದ ಮೂಲಕ ಸರ್ಕಾರದ ಗಮನ ಸೆಳೆಯುತ್ತೇನೆ. ತಾವು ಇದರ ಬಗ್ಗೆ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಜೆ.ಎಚ್. ಪಟೇಲ್ : ಈಗ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಒಕ್ಕಲಿಗರ ಸಂಘದಲ್ಲಿ ಆಗಿರಬಹುದಾದ ಕಾನೂನು ವಿರುದ್ಧ ಯಾವುದೇ ಚಟುವಟಿಕೆ ಇದ್ದರೆ, ಅದನ್ನು ಸರ್ಕಾರ ತನಿಖೆ ನಡೆಸುತ್ತದೆ. ತಪ್ಪಿತಸ್ಥರಿಗೆ ಶಿಕ್ಷೆ ಕೊಡುತ್ತದೆ. ಮಾನ್ಯ ಸದಸ್ಯರು ಸ್ಪೆಸಿಫಿಕಾಗಿ ಚಾರ್ಜಸನ್ನು ಸರ್ಕಾರಕ್ಕೆ ಬರೆದುಕೊಟ್ಟುಬಿಟ್ಟರೆ ಅನುಕೂಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ನಾನು ಸ್ಪೆಸಿಫಿಕಾಗಿ ಅಂದರೆ ಈಗ ನಾವು ಹೊರಗಡೆ ಇದ್ದೇವೆ ಸ್ವಾಮಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಅಧ್ಯಕ್ಷರೇ, ಒಕ್ಕಲಿಗರ ಸಂಘ ಒಂದು ಖಾಸಗೀ ಸಂಸ್ಥೆ, ಸರ್ಕಾರದ ಜ್ಯೂರಿಸ್‌ಡಿಕ್ಷನ್ ಏನು? ಆ ರೀತಿಯಾಯಿತೆಂದರೆ ಕಾನೂನಿನಲ್ಲಿ ನಿಮಗೆ ಅಧಿಕಾರ ಇದ್ದರೆ ನೀವು ಚಲಾಯಿಸಬಹುದು. ಅದು ಅವರವರದು. ಅದರ ಬಗ್ಗೆ ತಾವು ಸ್ವಲ್ಪ ಮಾಹಿತಿಯನ್ನು ನನಗೆ ನೀಡಬೇಕು.

ಶ್ರೀ ಜೆ.ಎಚ್. ಪಟೇಲ್ : ಅದು ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿರುವ ಒಂದು ಸಂಸ್ಥೆ. ಯಾವುದೇ ಸಂಸ್ಥೆ ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ರಿಜಿಸ್ಟರ್ ಆಗಿದ್ದರೆ ಒಕ್ಕಲಿಗರದಾಗಿರಲಿ ಕುರುಬರದಾಗಿರಲಿ ಲಿಂಗಾಯಿತರಾಗಿರಲಿ ಕಾನೂನು ಮುರಿಯುವ ಅಟಾನಮಿ ಇರುವುದಿಲ್ಲ, ಕಾನೂನು ಫ್ರೇಂವರ್ಕ್ ಒಳಗೇ ಅದಕ್ಕೆ ಅಥಾರಿಟಿ. ಅದಕ್ಕೆ ನಾನು ಮಾನ್ಯ ಸದಸ್ಯರನ್ನು ಕೇಳಿದ್ದುದು ಸ್ಪೆಸಿಫಿಕಾಗಿ ಇಂಥದ್ದು ಕಾನೂನು ವಿರುದ್ಧವಾದ ಕೆಲಸ ನಡೆದಿದೆ ಎಂದರೆ ತನಿಖೆ ಮಾಡಿಸುತ್ತೇವೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಸನ್ಮಾನ್ಯ ಉಪಮುಖ್ಯಮಂತ್ರಿಗಳು ಯಾವುದಾದರೂ ಸ್ಪೆಸಿಫಿಕಾಗಿದ್ದರೆ ಕೊಡಿ ಎಂದು ಕೇಳಿದರು. ಆ ಸಂಘದೊಳಕ್ಕೆ ಈ ಆಡಳಿತ ಮಂಡಲಿ ಹೋದ ಮೇಲೆ ಯಾರಿಗೂ ಈ ವ್ಯವಸ್ಥೆಯಲ್ಲಿ ಪ್ರವೇಶ

ಸಿಕುತ್ತಿಲ್ಲ ಸ್ವಾಮಿ. ತಾವು ಸಂಪೂರ್ಣವಾಗಿ ತನಿಖೆ ಮಾಡಿ. ಒಂದು ಉದಾಹರಣೆ ಕೊಡುತ್ತೇನೆ. ಒಂದು ಎಂಡಾಸ್ಕೋಪಿ ಮೆಷಿನ್ ಅನ್ನು 18 ಲಕ್ಷ ಕೊಟ್ಟು ತಂದಿರುವುದಕ್ಕೆ 30 ಲಕ್ಷ ರೂ ಬಿಲ್ಲ ಹಾಕಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಗೆ ಈ ಎಂಡಾಸ್ಕೋಪಿ ಮೆಷಿನ್‌ನ್ನು ಸರ್ಕಾರ ತಂದಾಗ, ಅಲ್ಲಿದ್ದ ಒಬ್ಬ ಸೂಪರಿಂಟೆಂಡೆಂಟರು ಸರಿಯಾಗಿ ಬಿಲ್ ಹಾಕಿಸಿಕೊಂಡು ಬಂದಿರಲಿಲ್ಲ ಎಂದು ಇದೇ ಸದನದಲ್ಲಿ ಅರ್ಧ ಗಂಟೆ ಚರ್ಚೆಯಾಗಿತ್ತು ಎಂಬುದನ್ನು ತಮ್ಮ ಮತ್ತು ಸದನದ ಗಮನಕ್ಕೆ ತರಲಿಕ್ಕೆ ಇಚ್ಛಿಪಡುತ್ತೇನೆ. ಒಕ್ಕಲಿಗರ ಸಂಘದಲ್ಲಿ ಪ್ರತಿಯೊಂದರ ಬಗ್ಗೆಯೂ ಸಂಪೂರ್ಣವಾಗಿ ತನಿಖೆ ಮಾಡಿಸಿ.

ಶ್ರೀ ಎ.ಟಿ. ರಾಮಸ್ವಾಮಿ : ಉಪಾಧ್ಯಕ್ಷರೇ, ಈ ಎಲ್‌ಆರ್ ಶಿವರಾಮೇಗೌಡರು ಮಾತನಾಡುತ್ತಾ ಒಂದು ಗುರುತರವಾದ ಅಪಾದನೆಯನ್ನು ಒಂದು ಸಂಘದ ಮೇಲೆ ಮಾಡಿದರು. ಮಾನ್ಯ ಉಪಮುಖ್ಯಮಂತ್ರಿಗಳು ಆ ತರಹ ಗುರುತರವಾದ ಅಪಾದನೆ ಇದ್ದರೆ ಲಿಖಿತ ಮೂಲಕ ಕೊಡಿ ಎಂದರು. ನನಗೆ ಅನ್ನಿಸುತ್ತದೆ ಇಂತಹ ಮಹತ್ವದ ಸಭೆಯೊಳಗೆ ಅವರು ಆರೋಪ ಮಾಡಿರುವುದು ದಾಖಲೆಗೆ ಹೋಗಿದೆ. ಅಷ್ಟೇ ಸಾಕು. ಅದಕ್ಕೇನು ಲಿಖಿತ ದೂರು ಬೇಕಿಲ್ಲ ಎರಡನೆಯದು ಯಾವುದೇ ಒಂದು ಜನಾಂಗ ಅಥವಾ ಜಾತಿ, ಜಾತಿ ಹೆಸರಿನಲ್ಲಿ ಶೋಷಣೆ ಮಾಡುವುದಕ್ಕೆ ಹೋಗಬಾರದು. ಅಲ್ಲಿ ಅಕ್ರಮ ಅವ್ಯವಹಾರಗಳು ನಡೆಯಬಾರದು ಆ ದಿಕ್ಕಿನಲ್ಲಿ ತಾವು ದಯಮಾಡಿ ನಿಯಮಗಳ ರೀತ್ಯಾ, ಆ ಸಂಘ ಕೆಲಸಮಾಡಿದೆಯೇ ಇಲ್ಲವೇ ಹಾಗೆ ಮಾಡದೇ ಇದ್ದರೆ ದಯಮಾಡಿ ತುರ್ತಾಗಿ ಕ್ರಮ ಕೈಗೊಳ್ಳಬೇಕು ಅಕ್ರಮಗಳು ಅವ್ಯವಹಾರಗಳು ಮುಂದೆ ಇನ್ನೂ ಹೆಚ್ಚಾಗಿ ನಡೆಯಲು ಅವಕಾಶ ಮಾಡಿಕೊಡಬಾರದೆಂದು ಈ ಸಂದರ್ಭದಲ್ಲಿ ನಾನೂ ಕೂಡ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ಇದರ ಹಿಂದೆ ಅಧ್ಯಕ್ಷರಾಗಿದ್ದ ಪ್ರೊ|| ವೆಂಕಟಗಿರಿಗೌಡರು 1-2 ಕೇಸುಗಳನ್ನು ಕೋರ್ಟಿಗೆ ಹಾಕಿದರು ಅಲ್ಲಿ ಅದು ಇನ್ನೂ ಪೆಂಡಿಂಗ್ ಇದೆ. ಮಾನ್ಯ ಶಿವರಾಮೇಗೌಡರವರು ಎಂ.ಬಿ.ಬಿ.ಎಸ್. ಸೀಟಿಗೆ 30 ಲಕ್ಷ ತೆಗೆದುಕೊಳ್ಳುತ್ತಿದ್ದಾರೆಂದು ಹೇಳುತ್ತಿದ್ದಾರೆ. ನಾನೂ ಕೂಡ ಒಂದು ಕಾಲೇಜು ನಡೆಸುತ್ತಿದ್ದೇನೆ. ಯಾರೂ 30 ಲಕ್ಷ ಕೊಡುವುದಿಲ್ಲ. ಯಾರ್‍ಯಾರ ಹತ್ತಿರ 30 ಲಕ್ಷ ತೆಗೆದುಕೊಂಡಿದ್ದಾರೆ. ಅದನ್ನು We will haul them up under the 30 revention of capitation Fee Act.

ಸುಮ್ಮನೆ 30 ಲಕ್ಷ 50 ಲಕ್ಷ ತೆಗೆದುಕೊಂಡಿದ್ದಾರೆಂದು ಹೇಳುವುದು ಸರಿಯಲ್ಲ. ಸ್ಪೆಸಿಫಿಕ್ ಆಗಿ ಯಾರ್‍ಯಾರ ಹತ್ತಿರ 25-30 ಲಕ್ಷ ತೆಗೆದುಕೊಂಡಿದ್ದಾರೆ. ಎಂಬುದನ್ನು ಬರೆದುಕೊಟ್ಟರೆ We will get it examined.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ,ನಾನು ನೋಡುತ್ತಿದ್ದೇನೆ. ಅವರು ಒಂದು ಆಪಾದನೆ ಮಾಡಿದ ಹಾಗೆ ಮಾಡಿದರು. ಮಂತ್ರಿಗಳು ಅದಕ್ಕೆ ಉತ್ತರ ಕೂಡ ಕೊಟ್ಟರು. ಒಂದು ಸಮಾಜದವರು ಒಂದು ಸಂಘ ನಡೆಸುತ್ತಿದ್ದಾರೆ. ಗೌರವಾನ್ವಿತ ಮನುಷ್ಯರೆಲ್ಲಾ ಆ ಸಂಘದಲ್ಲಿ ಇದ್ದಾರೆ. ಡಿಫೆಂಡ್ ಮಾಡುವುದಕ್ಕೆ ಇಲ್ಲದವರ ಬಗ್ಗೆ ಆಪಾದನೆ ಮಾಡಬಾರದೆಂದು ಹೇಳುತ್ತೇವೆ. ಅದು ವ್ಯಕ್ತಿಗಳಿಗೆ ಅನ್ವಯಿಸುತ್ತದೆಯೋ ಸಂಘಕ್ಕೂ ಅನ್ವಯಿಸುತ್ತದೆಯೋ? ಏಕೆಂದರೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಬರುವಂಥಹ ವಿಚಾರಗಳು ಇಲ್ಲಿ ನಡೆಯಬಾರದು. ನೀವು ಯಾವಾಗ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ 10 ಪರ್ಸೆಂಟಿಗೆ ಇಳಿಸಿದರೋ ಸರಕಾರವೇ ಅನುಮತಿ ಕೊಟ್ಟಿತು. ಕೋರ್ಟ್ ಅನುಮತಿ ಕೊಟ್ಟಿತು. ಯಾವ ಸೀಟಿಗೆ ಎಷ್ಟು ಲಕ್ಷ ಬೇಕಾದರೂ ವಸೂಲು ಮಾಡಿ ಎಂದು. ಅದು ದರೋಡೆ ಎಂದು ಕರೆಯುವುದಾದರೆ ಆ ದರೋಡೆಗೆ ಸರಕಾರ, ಸುಪ್ರೀಂ ಕೋರ್ಟ್ ಎಲ್ಲಾ ಅನುಮತಿ

ಕೊಟ್ಟಿದ್ದೀರಿ. ಇಲ್ಲಿ ಮಾತನಾಡುವುದು ಏನಿದೆ? ಅನುಮತಿ ಕೊಡುವಾಗ ಇದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು. ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟಿದೆ, ಅದನ್ನು ಅನುಸರಿಸಿ ಸರಕಾರ ಕೊಟ್ಟಿದೆ. ಇಲ್ಲಿ ಮಾತನಾಡತಕ್ಕಂತಹ ಕಾಲದಲ್ಲಿ ಒಂದು ಶಿಷ್ಟಾಚಾರ ಇರಬೇಕು. ಉದಾಹರಣೆಗೆ ಹೇಳುವುದಾದರೆ ಸಿರಿಗೆರಿ ಮಠದಲ್ಲಿ ಈ ರೀತಿ ಮಾಡುತ್ತಿದ್ದಾರೆ ಇಲ್ಲವೇ ಇನ್ನೊಂದು ಸಂಘದಲ್ಲಿ ಮಾಡುತ್ತಿದ್ದಾರೆಂದು ಎಂದು ಹೇಳತಕ್ಕಂಥಾದ್ದರಲ್ಲಿ.

ಶ್ರೀ ಜೆ.ಹೆಚ್. ಪಟೇಲ್ : ನಾನು ಹೇಳುವಾಗ ಏನು ಹೇಳಿದೆ ಎಂದು ವಿಚಾರ ಮಾಡಿ. ರಿಜಿಸ್ಟ್ರೇಷನ್ ಆಕ್ಟ್ ಕೆಳಗೆ ಯಾವುದೇ ಸಂಘ ರಿಜಿಸ್ಟರ್ ಆಗಿದ್ದರೆ ಕುರುಬರ ಸಂಘ ಇರಬಹುದು. ವೀರಶೈವ ಮಹಾ ಸಭಾ ಇರಬಹುದು. ಈ ತರಹ ರಿಜಿಸ್ಟರ್ ಆದ ಸಂಘಗಳು ತಮ್ಮದೇ ರೀತಿಯಲ್ಲಿ ಕಾನೂನು ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಅವರ ಕಾನೂನು ಚೌಕಟ್ಟಿನೊಳಗೆ ಅವರು ಮಾಡಿದ್ದರೆ ನಾವು ಕೇಳುವುದಕ್ಕೆ ಬರುವುದಿಲ್ಲ, ಅದಕ್ಕೇ ಸ್ಪೆಸಿಫಿಕ್ ಆಗಿ ಬರೆದುಕೊಡಿ ಎಂದು ಹೇಳಿದ್ದುದು.

ಶ್ರೀ ಹೆಚ್.ಎನ್. ನಂಜೇಗೌಡ : ನನ್ನ ಸ್ವಭಾವ ನಿಮಗೆ ಹೇಳುತ್ತೇನೆ. ಇಲ್ಲಿಯ ವರೆಗೆ ಒಕ್ಕಲಿಗರು ಕರೆದಂತಹ ಒಂದು ಸಭೆಗೂ ನಾನು ಹೋಗಿಲ್ಲ. ನಾನು ಜಾತೀಯ ಸಭೆಗಳಿಗೆ ಹೋಗುವುದಿಲ್ಲ. ಅದು ನನ್ನ ವೈಯಕ್ತಿಕವಾದಂಥ ಅಭಿಪ್ರಾಯ. ಯಾವುದೇ ಸಮಾಜವರು ಸಂಘ ಸಂಸ್ಥೆ ನಡೆಸತಕ್ಕಂತಹ ಕಾಲದಲ್ಲಿ, ಅನಾವಶ್ಯಕವಾಗಿ ಅದಕ್ಕೆ ಮಸಿ ಬಳಿಯುವಂತಹ ಕಾರ್ಯವನ್ನು ನಾವು ಮಾಡಬಾರದು. ನಾನು ಇದರ ಬಗ್ಗೆ ವಿನಂತಿಸಿಕೊಳ್ಳುತ್ತೇನೆ. ಇದೊಂದು ಶಿಷ್ಟಾಚಾರವನ್ನು ಪಾಲನೆ ಮಾಡಬೇಕು.

ಉಪಾಧ್ಯಕ್ಷರು : ಮಾನ್ಯ ನಂಜೇಗೌಡರು ಮಾತನಾಡತಕ್ಕಂತಹ ಕಾಲದಲ್ಲಿ ಸುಪ್ರೀಂ ಕೋರ್ಟಿನ ಬಗ್ಗೆ ಸ್ವಲ್ಪ ಸುಲಿಗೆಗೆ ಅವಕಾಶ ಮಾಡಿಕೊಟ್ಟಿದೆ ದರೋಡೆಗೆ ಅವಕಾಶ ಮಾಡಿಕೊಟ್ಟಿದೆ ಎಂಬ ಶಬ್ದ ಉಪಯೋಗ ಮಾಡಿದರು.....

SRI H.N. NANJEGOWDA : I did not say like that. Don't put unnecessary words into my mouth.

ಸುಪ್ರೀಂ ಕೋರ್ಟ್ ತೀರ್ಮಾನ ಕೊಟ್ಟಿದೆ, ಅದನ್ನು ಅನುಸರಿಸಿ ಸರಕಾರ ಎಷ್ಟು ಬೇಕಾದರೂ ವಸೂಲು ಮಾಡಿಕೊಳ್ಳಲಿ ಎಂದು ಅವಕಾಶ ಕೊಟ್ಟಿದೆ ಇದನ್ನು ದರೋಡೆ ಎಂದು ಕರೆಯುವುದಾದರೆ ಕರೆದುಕೊಳ್ಳಿ ನನ್ನದೇನೂ ಇಲ್ಲವೆಂದು ನಾನು ಹೇಳಿದೆ. ಸುಪ್ರೀಂ ಕೋರ್ಟ್ ದರೋಡೆ ಮಾಡಿ ಎಂದು ಹೇಳಿದೆ ಎಂದು ನಾನು ಹೇಳಲಿಲ್ಲ, ಸರಕಾರ ಅದನ್ನು ಅನುಸರಿಸಿ ಎಷ್ಟು ಬೇಕಾದರೂ ತೆಗೆದುಕೊಳ್ಳಿ ಎಂದು ಹೇಳಿದೆ ಇದನ್ನು ದರೋಡೆ ಎಂದು ಕರೆಯುವುದುದಾದರೆ ಇದಕ್ಕೆ ಸರಕಾರ ಬಾಧ್ಯ. ಸುಪ್ರೀಂ ಕೋರ್ಟ್ ವಿಚಾರ ನಾನು ಹೇಳಲಿಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಒಕ್ಕಲಿಗರ ಸಂಘದವರು ಹಲವಾರು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ನನಗೆ ಗೊತ್ತಿರುವ ಹಾಗೆ ಸ್ವಲ್ಪ ಮರ್ಯಾದೆಯಾಗಿ ನಡೆಸುತ್ತಿದ್ದಾರೆ. ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಎನ್.ಆರ್.ಐ. ನವರಿಗೆ 10 ರಷ್ಟು ಮೆಡಿಕಲ್ ಕಾಲೇಜು ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಶೇಕಡ 5 ಪರ್ಸೆಂಟ್ ಅನ್ನು ಮೀಸಲಾತಿ ಮಾಡಿದ್ದಾರೆ. ಅವರು ಬರದಿದ್ದರೆ ಬೇರೆ ಯಾರಿಗಾದರೂ ಕೊಡಬಹುದೆಂದು ಹೇಳಿದ್ದಾರೆ. ಮುಕ್ಕಾಲು ಭಾಗ ಎಲ್ಲಾ ಕಾಲೇಜುಗಳಲ್ಲಿ ಆ ಶೇಕಡ 10 ರಷ್ಟು ಎನ್.ಆರ್.ಐ ಸೀಟು ಫಿಲಪ್ ಆಗಿದೆ. ಅವರಿಂದ 50,000 ಡಾಲರ್ ತೆಗೆದುಕೊಳ್ಳಬಹುದೆಂದು ಸುಪ್ರೀಂ ಕೋರ್ಟಿನವರು ಹೋದ ಸಲ ಹೇಳಿದ್ದರು. ಈ ಸಲ ಅದನ್ನು ನಿಗದಿ ಮಾಡಿಲ್ಲ. ಅವರ ಹತ್ತಿರ 3-5 ಲಕ್ಷ ಹಣವನ್ನು ಜಾಸ್ತಿ

ತೆಗೆದುಕೊಂಡಿರಬಹುದು. ಅದನ್ನು ಬಿಟ್ಟರೆ 20-30 ಲಕ್ಷವನ್ನು ಬೇರೆಯವರಿಗೆ ಯಾವ ಹೆಚ್ಚನೂ ಕೊಡುವುದಿಲ್ಲ, ಅದು ಸಾಧ್ಯವಿಲ್ಲದ ಕೆಲಸ.

ಉಪಾಧ್ಯಕ್ಷರು : ಸಾಕಷ್ಟು ವಿಷಯ ಪ್ರಸ್ತಾಪವಾಯಿತು. ಮತ್ತೆ ವಿಷಯ ಬೇರೆ ಕಡೆ ಹೋಗುತ್ತಿದೆ. ತಾವು ಮುಗಿಸಿಬಿಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಹೇಳಿರತಕ್ಕಂಥದ್ದು ಏನೆಂದರೆ, ಇವತ್ತು ಯಾವ ಒಬ್ಬ ಗ್ರಾಮಾಂತರ ಪ್ರದೇಶದ ಮಗನೂ ಸಹಿತ ಒಂದು ಮೆಡಿಕಲ್ ಸೀಟನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ನಾನು ಸನ್ಮಾನ್ಯ ಜಾಲಪ್ಪನವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರಿಗೆ ಗ್ರಾಮಾಂತರ ಪ್ರದೇಶದ ವಿಚಾರ ನಮ್ಮಲ್ಲಿ ನಡೆಯತಕ್ಕಂಥದ್ದು ಗೊತ್ತಿದೆಯೋ ಗೊತ್ತಿಲ್ಲವೋ ನನಗೆ ಗೊತ್ತಿಲ್ಲ. ಇವತ್ತು ಎಂ.ಡಿ. ಸೀಟನ್ನು ತೆಗೆದುಕೊಳ್ಳಬೇಕಾದರೆ......

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಸದನಕ್ಕೆ ಈಗ ತಾನೇ ಬಂದೆ. ವಿಷಯವನ್ನು ನಮ್ಮ ಉಪನಾಯಕರು ಹೇಳಿದರು. ಮಾನ್ಯ ಹಿರಿಯ ಸದಸ್ಯರಾಗಿರತಕ್ಕಂಥ ನಂಜೇಗೌಡರು ಈಗ ತಾನೇ ಅವರ ಭಾವನೆಯನ್ನು ಸುಪ್ರೀಂ ಕೋರ್ಟಿನ ತೀರ್ಮಾನದ ಹಿನ್ನೆಲೆಯಲ್ಲಿ ದರೋಡೆ ಮಾಡಲಿಕ್ಕೆ ಅವಕಾಶ ಇದೆ ಎಂದು ನೇರವಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅವರು ಸುಪ್ರೀಂ ಕೋರ್ಟನ್ನು ಅಟ್ಯಾಕ್ ಮಾಡಿದರು ಎಂದು ನಾನು ಅಂದುಕೊಳ್ಳುವುದಿಲ್ಲ. ಏಕೆಂದರೆ ಸುಪ್ರೀಂ ಕೋರ್ಟಿನ ನಿರ್ಣಯ ಈಗ......

ಶ್ರೀ ಹೆಚ್.ಎನ್. ನಂಜೇಗೌಡ : ನಾನು ದರೋಡೆ ಮಾಡುತ್ತಾರೆ ಎಂದು ಹೇಳಲಿಲ್ಲ, ಅವರು ದರೋಡೆ ಮಾಡುತ್ತಾರೆ ಎಂದು ಹೇಳುತ್ತಾರೆ. ಆ ದರೋಡೆಗೆ ಅವಕಾಶವಾಗುವ ಪರಿಸ್ಥಿತಿಗೆ ಸರ್ಕಾರ ಪರ್ಮಿಷನ್ ಕೊಟ್ಟಿದೆ. ನೀವು ದರೋಡೆ ಎಂದು ಕರೆದುಕೊಂಡರೆ ನಾವು ಏನು ಮಾಡುವುದಕ್ಕಾಗುತ್ತದೆ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಹೇಳಿದಿರಿ ಎಂದು ನಾನು ಹೇಳಲೇ ಇಲ್ಲ, ನೀವು ಹೇಳಲಿಲ್ಲ ಎಂದು ನಾನು ಹೇಳಿದೆ. ನೀವು ಹೇಳಲಿಲ್ಲ ಎಂದು ನಾನು ಕ್ಲಾರಿಫಿಕೇಷನ್ ತಿಳಿದುಕೊಂಡೆ. ಇದರಲ್ಲಿ ಸನ್ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ, ಯಾವುದಾದರೂ ಒಂದು ನಿರ್ದಿಷ್ಟ ಆರೋಪಣೆ ಮಾಡುವುದು ಇದ್ದರೆ ಅವರ ಹತ್ತಿರ ಮಾಹಿತಿ ಇರಬೇಕಾಗುತ್ತದೆ. ಹಾಗೆ ಇಲ್ಲದಿದ್ದರೆ ಮಾತನಾಡಿದರೆ ಅಲ್ಲಿ ಯಾವುದೋ ಬೆಳಗಾಂ ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟಿಗೆ 85 ಲಕ್ಷ ತೆಗೆದುಕೊಂಡಿದ್ದಾರೆ, ಇನ್ನೊಂದು ಕಡೆ 90 ಲಕ್ಷ ತೆಗೆದುಕೊಂಡಿದ್ದಾರೆ, ಇವೆಲ್ಲಾ ಈ ರೀತಿ ಆಪಾದನೆ ಮಾಡುವಾಗ ಅದಕ್ಕೆ ಸರ್ಕಾರದಿಂದ ನೀವು ಉತ್ತರ ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ನಿರ್ದಿಷ್ಟವಾದ ಆಪಾದನೆಯಿದ್ದರೆ ಖಾಸಗಿ ವೈದ್ಯಕೀಯ ಕಾಲೇಜುಗಳು ಇರಬಹುದು ಅಥವಾ ಇಂಜಿನಿಯರಿಂಗ್ ಕಾಲೇಜುಗಳು ಇರಬಹುದು, ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಅವರು ಇವತ್ತು ಕ್ಯಾಪಿಟೇಷನ್ ಫೀಯನ್ನು ತೆಗೆದುಕೊಳ್ಳುವುದಕ್ಕೆ ಮಿಗಿಲಾಗಿ ಇನ್ನೂ ಹೆಚ್ಚು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ ಎನ್ನುವ ಆಪಾದನೆಗಳನ್ನು ದೃಢೀಕರಿಸುವುದಕ್ಕೆ ಸಾಧ್ಯವಿದ್ದರೆ ದಯಮಾಡಿ ನಮ್ಮ ಅಧ್ಯಕ್ಷರ ಮುಖಾಂತರ ಕಳುಹಿಸಿಕೊಟ್ಟರೆ ಅದಕ್ಕೆ ಕ್ರಮ ತೆಗೆದುಕೊಳ್ಳಬಹುದು. ಅದು ಇಲ್ಲದೆ ಇದ್ದರೆ ಈ ರೀತಿ ಯಾವುದೋ ಒಂದು ಸಂಸ್ಥೆಯಲ್ಲಿ ಇರಬಹುದು, ಎಲ್ಲಾ ಸಂಸ್ಥೆಗಳ ಬಗ್ಗೆಯೂ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಚರ್ಚೆ ಮಾಡುತ್ತಿದ್ದೀರಿ, ಇಲ್ಲಿ ಒಂದು ಸಂಸ್ಥೆಯ ಹೆಸರನ್ನು ತೆಗೆದುಕೊಂಡು ಚರ್ಚೆ ಮಾಡಬೇಕಾದುದು ಇಲ್ಲ, ಅದರ ಅವಶ್ಯಕತೆ ಇಲ್ಲ, ಯಾರು ಬೇಕಾದರೂ ನಡೆಸಿಕೊಳ್ಳಲಿ. ಒಕ್ಕಲಿಗರು

ನಡೆಸಬಹುದು, ಲಿಂಗಾಯಿತರು ನಡೆಸಬಹುದು, ಇನ್ನಾವುದೋ ಸಂಸ್ಥೆ ನಡೆಸಬಹುದು. ಒಂದು ಸಂಸ್ಥೆಯ ಹೆಸರನ್ನು ತೆಗೆದುಕೊಂಡು ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಾರದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಅದನ್ನು ಕಡತದಿಂದ ತೆಗೆಯಬೇಕಾಗುತ್ತದೆ. ಇನ್ನೊಂದು ವಿಷಯ ಹೇಳುತ್ತೇನೆ, ಯಾವುದೇ ಸಂಸ್ಥೆ ನಡೆಸಲಿ, ಸುಪ್ರೀಂ ಕೋರ್ಟಿನ ಡೈರೆಕ್ಷನ್ ಆಧಾರದ ಮೇಲೆ ಸರ್ಕಾರ ಏನು ಸೂಚನೆ ಕೊಟ್ಟಿದೆಯೋ ಅದಕ್ಕೆ ವಿರುದ್ಧವಾಗಿ ನಡೆದಿರುವಂಥದ್ದು, ವಿರುದ್ಧವಾಗಿ ಇವತ್ತು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡಿರುವಂಥದ್ದು, ನಿಮ್ಮ ಹತ್ತಿರ ಆಧಾರವಿದ್ದರೆ ಆ ಸ್ಪೆಸಿಫಿಕ್ ಇನ್ಸ್ಟೆನ್ಸ್ ಅನ್ನು I am prepared to conduct an enquiry. ಅದು ಬಿಟ್ಟು ಹೀಗೆ ಒಂದು ಜಾತಿ ಸಂಸ್ಥೆಯ ಹೆಸರು ತೆಗೆದು ಮತ್ತೊಂದು ಸಂಸ್ಥೆಯ ಹೆಸರನ್ನು ತೆಗೆದು ಈ ರೀತಿ ಮಾತನಾಡುವುದಾದರೆ ಇದು ಸರಿಯಲ್ಲ, ಅದಕ್ಕೆ ಅವಕಾಶವನ್ನು ಕೊಡಬಾರದು.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ, ನಾನು ಅಪಾದನೆ........

ಉಪಾಧ್ಯಕ್ಷರು : ಅದನ್ನು ಮತ್ತೆ ರಿಪೀಟ್ ಮಾಡತಕ್ಕಂಥಾದ್ದು ಅನಾವಶ್ಯಕ. ಅದು ಬೇಕಾಗಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮುಖ್ಯಮಂತ್ರಿಗಳು ಹೇಳಿರುವುದನ್ನು ನಾನು ಹೇಳಲೇಬೇಕಾಗುತ್ತದೆ. ನಾನು ಅದಕ್ಕೇ ಹೇಳುತ್ತಿದ್ದೇನೆ.

ಉಪಾಧ್ಯಕ್ಷರು : ಸರ್ಕಾರ ತಾವು ಕೇಳತಕ್ಕಂಥ ವಿಷಯವನ್ನು ಕೂಲಂಕುಷವಾಗಿ ವಿಚಾರ ಮಾಡುವುದಕ್ಕೆ ತಯಾರಾಗಿದೆ. ಆದ್ದರಿಂದ ತಮ್ಮಲ್ಲಿ ಏನಾದರೂ ಸ್ಪೆಸಿಫಿಕ್ ಆದಂಥ ಇನ್ಸ್ಟೆನ್ಸ್ ಇದ್ದರೆ ದಯವಿಟ್ಟು ಕಳುಹಿಸಿಕೊಡಿ. ಅದನ್ನು ಎನ್ಕ್ವೈರಿ ಮಾಡತಕ್ಕಂಥ ಜವಾಬ್ದಾರಿ ಸರ್ಕಾರದ್ದು ಇದೆ. ಆದ್ದರಿಂದ ಈ ವಿಷಯ ಪ್ರಸ್ತಾಪ ಮಾಡುವುದು ಬೇಡ. ಇಲ್ಲಿಗೆ ಸಾಕು ಮಾಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಅದನ್ನೇ ಹೇಳುವುದಕ್ಕೆ ಹೊರಟೆ. ಸನ್ಮಾನ್ಯ ಮುಖ್ಯಮಂತ್ರಿಗಳು ನಾನು ಹೇಳುವಾಗ ಇದ್ದಿದ್ದರೆ ಅವರಿಗೆ ಸಂಪೂರ್ಣವಾಗಿ ಅರ್ಥವಾಗುತ್ತಿತ್ತು. ನಾನು ಯಾವುದೇ ಒಂದು ಸಂಸ್ಥೆಯನ್ನು ಅಥವಾ ಯಾವುದೇ ಒಂದು ಸಮಾಜಕ್ಕೆ ಸೇರಿರತಕ್ಕಂಥ ಸಂಸ್ಥೆಯ ಮೇಲೆ ಅದು ಸರಿಯಾಗಿ ನಡೆಯಬೇಕೆನ್ನುವ ದೃಷ್ಟಿಯಿಂದ ಹೇಳಿದೆ, ನಾನು ಆರೋಪ ಮಾಡುತ್ತಿಲ್ಲ. ಇವತ್ತು ಅಲ್ಲಿ ನಡೆಯುತ್ತಿರತಕ್ಕಂಥದ್ದು ಏನು? ಏನು ನಡೆಯುತ್ತಿದೆ ಎನ್ನುವುದನ್ನು ಸದನದ ಮುಂದೆ ಇಟ್ಟಿದ್ದೇನೆ. ಇವತ್ತು ಏನಾಗಿದೆ, ಸೊಸೈಟಿ ಆಕ್ಟ್ ಪ್ರಕಾರ ಮಾತನಾಡುವಾಗ ಈ ಸಂದರ್ಭದಲ್ಲಿ ಮಾತನಾಡುತ್ತಿರುವುದು.

ನಾನು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಸೊಸೈಟಿ ಆಕ್ಟಲ್ಲಿ ಇವತ್ತು ಒಂದು ಸಣ್ಣ ಕೋ-ಆಪರೇಟೀವ್ ಸೊಸೈಟಿ ಏನಾದರೂ ತಪ್ಪು ಮಾಡಿದರೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೀರಿ. ಇಂತಹ ಒಂದು ಆಕ್ಟ್ ಅಡಿಯಲ್ಲಿಯೇ ತಯಾರಾಗಿರತಕ್ಕ ಒಂದು ಸಂಸ್ಥೆ ತಪ್ಪು ಮಾಡಿದರೆ ನೀವು ಕ್ರಮ ತೆಗೆದುಕೊಳ್ಳುವುದರಲ್ಲಿ ಮುಂದಾಗಬೇಕು ಎಂದು ಸಲಹೆ ಹೇಳಿದ್ದೇನೆಯೇ ಹೊರತು......

ಶ್ರೀ ಹೆಚ್.ಡಿ. ದೇವೇಗೌಡ : ನಾನು ಮಾನ್ಯ ಉಪಾಧ್ಯಕ್ಷರ ಮುಖೇನ ಮಾನ್ಯ ಶಿವರಾಮೇಗೌಡರಿಗೆ ಯಾವುದೇ ಪದೇ ಪದೇ ವಿನಂತಿ ಮಾಡುತ್ತೇನೆ ಯಾವುದೇ ಸಂಸ್ಥೆ ಇರಲಿ, ಹೊರಗಡೆ ಬೀದಿಯಲ್ಲಿ ಮಾತನಾಡುವುದನ್ನು ಇಲ್ಲಿ

ಮಾತನಾಡುವುದಕ್ಕೆ ಆಗುವುದಿಲ್ಲ. If you have got specific charges, please make specific allegations.

ಇಂತಹ ಹುಡುಗ ಇಂತವರಿಂದ 50,00 ಡಾಲರ್ಗಳಿಗೆ ಬದಲಾಗಿ 75,000 ಡಾಲರ್ ತೆಗೆದುಕೊಂಡಿದ್ದಾರೆ. I have got materials ಇದರ ಬಗ್ಗೆ ನೀವು ಎನ್ಕೈರಿ ಮಾಡಿ, ಪ್ರಾರಾಸಿಕ್ಯೂಟ್ ಮಾಡಿ ಎಂದು ಹೇಳಿ, I am prepared to take that as a sacred allegation against an institution by an Hon'ble Member of this House. I am prepared to proceed further. Otherwise, don't make these baseless allegations.

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರ ಮೂಲಕ ನಾನು ಕೊನೆಯಲ್ಲಿ ಹೇಳುವುದಕ್ಕೆ ಹೊರಟಿದ್ದೆ.

ಉಪಾಧ್ಯಕ್ಷರು : ತಮಗೆ ಸಾಕಷ್ಟು ಅವಕಾಶ ಮಾಡಿಕೊಟ್ಟಿದ್ದೇನೆ, ಕುಳಿತು ಕೊಳ್ಳಿ. ನೀವು ಯಾರ ಬಗ್ಗೆಯಾದರೂ ಅಲಿಗೇಷನ್ ಮಾಡಬೇಕಾದಂತಹ ಸಂದರ್ಭದಲ್ಲಿ ನಮಗೆ ಬರವಣಿಗೆಯಲ್ಲಿ ಕೊಡಬೇಕಾಗುತ್ತದೆ. ಅದನ್ನು ತಾವು ಕೊಡಿ. ತಾವು ಏನೇನು ಅಲಿಗೇಷನನ್ನು ವ್ಯಕ್ತಿ ಬಗ್ಗೆ ಆಗಲಿ ಅಥವಾ ಇನ್ಸಿಟ್ಯೂಷನ್ ಬಗ್ಗೆ ಮಾಡಬೇಕಾಗಿದ್ದರೆ ಅಂತಹ ಸಂದರ್ಭದಲ್ಲಿ ನಮಗೆ ಬರೆದು ಕೊಡಿ. ಆಮೇಲೆ ಅದಕ್ಕೆ ಅನುಕೂಲ ಮಾಡಿಕೊಡುತ್ತೇವೆ. ಇಲ್ಲಿಗೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡತಕ್ಕ ವಿಷಯವನ್ನು ಇಲ್ಲಿಗೆ ಮುಗಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಸೊಸೈಟಿ ಆಕ್ಟ್ ವಿಚಾರ ಮಾತನಾಡುತ್ತಾ ಇರುವುದು. ನಾನು ಆಲಿಗೇಷನ್ ಮಾಡುತ್ತಿಲ್ಲ. ಸೊಸೈಟಿ ಆಕ್ಟ ಪ್ರಕಾರ ಚುನಾವಣೆ ನಡೆಸಬೇಕು ಎಂದು ಹೇಳುತ್ತಿರುವುದು. ನಾನು ಯಾರ ಮೇಲೂ ಸಹ ಆರೋಪ ಮಾಡುತ್ತಿಲ್ಲ. ನಾನು ಕ್ಯಾಪಿಟೇಷನ್ ವಿಷಯ ಕೊನೆಯಲ್ಲಿ ಹೇಳುತ್ತಿರುವುದು ಅಧ್ಯಕ್ಷರೇ ದಯಮಾಡಿ ಕೇಳಿ ನಾನು ಕೈಮುಗಿದು ಕೇಳುತ್ತಿದ್ದೇನೆ. ನಾನು ಕೇಳುತ್ತಿರುವುದು, ನನ್ನ ಆರೋಪ ಇರತಕ್ಕದ್ದು ಅಲ್ಲಿ ಚುನಾವಣೆ ನಡೆಸುತ್ತಿಲ್ಲ, ಒಂದು ವರ್ಷ ಆಗಿದೆ. ಒಂದು ವರ್ಷದಲ್ಲಿ ಚುನಾವಣೆ ನಡೆಯಬೇಕಾಗಿತ್ತು. ಇವತ್ತು ಹೊಸ ಮೆಂಬರ್ಗಳಿಗೆ ಅವಕಾಶ ಕೊಡುತ್ತಿಲ್ಲ, 94000 ಅರ್ಜಿ ಹಾಕಿ ಜನ ಕಾಯುತ್ತಾ ಕುಳಿತಿದ್ದಾರೆ. ಅವರಿಗೆ ಮೆಂಬರ್ ಶಿಪ್ ಫೀಸ್ ಕಟ್ಟಿಸಿಕೊಂಡು ವೋಟಿಂಗ್ ಪವರ್ ಕೊಟ್ಟಿಲ್ಲ, ಅದನ್ನು ಸರಿಪಡಿಸಿ ಎಂದು ನಾನು ಕೇಳುತ್ತಿರುವುದು. ನಾನು ಕ್ಯಾಪಿಟೇಷನ್ ಶುಲ್ಕದ ಬಗ್ಗೆ ಕೊನೆಯಲ್ಲಿ ಹೇಳಿದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಶಿವರಾಮೇಗೌಡರು ಸ್ಪೆಸಿಫಿಕ್ ಆಗಿ ಒಂದು ಪ್ರಶ್ನೆ ಹಾಕಿ ಇನ್ಫರ್ಮೇಷನ್ ತೆಗೆದುಕೊಳ್ಳಿ. ಏಕೆಂದರೆ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ಕೆಳಗಡೆ ಅದಕ್ಕೆ ಉತ್ತರ ರೆವಿನ್ಯೂ ಮಿನಿಸ್ಟರ್ ಕೊಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕ್ಯಾಪಿಟೇಷನ್ ಶುಲ್ಕದ ವಿಚಾರ ಜನರಲ್ ಆಗಿ ಹೇಳಿದ್ದುದು. ಅದನ್ನು ಬೇರೆಯದಕ್ಕೆ ತೆಗೆದುಕೊಂಡಿದ್ದಾರೆ. ನಾನು ಕೇಳುತ್ತಿರುವುದು ಸೊಸೈಟಿ ಆಕ್ಟ್ ಪ್ರಕಾರ ಚುನಾವಣೆ ನಡೆಸುತ್ತಿಲ್ಲ ಎಂದು. ಮತ್ತು ಮೆಂಬರ್ ಶಿಪ್ಗೆ ಅವಕಾಶ ಕೊಡುತ್ತಿಲ್ಲ, ವೋಟಿಂಗ್ ಪವರ್ ಕೊಡುತ್ತಾ ಇಲ್ಲ, ದಯವಿಟ್ಟು ಕೊಡಿಸಿ, ಅದರ ಮೇಲೆ ಕ್ರಮ ತೆಗೆದುಕೊಳ್ಳಿ ಮತ್ತು ಅಲ್ಲಿ ನಡೆಯುತ್ತಿರತಕ್ಕ ಕಾಮಗಾರಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ, ಅದರ ಬಗ್ಗೆ ತನಿಖೆ ನಡೆಸಿ..

ಉಪಾಧ್ಯಕ್ಷರು : ಕನಿಷ್ಠ ತಾವು ಈ ವಿಚಾರ ತಿಳಿದುಕೊಳ್ಳಬೇಕು. ನಾನು ನಿಂತುಕೊಂಡು ಸಮಯದಲ್ಲಿ ತಾವು ಕುಳಿತುಕೊಳ್ಳಬೇಕು. ಈಗ ತಮ್ಮ ವಿಚಾರಗಳನ್ನು

ಪ್ರಸ್ತಾಪ ಮಾಡಿದ್ದೀರಿ. ಸರ್ಕಾರ ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕೋ ಅದರ ಬಗ್ಗೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿದ್ದಾರೆ. ಏನು ವಿಷಯ ತಮ್ಮ ಹತ್ತಿರ ಇದ್ದರೂ ಬರೆದುಕಳುಹಿಸಿ. ಇನ್ನು ಈ ವಿಷಯವನ್ನು ಇಲ್ಲಗೇ ಮುಗಿಸೋಣ. 69ರ ನಿಯಮದ ಮೇರೆಗೆ ಪ್ರಮುಖವಾದ ವಿಷಯ ಇದೆ. ಈಗ ಸಾಕಷ್ಟು ಅವಕಾಶವನ್ನು ನಿಮಗೆ ಕೊಟ್ಟಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಕನ್ಕ್ಲೂಡ್ ಮಾಡಿಲ್ಲ.

ಉಪಾಧ್ಯಕ್ಷರು : ತಾವು ಒಂದೂಕಾಲು ಗಂಟೆ ಪ್ರಸ್ತಾಪ ಮಾಡಿದ್ದೀರಿ. ಇಲ್ಲಿಗೆ ಸಾಕು. ಮತ್ತೆ ಹೇಳತಕ್ಕದ್ದು ಅನಾವಶ್ಯಕ. ಇವತ್ತಿಗೆ ಚರ್ಚೆ ಮುಗಿಯಿತು. 69ರ ನಿಯಮದ ಪ್ರಕಾರ ಇನ್ನೊಂದು ವಿಷಯ ಪ್ರಸ್ತಾಪ ಮಾಡುವುದು ಇರುವುದರಿಂದ, ಸಮಯ ಇದ್ದರೆ ಅನಂತರ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಮತ್ತೆ ಅವಕಾಶ ಕೊಡುತ್ತೀರಾ?

ಉಪಾಧ್ಯಕ್ಷರು : ಇವತ್ತು ಆಗುವುದಿಲ್ಲ, ನಾಳೆ ನೋಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಧನ್ಯವಾದ ಹೇಳುತ್ತೇನೆ. ನಾನು ಹೇಳಿರುವ ವಿಚಾರಗಳನ್ನು ಸರ್ಕಾರದವರು ಗಮನದಲ್ಲಿಟ್ಟುಕೊಳ್ಳುತ್ತಾರೆಂದು ಹೇಳಿ, ನನಗೆ ಇಷ್ಟು ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ಹಾಗೂ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಇವತ್ತಿನ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯನ್ನು ಮುಗಿಸಿ ನಾಳೆಗೆ ಅದನ್ನು ಮತ್ತೆ ಮುಂದುವರೆಸೋಣ. ಇವತ್ತು 69ನೇ ನಿಯಮದ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಪ್ರಸ್ತಾವನೆಗಳನ್ನು ಕಳಿಸಿದ್ದಾರೆ. ಮೊದಲು ಸನ್ಮಾನ್ಯ ಯಡಿಯೂರಪ್ಪನವರು ಪ್ರಾರಂಭ ಮಾಡಬೇಕು ಅಥವಾ ರುಕ್ಮಯ್ಯ ಪೂಜಾರಿ ಅವರು, ಶಂಕರಲಿಂಗೇಗೌಡರು, ಅಥವಾ ಅರಗ ಜ್ಞಾನೇಂದ್ರ, ತಾವು ಪ್ರಾರಂಭ ಮಾಡುತ್ತೀರಾ. ಯು.ಬಿ. ಬಣಕಾರ್ ಹಾಗೂ ವಾಟಾಳ್ ನಾಗರಾಜ್ರವರ ಹೆಸರುಗಳೂ ಇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನನ್ನ ಹೆಸರೂ ಇರಬೇಕು.

ಉಪಾಧ್ಯಕ್ಷರು : ಇದರಲ್ಲಿ 6 ಹೆಸರುಗಳು ಇವೆ. ಅದರಲ್ಲಿ ನಿಮ್ಮ ಹೆಸರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಾರ್ಟಿಯವರೇ ಹೆಣ್ಣು ಮಕ್ಕಳನ್ನು ಬಿಟ್ಟು ಹೋಗುತ್ತಾರೆ ಎಂದರೆ ಲೆಕ್ಕ ಹಾಕಿ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ನೋಟೀಸ್ನಲ್ಲಿ ಹೆಸರು ಕಳಿಸಿದ್ದೇನೆ.

ನಿಯಮ 69ರ ಮೇರೆಗೆ

ರಾಜ್ಯದಲ್ಲಿ ವಿಯುಚ್ಛಕ್ತಿ ಅಭಾವದಿಂದಾಗಿ ಜನರಿಗೆ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀಮತಿ ಪ್ರಮೀಳಾ ನೇಸರ್ಗಿ : ಸನ್ಮಾನ್ಯ ಉಪಾಧ್ಯಕ್ಷರೆ, 69ನೇ ನಿಯಮದ ಪ್ರಕಾರ ಇವೊತ್ತಿನ ದಿವಸ ರಾಜ್ಯದಲ್ಲಿ ವಿದ್ಯುತ್‌ಅಭಾವದಿಂದಾಗಿ ಜನರಿಗೆ ಉಂಟಾಗಿರುವ ತೊಂದರೆಯು ಸಾರ್ವಜನಿಕ ಮಹತ್ವದ ಜರೂರು ವಿಷಯವಾಗಿದೆ.